ಕರ್ನಾಟಕ ಸಾಹಿತ್ಯ ಅಕಾಡೆಮಿ

# ನಾಡೋಜ ಡಾ.ಕೆ.ಎಸ್.ನಿಸಾರ್ ಅಹಮದ್

ಡಾ.ರಾಮಚಂದ್ರ ಗಣಾಪುರ



ಅಕಾಡೆಮಿ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ

# ನಾಡೋಜ ಡಾ. ಕೆ.ಎಸ್. ನಿಸಾರ್ ಅಹಮದ್


ಪ್ರಧಾನ ಸಂಪಾದಕರು
ಪ್ರೊ. ಮಾಲತಿ ಪಟ್ಟಣಶೆಟ್ಟಿ

ಸಂಪಾದಕರು
ಪ್ರೊ. ಕೆ.ಎಸ್. ಮಧುಸೂದನ

ಲೇಖಕರು
ಡಾ. ರಾಮಚಂದ್ರ ಗಣಾಪುರ



ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-560 002.
ದೂರವಾಣಿ:080-22211730/22106460
www.karnatakasahithyaacademy.org
Email: sahithya.academy@gmail.com

**NADOJA Dr. K.S. NISAR AHAMED**
**Written by : Dr. Ramachandra Ganapura**
**Editor: Prof. K.S. Madhusudana**

Published by
**C.H.Bhagya**
Registrar
Karnataka Sahithya Academy
Kannada Bhavana
J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ

| | |
|---|---|
| ಪುಟಗಳು | : xii+೯೪ |
| ಬೆಲೆ | : ₹ ೧೦೦/- |
| ಮೊದಲ ಮುದ್ರಣ | : ೨೦೧೬ |
| ಪ್ರತಿಗಳು | : ೫೦೦ |
| ಮುಖಪುಟ ವಿನ್ಯಾಸ | : ಅರುಣ್ ಕುಮಾರ್ ಜಿ |
| Pages | : xii+94 |
| Price | : ₹ 100/- |
| First impression | : 2016 |
| Copies | : 500 |

**ಪ್ರಕಾಶಕರು:**
**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-560 002.

**ಮುದ್ರಕರು:**
ಸರ್ಕಾರಿ ಕೇಂದ್ರ ಮುದ್ರಣಾಲಯ
ಆರ್.ವಿ.ಕಾಲೇಜ್ ಅಂಚೆ
8ನೇ ಮೈಲಿ, ಮುತ್ತುರಾಯನಗರ
ಜ್ಞಾನಭಾರತಿ, ಮೈಸೂರು ರಸ್ತೆ
ಬೆಂಗಳೂರು-560 059.
080- 28483133 / 28484518

## ಅಧ್ಯಕ್ಷೀಯ ನುಡಿ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ಥಾಪಿತವಾಗಿದ್ದು 1961ರಲ್ಲಿ. ಅದು ಭಾಷಾವಾರು ಪ್ರಾಂತ ರಚನೆಯಾಗಿ ನಾಡು ನುಡಿ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರ ಕುತೂಹಲ, ಅಭಿಮಾನ, ಪ್ರೀತಿ ಸ್ಫೋಟಗೊಂಡ ಸಮಯ. ನಾಡು ನುಡಿ, ಸಂಸ್ಕೃತಿಗಳನ್ನು ಹೊಸದಾಗಿ ಕಟ್ಟಿ ಬೆಳೆಸುವ ಹುಮ್ಮಸ್ಸಿನ ದಿನಗಳಾಗಿದ್ದವು ಅವು. ಜನರ ಬೇಡಿಕೆಗೆ ಸ್ಪಂದಿಸಿ ಅಂದಿನ ಸರಕಾರವು ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಅಂದು ಶಿಕ್ಷಣ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಎಸ್.ಆರ್. ಕಂಠಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದ್ದನ್ನು ನಾವು ಇಂದು ಕೃತಜ್ಞತೆಗಳೊಂದಿಗೆ ನೆನೆಯಬೇಕು. ಆನಂತರದ ಅಧ್ಯಕ್ಷತೆಯನ್ನು ಶ್ರೀ ಕೆ.ವಿ. ಶಂಕರಗೌಡ, ಶ್ರೀ ಕೆ.ಎಚ್. ಶ್ರೀನಿವಾಸ್ ಹಾಗೂ ಶ್ರೀ ಆರ್. ಗುಂಡೂರಾವ್‌ರಂಥ ಹಿರಿಯ ರಾಜಕಾರಣಿಗಳು ಸಾಹಿತ್ಯ ಅಕಾಡೆಮಿಯ ಸೂತ್ರಧಾರಿತ್ವ ವಹಿಸಿ ಸಮರ್ಥವಾಗಿ ಮುನ್ನಡೆಸಿದರು.

ಕನ್ನಡದ ದಿಗ್ಗಜ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯರು, ಶ್ರೀರಂಗರು ಅಕಾಡೆಮಿಗೆ ಭದ್ರಬುನಾದಿ ಹಾಕಲು ಪ್ರಯತ್ನಿಸಿದರು. ನಂತರ ಅಧ್ಯಕ್ಷರಾದ ಡಾ. ಹಾ.ಮಾ. ನಾಯಕ, ಡಾ. ನಿಸಾರ್ ಅಹಮದ್ ಮತ್ತು ಡಾ. ಜಿ.ಎಸ್. ಶಿವರುದ್ರಪ್ಪ ಅವರುಗಳು ಅಕಾಡೆಮಿಗೆ ಖಚಿತವಾದ ರೂಪರೇಷೆಗಳ ಚೌಕಟ್ಟನ್ನು ನಿರ್ಮಿಸಿದರು. ಸಮಯದ ಬೇಡಿಕೆಗಳಿಗನುಸಾರವಾಗಿ ಹೊಸ ಯೋಜನೆಗಳನ್ನು ಕೈಗೊಂಡರು. ಅವರು ಪ್ರಕಟಿಸಿದ ಉತ್ತಮೋತ್ತಮ ಗ್ರಂಥಗಳು ಇಂದಿಗೂ ಬೇಡಿಕೆಯಲ್ಲಿವೆ. ನಂತರ ಅಧ್ಯಕ್ಷ ಸ್ಥಾನ ಸ್ವೀಕರಿಸಿದ ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಶಾಂತರಸ ಮತ್ತು ಡಾ. ಗುರುಲಿಂಗ ಕಾಪಸೆಯವರಂಥ ಹಿರಿಯ ಸುಪ್ರಸಿದ್ಧ ಸಾಹಿತಿಗಳು ತಮ್ಮ ನಿಷ್ಠೆ, ಪರಿಶ್ರಮಗಳಿಂದಾಗಿ ಅಕಾಡೆಮಿಗೆ ಘನತೆ, ಗೌರವ ತಂದುಕೊಟ್ಟರು. ಡಾ. ಗೀತಾ ನಾಗಭೂಷಣ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯರಂಥ ಸಾಹಿತಿ, ವಿದ್ವಾಂಸರು ಸಾಹಿತ್ಯ ಅಕಾಡೆಮಿಯ ತೇರನ್ನು ಮುನ್ನಡೆಸಿದರು. ಇವರೆಲ್ಲರ ಸೇವೆಯನ್ನು ಕೃತಜ್ಞತೆಗಳೊಂದಿಗೆ ಸ್ಮರಿಸುತ್ತೇನೆ.

ನನ್ನ ಅವಧಿಯಲ್ಲಿ (2014–17) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವದ ಉದ್ಘಾಟನೆಯನ್ನು ಶಿವಮೊಗ್ಗೆಯಲ್ಲಿ ಆಗಸ್ಟ್ 3, 2014 ರಂದು ಸಕಲ ಸಡಗರಗಳೊಂದಿಗೆ ನೆರವೇರಿಸಲಾಯ್ತು.

ಡಾ. ಕೆ.ವಿ. ನಾರಾಯಣರಂಥ ಹಿರಿಯ ಸಾಹಿತಿ, ವಿದ್ವಾಂಸರು ಈ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಇದೇ ವೇದಿಕೆಯಲ್ಲಿ ಡಾ. ಗುರುಲಿಂಗ ಕಾಪಸೆ, ಡಾ. ಗಿರಡ್ಡಿ ಗೋವಿಂದರಾಜ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರನ್ನು ಸನ್ಮಾನಿಸಲಾಯ್ತು (ಡಾ. ನಿಸಾರ್ ಅಹಮದ್ ಮತ್ತು ಡಾ. ಗೀತಾ ನಾಗಭೂಷಣ ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯ್ತು). ಆ ನಂತರ ಮುಂದಿನ ಎರಡು ವರ್ಷದ ಅವಧಿಯಲ್ಲಿ ಸುವರ್ಣ ಸಂಭ್ರಮದ ಯೋಜನೆಯಡಿ ಕವಿಗೋಷ್ಠಿ, ಕಮ್ಮಟ ಹಾಗೂ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗಿತ್ತು.

ಸುವರ್ಣ ಮಹೋತ್ಸವದ ಅಂಗವಾಗಿ ಸಮಾರೋಪ ಸಂದರ್ಭದಲ್ಲಿ ನಾಲ್ಕು ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದಿದ್ದೇವೆ.

1. ಸಾಹಿತ್ಯ ಅಕಾಡೆಮಿಯ ಹಿಂದಿನ ಹದಿನೆಂಟು ಜನ ಅಧ್ಯಕ್ಷರ ಪರಿಚಯ, ಸಾಹಿತ್ಯ ಸಾಧನೆ ಮತ್ತು ಸಾಹಿತ್ಯ ಅಕಾಡೆಮಿಗೆ ಅವರ ಸೇವೆ ಕುರಿತ ಪುಸ್ತಕ ಮಾಲೆಯನ್ನು ಪ್ರಕಟಿಸಿದ್ದೇನೆ.
2. ಕಳೆದ ಅರ್ಧ ಶತಮಾನದ ಕಾಲಾವಧಿಯಲ್ಲಿ ಸಾಹಿತ್ಯ ಅಕಾಡೆಮಿಯ ಕೆಲಸ ಕಾರ್ಯಗಳು ಜನಮನದ ಮೇಲೆ ಬೀರಿದ ಪರಿಣಾಮ ಕುರಿತ "ಪರಿಣಾಮ ಅಧ್ಯಯನ" ಗ್ರಂಥವನ್ನು ಪ್ರಕಟಿಸಿದ್ದೇನೆ.
3. ಸಾಹಿತ್ಯ ಅಕಾಡೆಮಿಯನ್ನು ಕುರಿತ ಸಾಕ್ಷ್ಯಚಿತ್ರ ನಿರ್ಮಾಣ.
4. ಕನ್ನಡ ಸಾಹಿತ್ಯ ಸಂವೇದನೆ ಕುರಿತ ರೂಪಕದ ರಂಗಪ್ರಯೋಗ.

ಸುವರ್ಣ ಮಹೋತ್ಸವದ ಉದ್ಘಾಟನೆ ಹಾಗೂ ಈ ಮಹೋತ್ಸವದ ನೆನಪಿಗಾಗಿ ಹಮ್ಮಿಕೊಂಡಿದ್ದ ಸರಣಿ ಕಾರ್ಯಕ್ರಮಗಳಲ್ಲದೆ, ಈಗ ಸಮಾರೋಪ ಸಮಾರಂಭಗಳಲ್ಲಿ ಪಾಲ್ಗೊಂಡ ಎಲ್ಲ ಸಾಹಿತಿಗಳಿಗೆ, ವಿದ್ವಾಂಸರಿಗೆ, ಕಲಾವಿದರಿಗೆ ಮತ್ತು ಸುವರ್ಣ ಮಹೋತ್ಸವದ ಎಲ್ಲ ಕಾರ್ಯಕ್ರಮಗಳಿಗೆ ಸಲಹೆ ನೀಡಿದ ತಜ್ಞ ಸಾಹಿತಿಗಳಾದ ಡಾ. ಹಂ.ಪ. ನಾಗರಾಜಯ್ಯ, ಡಾ. ಕೆ.ವೈ. ನಾರಾಯಣಸ್ವಾಮಿ ಮತ್ತು ಅಕಾಡೆಮಿಯ ಸದಸ್ಯರಾದ ಶ್ರೀಮತಿ ಬಿ.ಟಿ. ಜಾಹ್ನವಿ ಅವರುಗಳನ್ನು ಮನಃಪೂರ್ವಕ ನೆನೆಯುತ್ತೇನೆ. ನಮ್ಮ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ ಮತ್ತು ಜಂಟಿ

ನಿರ್ದೇಶಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಅವರುಗಳಿಗೆ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಎಲ್ಲ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನದಲ್ಲಿ ತರಲು ಅಪಾರ ಪರಿಶ್ರಮ ವಹಿಸಿದ ರಿಜಿಸ್ಟ್ರಾರರಾದ ಶ್ರೀಮತಿ ಸಿ.ಎಚ್. ಭಾಗ್ಯ ಅವರಿಗೂ ಹೃದಯಪೂರ್ವಕ ವಂದನೆಗಳು. ಸಾಹಿತ್ಯ ಅಕಾಡೆಮಿಯ ಸಿಬ್ಬಂದಿಗಳಾದ ಶ್ರೀಮತಿ ಟಿ. ಸೌಭಾಗ್ಯ, ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ವಿ. ಹರೀಶ್‌ಕುಮಾರ್, ಶ್ರೀ ಕೃಷ್ಣಪ್ಪ ಡಿ., ಶ್ರೀ ಹರೀಶ್ ಮತ್ತು ಶ್ರೀಮತಿ ಎಸ್.ಜಿ. ಸುಚಿತ್ರ ಇವರೆಲ್ಲರೂ ಕೈಜೋಡಿಸದಿದ್ದರೆ ಇಂಥ ಬೃಹತ್ ಕಾರ್ಯಕ್ರಮಗಳು ಅಸಾಧ್ಯ. ಇವರೆಲ್ಲರ ನಿಷ್ಠೆ, ಪರಿಶ್ರಮಗಳನ್ನು ಮನಃಪೂರ್ವಕ ನೆನೆಯುತ್ತೇನೆ. ಹಾಗೆಯೇ ಮುದ್ರಣ ಕಾರ್ಯ ನಿರ್ವಹಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರು ಹಾಗೂ ಅಧಿಕಾರಿ/ ಸಿಬ್ಬಂದಿಗಳೆಲ್ಲರನ್ನೂ ನಾನಿಲ್ಲಿ ಕೃತಜ್ಞತೆಗಳೊಂದಿಗೆ ನೆನೆಯುತ್ತೇನೆ.

2016 **(ಮಾಲತಿ ಪಟ್ಟಣಶೆಟ್ಟಿ)**

ಅಧ್ಯಕ್ಷರು

# ಸಂಪಾದಕೀಯ

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಗೆ ಇದು ಅಪರಂಜಿ ವರುಷ. ಐವತ್ತು ವರುಷ ತುಂಬಿದ ಈ ಸಾರ್ಥಕ ಸಾಧನೆಯ ಸಂದರ್ಭದಲ್ಲಿ ಸಂಸ್ಥೆಯು ತನ್ನನ್ನು ಈ ಎತ್ತರಕ್ಕೆ ಬೆಳೆಸಿದ ಹಿಂದಿನ ಅಧ್ಯಕ್ಷರುಗಳ ಸಾಧನೆಗಳನ್ನು ಕುರಿತು ಹೊತ್ತಗೆಗಳನ್ನು ಹೊರತರುತ್ತಿರುವುದು ಸಂತಸದ ಸಂಗತಿ. ಆರಂಭಕ್ಕೆ ಮಂತ್ರಿ ಮಹೋದಯರುಗಳು ಅಧ್ಯಕ್ಷರಾಗಿದ್ದುಕೊಂಡು ಸಂಸ್ಥೆಯನ್ನು ಮುನ್ನೋಟದಿಂದ ನಡೆಸಿದರು. ನಂತರ ಅಧ್ಯಕ್ಷರ ಸ್ಥಾನಕ್ಕೆ ನಾಡಿನ ಹಿರಿಯ ಸಾಹಿತಿ ಮುತ್ಸದ್ದಿಗಳನ್ನು ಆಯ್ಕೆ ಮಾಡುವ ಕ್ರಮ ಜಾರಿಗೆ ಬಂತು. ಹೀಗಾಗಿ ಈ ಪ್ರತಿಷ್ಠಿತ ಅಕಾಡೆಮಿಗೆ ಇದುವರೆಗೆ 18 ಮಂದಿ ಅಧ್ಯಕ್ಷರಾಗಿ ಅಕಾಡೆಮಿಯನ್ನು ಭಾರತ ದೇಶದ ಗಮನಾರ್ಹ ಸಾಹಿತ್ಯ ಸಂಸ್ಥೆಯನ್ನಾಗಿ ಬೆಳೆಸಿದ್ದಾರೆ.

'ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ' ಎನ್ನುವ ನಾಮನಿರ್ದೇಶನದಡಿ ಈ ಪುಸ್ತಕಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿದೆ. ಒಂದು ಸಂಸ್ಥೆ ನಾಡಿನೊಳಗೆ ಸರ್ವಾಂಗೀಣವಾಗಿ, ಸಮೃದ್ಧವಾಗಿ ಬೆಳೆದು ನಾಡಿನ ಜನರ ಮೇಲೆ ದೀರ್ಘಕಾಲಿಕ ಪ್ರಭಾವವನ್ನು ಬೀರಬೇಕಾದರೆ ಅದರ ಮುಂಚೂಣಿಯಲ್ಲಿ ನಿಂತು ನಡೆಸುವ ಅಧ್ಯಕ್ಷೀಯ ಸ್ಥಾನದ ಪಾತ್ರ ಮಹತ್ವವಾದದ್ದು. ಹಾಗೆಯೇ ಒಂದು ಸಂಸ್ಥೆಯ ಇತಿಹಾಸದಲ್ಲಿ ಐವತ್ತು ವರ್ಷಗಳ ಕಾಲಮಾನ ಕೂಡ ಒಂದು ಮೈಲಿಗಲ್ಲು. ಹೀಗಾಗಿ ಇಂತಹ ಸಂದರ್ಭದಲ್ಲಿ ಅಕಾಡೆಮಿಯನ್ನು ಸಮರ್ಥವಾಗಿ ನಡೆಸಿದ ಹಿಂದಿನ ಅಧ್ಯಕ್ಷರುಗಳಾಗಿದ್ದ ನಾಡಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯ, ಶ್ರೀ ಆದ್ಯ ರಂಗಾಚಾರ್ಯ, ಶ್ರೀ ಹಾ.ಮಾ. ನಾಯಕ, ಪ್ರೊ. ಕೆ.ಎಸ್. ನಿಸಾರ್ ಅಹಮದ್, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಗುರುಲಿಂಗ ಕಾಪಸೆ, ಡಾ. ರಾ.ಶಿ. (ಎಂ. ಶಿವರಾಂ), ಡಾ. ಶಾಂತರಸ, ನಾಡೋಜ ಗೀತಾ ನಾಗಭೂಷಣ, ಪ್ರೊ. ಎಂ.ಎಚ್. ಕೃಷ್ಣಯ್ಯ ಮುಂತಾದವರುಗಳ ಸಾಧನೆಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸುತ್ತಿರುವುದು ಸೂಕ್ತವೂ, ಸಮಂಜಸವೂ ಆಗಿದೆ. ಈ ಕೃತಿಗಳನ್ನು ಶ್ರದ್ಧೆಯಿಂದ ರಚಿಸಿದ ನಾಡಿನ ವಿವಿಧ ಭಾಗದ ಬರಹಗಾರರಾದ ಶಾ.ಮಂ. ಕೃಷ್ಣರಾವ್, ಕೆ.ಎಂ. ವಿಜಯಲಕ್ಷ್ಮಿ, ಡಾ. ಪದ್ಮಾಶೇಖರ್, ಡಾ. ರಾಮಚಂದ್ರ ಗಣಾಪುರ, ಶೂದ್ರ ಶ್ರೀನಿವಾಸ್, ಎಸ್. ಮಾರುತಿ, ಪ್ರೊ. ಮಲ್ಲಿಕಾರ್ಜುನ ಹಿರೇಮಠ, ಡಾ. ಗುರುಪಾದ ಮರಿಗುದ್ದಿ, ಡಾ. ಪ್ರಭು

ಖಾನಾಪುರೆ, ಡಾ. ಪ್ರಮೀಳಾ ಮಾಧವ್, ಡಾ. ಎಲ್.ಜಿ. ಮೀರಾ ಈ ಎಲ್ಲರಿಗೂ ಕೃತಜ್ಞತೆಗಳು.

ಈ ಜವಾಬ್ದಾರಿಯನ್ನು ನನಗಿತ್ತು ಈ ಕಾರ್ಯದಲ್ಲಿ ಸಂಪೂರ್ಣ ನೆರವು ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ, ರಿಜಿಸ್ಟ್ರಾರ್ ಸಿ.ಎಚ್. ಭಾಗ್ಯ ಹಾಗೂ ಅಕಾಡೆಮಿ ಸಿಬ್ಬಂದಿ ವರ್ಗಕ್ಕೆ ನನ್ನ ನಮ್ರ ಪ್ರಣಾಮಗಳು.

ಪ್ರೊ. ಕೆ.ಎಸ್. ಮಧುಸೂದನ
ಸಂಪಾದಕರು

# ಅರಿಕೆ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸುವರ್ಣ ಸಂಭ್ರಮ ಆಚರಣೆಯ ಅಪೂರ್ವ ಘಳಿಗೆಯಲ್ಲಿದೆ. ಈ ಸಂದರ್ಭದಲ್ಲಿ ಅನೇಕರು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಅಹರ್ನಿಶಿ ದುಡಿದು ಶ್ರೀಮಂತಗೊಳಿಸಿದ್ದಾರೆ. ಸಾಹಿತ್ಯ ಕ್ಷೇತ್ರವನ್ನು ತಮ್ಮ ಅಪಾರ ಕೊಡುಗೆಯ ಮೂಲಕ ಶ್ರೀಮಂತಗೊಳಿಸಿದ ಅಕಾಡೆಮಿಯ ಈವರೆಗಿನ ಅಧ್ಯಕ್ಷರುಗಳ ಬದುಕು-ಬರಹದ ಕುರಿತಾಗಿ ಹೊತ್ತಿಗೆಯನ್ನು ತರುತ್ತಿರುವುದು ಅತ್ಯಂತ ಅಭಿನಂದನಾರ್ಹವಾದುದು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಅಕಾಡೆಮಿಯನ್ನು ಕಟ್ಟುವಲ್ಲಿ ಅನನ್ಯ ಕೊಡುಗೆಯನ್ನು ನೀಡಿದ ಪ್ರೊ.ಕೆ.ಎಸ್.ನಿಸಾರ್ ಅಹಮದ್‌ರವರ ಬದುಕು-ಬರಹ ಹಾಗೂ ಅವರು ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವಧಿಯ ರಚನಾತ್ಮಕ ಕಾರ್ಯಗಳ ಕುರಿತಾಗಿ ನನಗೆ ಬರೆಯಲು ಸೂಚಿಸಿದ್ದಕ್ಕಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಅನೇಕ ಧನ್ಯವಾದಗಳು. ನಾಡಿನ ಹೆಮ್ಮೆಯ ಲೇಖಕ, ನಿತ್ಯೋತ್ಸವದ ಕವಿಗಳೆಂದೇ ಪ್ರಸಿದ್ಧರಾದ ಪ್ರೊ: ಕೆ.ಎಸ್.ನಿಸಾರ್ ಅಹಮದ್‌ರವರ ಜೀವನ ಹಾಗೂ ಸಾಧನೆಯನ್ನು ಕರಿಯನ್ನು ಕನ್ನಡಿಯಲ್ಲಿ ಹಿಡಿಸಿದಂತೆ ಸಂಕ್ಷಿಪ್ತವಾಗಿ, ಸಿಂಹಾವಲೋಕನ ಕ್ರಮದಿಂದ ಹಿಡಿದಿಡುವ ವಿನಮ್ರ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ.

ನಿಸಾರ್ ಅಹಮದ್ ಅವರು ತಮ್ಮ ಬದುಕು ಹಾಗೂ ಬರಹಗಳಿಂದಕನ್ನಡ ಸಾರಸ್ವತ ಲೋಕದಲ್ಲಿ ಗಮನ ಸೆಳೆದ ವಿಶಿಷ್ಟ ವ್ಯಕ್ತಿತ್ವದವರು. ಇಂತಹ ಅಪೂರ್ವಬರಹಗಾರರಾದ ನಿಸಾರ ಅಹಮದ್‌ರವರು ಸವೆಸಿದ ಹೆಜ್ಜೆಗಳನ್ನು ಸಂಕ್ಷಿಪ್ತವಾಗಿ ದಾಲಿಸಲಾಗಿದೆ. ಅವರ ಜೀವನ ವಿಧಾನವನ್ನು ಸಹೃದಯರು ಓದಿ ಮೆಚ್ಚಿದರೆ ಅಕಾಡೆಮಿಯ ಶ್ರಮ ಸಾರ್ಥಕವೆಂದು ಭಾವಿಸಿದ್ದೇನೆ.

ಈ ವಿಷಯದ ಕುರಿತು ಬರೆಯಲು ಸೂಚಿಸಿ, ಅರ್ಥಪೂರ್ಣ ಅವಕಾಶ ಒದಗಿಸಿಕೊಟ್ಟಂತಹ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಪ್ರೊ.ಮಾಲತಿ ಪಟ್ಟಣಶೆಟ್ಟಿಯವರಿಗೂ ಸದಸ್ಯರಾದ ಪ್ರೊ.ಶಿವಕುಮಾರ

ನಾಗವಾರರವರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಸಿ.ಎಚ್.ಭಾಗ್ಯರವರಿಗೂ ಹಾಗೂ ಅಕಾಡೆಮಿಯ ಸಮಸ್ತ ಸದಸ್ಯರಿಗೂ ನನ್ನ ಅನಂತ ಧನ್ಯವಾದಗಳು.

**ಡಾ.ರಾಮಚಂದ್ರ ಗಣಾಪುರ**
ಅಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ
ಗುಲಬರ್ಗಾ ವಿಶ್ವವಿದ್ಯಾಲಯದ
ಸ್ನಾತಕೋತ್ತರ ಕೇಂದ್ರ, ಹಾಲಹಳ್ಳಿ, ಬೀದರ.585401.
ಮೊ.9740313210.
Email : rbganapur@gmail.com.

## ಪರಿವಿಡಿ

ಅಧ್ಯಕ್ಷೀಯ ನುಡಿ iii

ಸಂಪಾದಕೀಯ vii

ಅರಿಕೆ ix

1. ನಾಡೋಜ ಡಾ. ಕೆ.ಎಸ್. ನಿಸಾರ್ ಅಹಮದ್ 1–5
2. ಪ್ರೊ. ಕೆ.ಎಸ್. ನಿಸಾರ್ ಅಹಮದ್ ಅವರ ಜೀವನ 6–9
3. ಸಾಹಿತ್ಯಕ ಹಿನ್ನೆಲೆ ಹಾಗೂ ಪರಿಸರ 10–11
4. ವೃತ್ತಿ ಮತ್ತು ಪ್ರವೃತ್ತಿ 12–15
5. ಪ್ರಶಸ್ತಿ–ಗೌರವಗಳು 16–18
6. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆ 1984–1987 19–31
7. ವ್ಯಕ್ತಿತ್ವ 32
8. ನಿಸಾರ್ ಅಹಮದ್ ಅವರ ಕಾವ್ಯ 33–44
9. ನಿಸಾರ್ ಅಹಮದ್ ಅವರ ವಿಮರ್ಶೆ 45–54
10. ನಿಸಾರ್ ಅಹಮದ್ ಅವರ ವೈಚಾರಿಕ ಸಾಹಿತ್ಯ 55–82
10. ಅನುವಾದಿತ ಕೃತಿಗಳು 83–87
11. ಹೊಸಗನ್ನಡ ಸಾಹಿತ್ಯದಲ್ಲಿ ನಿಸಾರ್ ಅಹಮದ್‌ರವರ ಸ್ಥಾನ 88–89

ಸಮಾರೋಪ 90

ಆಕರ ಗ್ರಂಥಗಳು 91

ನಿಸಾರ್ ಅವರ ಕೃತಿಗಳು 91–94

# ನಾಡೋಜ ಡಾ. ಕೆ.ಎಸ್. ನಿಸಾರ್ ಅಹಮದ್

ಡಾ.ರಾಮಚಂದ್ರ ಗಣಾಪೂರ

ಭಾರತೀಯ ಸಾಹಿತ್ಯ ಸಾರಗರದಲ್ಲಿ ಕನ್ನಡ ಸಾಹಿತ್ಯ ತನ್ನದೇ ಆದ ಸತ್ವ ಹಾಗೂ ಶಕ್ತಿಯಿಂದ ಸ್ವಂತ ಅಸ್ತಿತ್ವವನ್ನು ಸಮರ್ಥವಾಗಿ ಪ್ರದರ್ಶಿಸಿ ಈವರೆಗೆ ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಗಳಿಸಿದೆ. ಎರಡು ಸಾವಿರ ವರ್ಷಗಳ ಸುದೀರ್ಘ ಪರಂಪರೆಯ ಪೆಂಪು ಕನ್ನಡಕ್ಕಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ, ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಸಾಹಿತ್ಯದ ಓಘದಲ್ಲಿ ವೈವಿಧ್ಯಮಯ ಪ್ರಕಾರಗಳಲ್ಲಿ ಕಾಲ ಕಾಲಕ್ಕೆ ತನ್ನ ಅಭಿವ್ಯಕ್ತಿಯನ್ನು ಸಾಕ್ಷೀಕರಿಸಿದೆ. ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ದೇಶೀಯ ಹಾಗೂ ವಿದೇಶೀಯ ಪ್ರೇರಣೆಗಳೊಂದಿಗೆ ಹೊರಹೊಮ್ಮಿದ ಕನ್ನಡ ಸಾಹಿತ್ಯ ತನ್ನ ಸ್ವಂತಿಕೆಯಿಂದ ಗಮನಸೆಳೆದದ್ದು ಮಹತ್ವದ ಸಂಗತಿ.

ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಸಣ್ಣಕಥೆ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧ, ವಿಮರ್ಶೆ, ಮಕ್ಕಳ ಸಾಹಿತ್ಯ, ಅನುವಾದ ಮುಂತಾದ ಪ್ರಕಾರಗಳ ರಚನೆ ಭರದಿಂದ ಹೊರಹೊಮ್ಮಲು ಆರಂಭವಾಯಿತು. ಈ ಸಂದರ್ಭದಲ್ಲಿ ಕಾವ್ಯ ಪ್ರಕಾರವು ಪ್ರಭಾವಪೂರ್ಣವಾಗಿ ಹೊರಹೊಮ್ಮಿ ಸಹೃದಯರನ್ನು ತನ್ನತ್ತ ಆಕರ್ಷಿಸಿತು, ತಣಿಸಿತು, ಉತ್ಸಾಹದಿಂದ ಸಹೃದಯರನ್ನು ಕುಣಿಸಿತು. ನಾಡು ನುಡಿ, ದೇಶಪ್ರೇಮ, ಸ್ವಾತಂತ್ರ್ಯ, ಸಮಾನತೆ, ನಿಸರ್ಗವರ್ಣನೆ, ಪ್ರೀತಿ–ಪ್ರೇಮ, ವಾಸ್ತವತೆ, ಸೌಹಾರ್ದತೆ ಹೀಗೆ ಆ ಸಂದರ್ಭದಲ್ಲಿ ತನ್ನದೇ ಮಾದರಿಯಿಂದ ವಿಶಿಷ್ಟ ಪ್ರೇರಣೆ–ಧೋರಣೆಯಿಂದ ಛಾಪು ಮೂಡಿಸಿತು. ಸಮಕಾಲೀನ ಸ್ಥಿತ್ಯಂತರಗಳೊಂದಿಗೆ ವಿನೂತನ ಸಂವೇದನೆಯೊಂದಿಗೆ ಲೇಖಕ ತನ್ನ ಪ್ರಖರವಾದ ಶಕ್ತಿಯೊಂದಿಗೆ ಸ್ಪಂದಿಸುತ್ತಾ ಕನ್ನಡ ಭಾಷೆ ಹಾಗೂ ಸಾಹಿತ್ಯ ಉತ್ತುಂಗ ಶಿಖರಕ್ಕೇರಿತು. ಈ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಅನೇಕ ಮಹನೀಯರು, ಪ್ರಾಂಜಲ ಭಾವದ ಕವಿಪುಂಗವರು ಅನುಪಮ ಸೇವೆ ಸಲ್ಲಿಸಿ ಅವಿಸ್ಮರಣೀಯರಾಗಿದ್ದಾರೆ. ಅಂತಹ ಕನ್ನಡಾಂಬೆಯ ಮುಕುಟದ ಮಣಿಗಳಂತಿರುವ ಮಹನೀಯರಲ್ಲಿ ಕನ್ನಡದ ಕಣ್ವ ಬಿ.ಎಂ.ಶ್ರೀ, ರಸಋಷಿ ಕುವೆಂಪು, ವರಕವಿ ಬೇಂದ್ರೆ, ನವ್ಯಕವಿ ಗೋಪಾಲಕೃಷ್ಣ ಅಡಿಗ, ಶೃಂಗಾರ ಕವಿ

ನರಸಿಂಹಸ್ವಾಮಿ ಮುಂತಾದ ಮಹಾನುಭಾವರಲ್ಲಿ ನಿತ್ಯೋತ್ಸವದ ಕವಿ ಪ್ರೊ: ಕೆ.ಎಸ್.ನಿಸಾರ್ ಅಹಮದ್‌ರವರೂ ಸಹ ಒಬ್ಬರು.

ನಿತ್ಯೋತ್ಸವದ ಕವಿಗಳೆಂದೇ ಖ್ಯಾತರಾದಂತಹ ಕೆ.ಎಸ್.ನಿಸಾರ್ ಅಹಮದ್‌ರವರು ಕನ್ನಡಿಗರ, ಕನ್ನಡ ನಾಡಿನ ಜನಮನ ಸೂರೆಗೊಂಡವರು. ಬದುಕಿನ ತುಂಬೆಲ್ಲಾ ಕನ್ನಡವನ್ನು, ಕನ್ನಡತನವನ್ನು ಉಳಿಸಿಕೊಂಡು ಉಸಿರಾಡುತ್ತಿರುವ ಅಪ್ಪಟ ಕನ್ನಡಿಗ. ಅವರು ಕನ್ನಡಾಂಬೆಯನ್ನು ಮನತುಂಬಿ ಆರಾಧಿಸುವ ರೀತಿಯನ್ನು ವರ್ಣಿಸಲು ಶಬ್ದಗಳು ಸಾಲವು. ಇದಕ್ಕೆ ಅವರ ಬದುಕು – ಬರಹಗಳೇ ಸಾಕ್ಷಿ ಜೀವಂತ ಸಾಕ್ಷಿ. ತಮ್ಮ ಜೀವನದ ತುಂಬೆಲ್ಲಾ ಕ್ರಿಯಾಶೀಲತೆಯಿಂದ, ಲವಲವಿಕೆಯಿಂದ ಪ್ರೀತಿ ಹಾಗೂ ಸಾತ್ವಿಕ ಸಿಟ್ಟನ್ನು ಕಾಲಕ್ಕೆ ತಕ್ಕಂತೆ ಸೃಜನಶೀಲತೆಯೊಂದಿಗೆ ಅಭಿವ್ಯಕ್ತಗೊಳಿಸಿದವರು. ನಿಸಾರ್ ಅಹಮದ್‌ರವರು ಮುಸ್ಲಿಂ ಕುಟುಂಬದಲ್ಲಿ ಉದಯಿಸಿದ ಕನ್ನಡಾಂಬೆಯ ಮುಕುಟದ ಅನರ್ಘ್ಯ ರತ್ನ. ಓದಿದ್ದು ವಿಜ್ಞಾನವಾದರೂ ಸಹ ಅವರ ಹೃದಯದ ತುಂಬೆಲ್ಲಾ ಕನ್ನಡದ ಒಲವು. ವೃತ್ತಿಯಲ್ಲಿ ಭೂಗರ್ಭ ವಿಜ್ಞಾನದ ಉಪನ್ಯಾಸಕರಾಗಿದ್ದರೂ, ಪ್ರವೃತ್ತಿಯಲ್ಲಿ ಕನ್ನಡ ಸಾಹಿತಿ, ಎರಡು ವಿಭಿನ್ನ ಸಂಸ್ಕೃತಿಗಳ ನಡುವೆ ನಿಂತು ತಮ್ಮ ಆಂತರಿಕ ತುಡಿತ, ತುಮುಲಗಳನ್ನು ಹೊರ ಹಾಕುವಾಗಲೂ ಅಂತಃಸಮತೆಯನ್ನು ಕದಡದೆ ಕಾಪಾಡಿಕೊಂಡು ಬರೆದಿರುವ ಚೇತನ.

ಕನ್ನಡಿಗರ ಹೆಮ್ಮೆಯ ಕವಿಗಳಾಗಿರುವ ನಿಸಾರ್ ಅಹಮದ್‌ರವರು ಸುಮಾರು ಐದು ದಶಕಗಳಿಂದ ಕನ್ನಡ ಸಾಹಿತ್ಯಕ್ಕೆ ತಮ್ಮ ಅನುಪಮ ಸೇವೆ ಸಲ್ಲಿಸುತ್ತಾ ಕನ್ನಡ ಸಾಹಿತ್ಯದ ಗಣಿಗೆ ಬೆಲೆಬಾಳುವ ಅಪೂರ್ವ ಕೃತಿಗಳನ್ನು ನೀಡಿ ಶ್ರೀಮಂತಗೊಳಿಸಿದವರು. ನಿಸಾರ್ ಅಹಮದ್ ಎಂದ ತಕ್ಷಣ ಬಹುತೇಕ ಜನರು ಭಾವಿಸುವುದು ಕಾವ್ಯ ಕ್ಷೇತ್ರದ ದಿಗ್ಗಜರಾದಂತಹ ಕುವೆಂಪು, ಬೇಂದ್ರೆ, ಅಡಿಗರಂತಹ ಅಪೂರ್ವ ಕವಿಯೆಂದೇ ಭಾವನೆ. ಆದರೆ ಕಾವ್ಯದಾಚೆಗೂ ಅವರ ಇನ್ನೊಂದು ಅಚ್ಚರಿಯ ಲೋಕ ಅದು ಅವರ ಗದ್ಯ ಬರಹಗಳು ಸುದೀರ್ಘವಾದ ಸಾವಿರ ಪುಟಗಳಷ್ಟಿರುವ ಅವರ ಅಮೂಲ್ಯ ವೈವಿಧ್ಯಮಯ ಬರಹಗಳು ಓದುಗರನ್ನು ಮೂಕವಿಸ್ಮಿತರನ್ನಾಗಿಸುತ್ತದೆ. ಅವರ ಗದ್ಯ ಸಾಹಿತ್ಯಕ್ಕಿಂತ ಕಾವ್ಯ ಬಹುಬೇಗ ಜನರ ಮನ ತಲುಪುವಲ್ಲಿ, ಅವರು ಹೊರತಂದ ಪ್ರಪ್ರಥಮ ಧ್ವನಿಸುರುಳಿ 'ನಿತ್ಯೋತ್ಸವ', 'ಕವನೋತ್ಸವ', ನವೋಲ್ಲಾಸ ಮುಂತಾದ ಧ್ವನಿಸುರುಳಿಗಳು ಹಾಗೂ 'ಮನಸು

ಗಾಂಧಿಬಜಾರು'ವಿನಿಂದ 'ಅರವತ್ತೈದರ ಐಸಿರಿ'ವರೆಗಿನ ಸುಮಾರು 12 ಕವನಸಂಕಲನಗಳಿಂದ ಅವರ ಕಾವ್ಯದ ಕಂಪು ನಾಡಿನಾದ್ಯಂತ, ದೇಶ–ವಿದೇಶಗಳಿಗೂ ಹರಡಲು ಕಾರಣವಾಯಿತು. ಕಾವ್ಯದಷ್ಟೇ ವಿಶಾಲವಾದ ಗದ್ಯ ಸಾಹಿತ್ಯ ನಿಧಾನವಾಗಿ ನಿಸಾರ್‌ರವರನ್ನು ಪರಿಚಯಿಸುತ್ತಾ ಸಾಗಿತು.ಇವರು ಸಹಾಯಕ ಭೂವಿಜ್ಞಾನಿಯಾಗಿ, ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿನ ವೃತ್ತಿ ಜೀವನದಲ್ಲಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಮಾಡಿರುವ ಜನಪರ ಕಾಳಜಿಯ ಕೆಲಸಗಳು ಅಪಾರ. ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಾರಥ್ಯವಹಿಸಿ ಅರ್ಥಪೂರ್ಣ ಹಾಗೂ ಮೈಲಿಗಲ್ಲಾಗುವಂತಹ ಐತಿಹಾಸಿಕ ಕಾರ್ಯ ಕೈಗೊಂಡದ್ದು ಮರೆಯಲಾರದಂತಹದ್ದು. ಅಕಾಡೆಮಿಯನ್ನು ಅವರದೇ ಮಹಾತ್ವಾಕಾಂಕ್ಷೆಯಿಂದ ನಡೆಸಿ ಹೊಸ ವಿನ್ಯಾಸವನ್ನು ನೀಡಿದ ಮಹನೀಯರು. ಕನ್ನಡಿಗರ ಜನಮನದ ಕವಿ ನಿಸಾರ ಅಹಮದ್‌ರವರು ಸದಾ ತಮ್ಮ ಅಂತರಾಳದಿ ಸೌಜನ್ಯದ ದ್ರವ್ಯವನ್ನು ಹೊಂದಿದ ಹೃದಯವಂತರಾಗಿ ಕಂಗೊಳಿಸುವವರು.ಕನ್ನಡದ ಅಪರೂಪದ ಬರಹಗಾರರಾಗಿ ಸರ್ವರನ್ನು ಚುಂಬಕಶಕ್ತಿಯಂತೆ ಸೆಳೆಯುವ ಗುಣದವರು.ಹೀಗೆ ಪ್ರಾಂಜಲಭಾವದ ಕವಿಯಾಗಿ ಮನೆ ಮಾತಾದ ಇವರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಮಾಡಿರುವ ಸೇವೆ ಅಪೂರ್ವವಾಗಿದೆ.

ಪ್ರೊ: ನಿಸಾರ್ ಅಹಮದ್‌ರವರು ಸಾಹಿತ್ಯ ಕ್ಷೇತ್ರದಲ್ಲಿ ಪಾದಾರ್ಪಣೆ ಮಾಡಿದ್ದು, ಕಾವ್ಯದ ಮುಖಾಂತರವೇ. ನವೋದಯ ಹಾಗೂ ನವ್ಯ ಸಾಹಿತ್ಯ ಸಂದರ್ಭದಲ್ಲಿ ಬರೆಯಲಾರಂಭಿಸಿದ್ದ ಇವರು ಈ ಎರಡೂ ಕಾವ್ಯ ಪಂಥಗಳ ಸೆಳೆತ ಹಾಗೂ ಪ್ರಭಾವಗಳಿಂದ ನಿರಾತಂಕವಾಗಿ ಮುಕ್ತವಾಗಿ ಇವರ ಕಾವ್ಯ ಹೊರಹೊಮ್ಮಿತು. ಕಾವ್ಯ ಇವರ ತಾಳಕ್ಕೆ ತಕ್ಕಂತೆ ಕುಣಿಯುತ್ತದೆ. ಹಾಗೆಯೇ ಇದೀಗ ಇವರ ಕಾವ್ಯ ಭಾವಗೀತೆಯತ್ತ ವಾಲುತ್ತಿರುವದೂ ಸಹ ಆಗಾಗ ಕಂಡುಬರುತ್ತದೆ. ಕಾವ್ಯವಲ್ಲದೆ ಸಾಹಿತ್ಯದ ವಿವಿಧ ಪ್ರಕಾರದಲ್ಲಿ ತಮ್ಮ ಪ್ರತಿಭೆ ಹೊರಹೊಮ್ಮಿಸಿದ್ದು ಕಂಡುಬರುತ್ತದೆ. ಸೂಕ್ಷ್ಮ ಸಂವೇದನೆಯ ವಿಮರ್ಶಕರಾಗಿ, ಸಹೃದಯರ ಮನಸೂರೆಗೊಳ್ಳುವ ವಿಚಾರವಾದಿಯಾಗಿ, ಮುದ್ದಿನ ಮಕ್ಕಳ ಸಾಹಿತಿಯಾಗಿ, ಪ್ರತಿಭಾಶಾಲಿ ಅನುವಾದಕರಾಗಿ, ಪ್ರಜ್ಞಾಶೀಲ ಸಂಪಾದಕರಾಗಿ ಕನ್ನಡ ಸಾಹಿತ್ಯಕ್ಕೆ ಅಪೂರ್ವ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರ ಪ್ರತಿಭೆ ಹಾಗೂ ಅಮೂಲ್ಯ ಸೇವೆಗಾಗಿ ಅರಸಿಬಂದ ಪ್ರಶಸ್ತಿ ಸನ್ಮಾನಗಳೂ ಸಹ ಅಪಾರ. ಇವರು ಒಬ್ಬ ಕವಿ, ಬರಹಗಾರ, ವಿಮರ್ಶಕ, ವಿಚಾರವಾದಿ, ಅನುವಾದಕ

ಎನ್ನುವುದಕ್ಕಿಂತಲೂ ಇವರೊಬ್ಬ ಮಹಾ ಮಾನವತಾವಾದಿಯಾಗಿ ಕಂಡುಬರುತ್ತಾರೆ. ಇದಕ್ಕೆ ಅವರ ಬರಹದ ವಸ್ತು, ಸ್ನೇಹವಲಯ ಹಾಗೂ ಅವರ ಸರಳ ಜೀವನವೇ ಸಾಕ್ಷಿ. ಇಂತಹ ಉದಾತ್ತ ವ್ಯಕ್ತಿಯ ಕುರಿತಾಗಿ, ಜೀವನ, ಸಾಹಿತ್ಯ ಸಾಧನೆಯ ಕುರಿತಾಗಿ ಅಷ್ಟಾಗಿ ಅಧ್ಯಯನ ನಡೆದಿಲ್ಲ. ಅಲ್ಲಲ್ಲಿ ಬಿಡಿ ಲೇಖನಗಳ, ಮಿನಿ ಸಂದರ್ಶನಗಳ, ಕೆಲವು ಕವನಗಳ ವಿಮರ್ಶೆಗಳು ಬಿಟ್ಟರೆ ಆಗಬೇಕಾದಷ್ಟು ಕೆಲಸ ಆಗಿಲ್ಲವೆಂದೇ ಹೇಳಬಹುದು. ಇವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಕೊಡುಗೆ ಅಪಾರವಾದುದು. ಒಬ್ಬ ಕವಿಯ ಅಥವಾ ಬರಹಗಾರನ ಬಗ್ಗೆ ಪರಿಚಯಿಸುವಾಗ ಆ ವ್ಯಕ್ತಿಯ ಬರಹದಷ್ಟೇ ಆ ವ್ಯಕ್ತಿಯ ಬದುಕೂ ಸಹ ಅಷ್ಟೇ ಮಹತ್ವದ್ದಾಗಿರುತ್ತದೆ. ಅವರು ಸಾಧನೆಯ ಉತ್ತುಂಗ ಶಿಖರಕ್ಕೇರಿ ನಿಂತಾಗ ಆ ಶಿಕರಾರೋಹಣದ ಪ್ರತಿ ಹೆಜ್ಜೆ ಪ್ರತಿ ಮೆಟ್ಟಿಲೂ ಸಹ ಮುಖ್ಯವಾಗಿರುತ್ತದೆ. ಆದ್ದರಿಂದ ಆ ಹಿನ್ನೆಲೆಯಲ್ಲಿ ಪ್ರೊ: ನಿಸಾರ್ ಅಹಮದ್‌ರವರ ಜೀವನದ ಹಂತ ಹಂತಗಳ ವಿವರಗಳ ಮಾಹಿತಿ ಸಂಗ್ರಹ ಹಾಗೂ ಅದನ್ನು ಪ್ರಕಟಪಡಿಸಿದಾಗ ಮಾತ್ರ ಆ ವ್ಯಕ್ತಿಯ ಕುರಿತಾಗಿ ಮಾಡುವ ಪರಿಚಯವು ಅರ್ಥಪೂರ್ಣವಾಗುತ್ತದೆ. ಈ ದೃಷ್ಟಿಯಿಂದ ನಿಸಾರ್ ಅಹಮದ್‌ರವರ ಮನೆತನ, ಜನನ, ಬಾಲ್ಯ, ಶಿಕ್ಷಣ, ಉದ್ಯೋಗ, ಸಾಹಿತ್ಯಕ ಪ್ರಭಾವ–ಪ್ರೇರಣೆ, ಕೌಟುಂಬಿಕ ಜೀವನ ಅರಿಯುವದು ಮುಖ್ಯವಾಗಿರುತ್ತದೆ. ಕವಿಯ ಬದುಕಿನ ಕುರಿತಾದ ವೃತ್ತಾಂತ ಸಿಂಹಾವಲೋಕನ ಕ್ರಮದಿಂದ ಸಂಗ್ರಹಿಸಿದ್ದೇನೆ.

ಬರಹಗಾರನ ಇನ್ನೊಂದು ಮಹತ್ವದ ಭಾಗ ಆ ವ್ಯಕ್ತಿಯ ಬರಹ.ಆ ವ್ಯಕ್ತಿಯ ಬದುಕು ಹಾಗೂ ಬರಹಗಳು ಅವರ ದೇಹ ಮತ್ತು ಜೀವಕ್ಕಿರುವ ಸಂಬಂಧದಂತೆ ಒಂದು ಬಿಟ್ಟು ಇನ್ನೊಂದಿಲ್ಲ. ಬದುಕು ಹಾಗೂ ಬರಹಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಇವೆರಡೂ ಅವಿನಾಭಾವ ಸಂಬಂಧವನ್ನು ಹೊಂದಿರುತ್ತವೆ. ಹೀಗಾಗಿ ಕನ್ನಡದ ಹೆಮ್ಮೆಯ ಬರಹಗಾರರಾಗಿರುವ ನಿಸಾರ್ ಅಹಮದ್‌ರವರ ಬದುಕು ಹಾಗೂ ಬರಹಗಳೆರಡನ್ನೂ ಇಲ್ಲಿ ಅವಲೋಕನ ಮಾಡುವುದು ಸೂಕ್ತವೆನಿಸುತ್ತದೆ. ಅವರು ಸಾಹಿತ್ಯ ಕ್ಷೇತ್ರದಲ್ಲಿ ಪಾದಾರ್ಪಣೆ ಮಾಡಿದಾಗಿನಿಂದ ಪ್ರಸ್ತುತ ಸಂದರ್ಭದವರೆಗೂ ಅವರ ಲೇಖನಿ ವೈವಿಧ್ಯಮಯ ಸಾಹಿತ್ಯ ಕ್ಷೇತ್ರದಲ್ಲಿ ವಿಹರಿಸಿದ ಬಗ್ಗೆ ವಿವರಿಸುವ ಅಗತ್ಯವಿದೆ. ಅವರ ಬರಹಗಳನ್ನು ವಿಶಿಷ್ಟ ದೃಷ್ಟಿಕೋನಗಳಿಂದ ವಿಶ್ಲೇಷಿಸುವ ಅಗತ್ಯವಿದೆ.

ಪ್ರೊ: ನಿಸಾರ್ ಅಹಮದ್‌ರವರ ಸಾಹಿತ್ಯಕ್ಷೇತ್ರ ತುಂಬಾ ವಿಶಾಲವಾದ ವ್ಯಾಪ್ತಿಯುಳ್ಳದ್ದು. ಇವರ ಸಾಹಿತ್ಯ ಇನ್ನುಳಿದವರ ಸಾಹಿತ್ಯಕ್ಕಿಂತ ವಿಭಿನ್ನ ದೃಷ್ಟಿಕೋನದಿಂದ ಕೂಡಿದೆ.ಏಕೆಂದರೆ ಉರ್ದು ಮಾತೃಭಾಷೆಯ ಹಾಗೂ ವಿಜ್ಞಾನದ ವಿದ್ಯಾರ್ಥಿ ಎರಡು ವಿಭಿನ್ನ ಸಂಸ್ಕೃತಿಗಳ ಮಧ್ಯೆ ನಿಂತು ಬರೆಯುವದು ಸುಲಭದ ಕೆಲಸವಲ್ಲ. ಜ್ಞಾನ, ಪ್ರತಿಭೆ, ಪಾಂಡಿತ್ಯದಲ್ಲಿ ಒಬ್ಬರಿಗಿಂತ ಇನ್ನೊಬ್ಬರು ಅಸಾಮಾನ್ಯರಾಗಿರುತ್ತಾರೆ. ಈ ಜ್ಞಾನವಾಹಿನಿಯ ಪ್ರವಾಹಕ್ಕೆ ಕೊನೆಯೆಂಬುದಿಲ್ಲ. ಒಬ್ಬರು ಇನ್ನೊಬ್ಬರಿಗಿಂತ ತುಂಬಾ ವಿಶಿಷ್ಟವಾಗಿ ಬರೆಯಬಹುದು. ಆದರೆ ಇಂತಹ ಅಚ್ಚ ಕನ್ನಡದಿಂದ ಕೂಡಿದ ಮುಸ್ಲಿಂ ಬಾಂಧವನೊಬ್ಬ ಕನ್ನಡ ಸಾಹಿತ್ಯ ಸಾಗರದಲ್ಲಿ ಸರಾಗವಾಗಿ ವಿಹರಿಸುವ ರೀತಿ ತುಂಬಾ ಮಾರ್ಮಿಕವಾದದ್ದು. ಒಬ್ಬ ವಿಜ್ಞಾನದ ವಿದ್ಯಾರ್ಥಿಯಾಗಿ ಕನ್ನಡ ಸಾಹಿತ್ಯದಲ್ಲಿ ಕೃಷಿ ಮಾಡುವ ಅವರ ಆಸಕ್ತಿಯ ಫಲದ ಮುಂದಿನ ಸವಾಲು ಚಿಕ್ಕದಾಗಿರಲಿಕ್ಕಿಲ್ಲವೆನ್ನಿಸದೆ ಇರದು. ಅವರು ಸಾಧಿಸಿದ ಸಾಹಿತ್ಯಿಕ ಸಾಧನೆ ಶ್ಲಾಘನೀಯವಾದದ್ದು, ಇದು ಉತ್ಪ್ರೇಕ್ಷೆ ಅಥವಾ ಹೊಗಳಿಕೆಯಲ್ಲ. ಇದಕ್ಕೆ ಅವರ ಬರಹಗಳೇ ಇಂದು ಜೀವಂತ ಸಾಕ್ಷಿಯಾಗಿವೆ.

ನಿಸಾರ್ ಅಹಮದ್‌ರವರು ಸಾಹಿತ್ಯ ಸೃಷ್ಟಿಯಲ್ಲಿ ವಿಶಿಷ್ಟತೆಯನ್ನು ಮೆರೆದಿದ್ದಾರೆ.ಅವರ ಕಾವ್ಯವು ವಿಶೇಷ ಪದಗಳ ಕಸಿಗೊಳಿಸಿದ ಜೋಡಣೆಯಿಂದ ಅವರ ನೈಜ ಪ್ರತಿಭೆಯನ್ನು ಹೊರಚೆಲ್ಲುತ್ತದೆ. ಕಾವ್ಯವನ್ನು ವೈವಿಧ್ಯಮಯ ಆಕರಗಳೊಂದಿಗೆ ವಿಮರ್ಶೆಗೊಳಪಡಿಸಿ ಅಭ್ಯಾಸ ಮಾಡಿದಾಗ ಮಾತ್ರ ಅವರ ಕುರಿತಾದ ಸಾಹಿತ್ಯದ ಮೇಲೆ ಬೆಳಕು ಚೆಲ್ಲಿದಂತಾಗುತ್ತದೆ. ಅವರ ಸುದೀರ್ಘವಾದ ಗದ್ಯ ಸಾಹಿತ್ಯವನ್ನು ವೈವಿಧ್ಯಮಯವಾಗಿ ವಿಂಗಡಿಸಿ ಸೂಕ್ಷ್ಮದೃಷ್ಟಿಯ ಅಧ್ಯಯನದಿಂದ ಅವಲೋಕಿಸಿದಾಗ ಅವರ ಬರಹದ ಮಹತ್ವ ತಿಳಿದುಬರುತ್ತದೆ. ಹಾಗೆಯೇ ಅವರ ಅನುವಾದ ಸಾಹಿತ್ಯ, ಸಂಪಾದನೆ ಮುಂತಾದ ಕ್ಷೇತ್ರಗಳನ್ನು ವಿವಿಧ ಆಕರಗಳಿಂದ ಸಂಗ್ರಹಿಸಿ ನಿಷ್ಪಕ್ಷವಾದ ಬೆಳಕು ಚೆಲ್ಲಿದಾಗ ಒಬ್ಬ ಬರಹಗಾರನ ಒಳಹೊರಗುಗಳನ್ನು ಆಸಕ್ತಿಯಿಂದ ಅರಿತಾಗ ಅವರ ಬರಹದ ಶಕ್ತಿಯ ಪರಿಣಾಮ ಅರಿವಿಗೆ ಬರುತ್ತದೆ.

## ನಿಸಾರ್ ಅಹಮದ್‌ರವರ ಜೀವನ

ಒಬ್ಬ ಖ್ಯಾತ ಬರಹಗಾರನ ಕುರಿತಾಗಿ ಅವಲೋಕನ ಮಾಡುವಾಗ, ಬರೆಯುವಾಗ, ಜೀವನದ ಘಟನಾವಳಿಗಳನ್ನು ಕಟ್ಟುವ ಸಂದರ್ಭದಲ್ಲಿ ಆ ಸಾಹಿತ್ಯಕಾರನ ಬದುಕಿನ ಬಗ್ಗೆ ಅರಿತುಕೊಳ್ಳುವದು ಅತ್ಯಂತ ಕುತೂಹಲದ ಹಾಗೂ ಮಹತ್ವದ ಸಂಗತಿಯಾಗುತ್ತದೆ. ಅದರಲ್ಲೂ ಪ್ರೊ: ನಿಸಾರ್ ಅಹಮದ್‌ರವರಂತಹ ಜನಪ್ರಿಯ ವ್ಯಕ್ತಿಯ ಕುರಿತಾಗಿ ಮಾಹಿತಿ ಸಂಗ್ರಹಿಸುವಾಗ, ಅವರ ಜೀವನದ ಪದರು ಪದರುಗಳ ಕುರಿತು ಅವಲೋಕಿಸುವುದು ಅನಿವಾರ್ಯವಾಗುತ್ತದೆ. ಅವರ ಮನೆತನ, ಬೆಳೆದ ಪರಿಸರ, ಬಾಲ್ಯ, ಶಿಕ್ಷಣ, ಉದ್ಯೋಗ, ಸಾಹಿತ್ಯಕ ಪರಿಸರ, ಕೌಟುಂಬಿಕ ಜೀವನ, ಸಂದ ಗೌರವಗಳು ಮುಂತಾದ ವಿಷಯಗಳನ್ನು ಅರಿತುಕೊಳ್ಳುವುದು ಮುಖ್ಯವಾಗುತ್ತದೆ. ಆ ವಿಷಯಗಳನ್ನು ಗ್ರಹಿಸುತ್ತಾ ಹೋದಾಗ ಅವರ ಬದುಕಿನ ಒಳಹೊರಗುಗಳನ್ನು ಅರಿಯಲು ಸುಲಭವಾಗುತ್ತದೆ. ವೃತ್ತಿಯಲ್ಲಿ ಭೂ ವಿಜ್ಞಾನದ ಪ್ರಾಧ್ಯಾಪಕರಾಗಿ ತಮ್ಮಷ್ಟಕ್ಕೇ ತಾವಿದ್ದರೆ ಇವರ ಬಗ್ಗೆ ಅಂತಹ ಕುತೂಹಲವಿರುತ್ತಿರಲಿಲ್ಲ. ಬದಲಾಗಿ ಅವರ ವೃತ್ತಿಯಾಚೆಗಿನ ಅವರ ಕೊಡುಗೆ ಇಲ್ಲಿ ಮುಖ್ಯವಾಗಿ ತೋರುತ್ತದೆ. ಒಬ್ಬ ಕವಿಯಾಗಿ, ಲೇಖಕರಾಗಿ, ವಿಮರ್ಶಕರಾಗಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಅವರು ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕಕ್ಕೆ ನೀಡಿದ ಕೊಡುಗೆ ಅವಿಸ್ಮರಣೀಯ.

**ಮನೆತನ:**

ಪ್ರೊ.ನಿಸಾರ್ ಅಹಮದ್‌ರವರ ಕುಟುಂಬವು ಅತ್ಯಂತ ಸುಸಂಸ್ಕೃತ, ಸುಸಜ್ಜಿತ ಮನೆತನವಾಗಿತ್ತು. ಬೆಂಗಳೂರು ಜಿಲ್ಲೆಯ ಕನಕಪುರ ತಾಲೂಕಿನ ಕೊಕ್ಕರೆ ಹೊಸಹಳ್ಳಿಯ ಶೇಖ್ ಹೈದರ್ ಮತ್ತು ಹಮೀದಾ ಬೇಗಂ ದಂಪತಿಗಳಿಗೆ ಏಳು ಜನ ಮಕ್ಕಳು. ಆ ಏಳು ಜನ ಮಕ್ಕಳಲ್ಲಿ (ನಾಲ್ವರು ಹೆಣ್ಣುಮಕ್ಕಳು, ಮೂವರು ಗಂಡು ಮಕ್ಕಳು) ನಿಸಾರ್ ಅಹಮದ್‌ರವರು ಹಿರಿಯರು. ನಿಸಾರ್‌ರವರ ತಾತ ಆ ಊರಿಗೆ ಒಳ್ಳೆಯ ಸುಸಂಸ್ಕೃತ ಮನೆತನದ ಜಮೀನ್ದಾರರಾಗಿದ್ದರು. ಇಂತಹ ಉತ್ತಮ ಮನೆತನದಲ್ಲಿ ಜನಿಸಿದ ನಿಸಾರ್ ಅಹಮದ್‌ರವರ ತಂದೆ ಶೇಖ್ ಹೈದರ್‌ರವರು. ಇವರು ಆಗಿನ ಕಾಲದಲ್ಲಿ ಮಾಧ್ಯಮಿಕ ಶಾಲೆ ಕಲಿತ ವಿದ್ಯಾವಂತರಾಗಿದ್ದರು. ಮುಂದೆ ಇವರು

ದೇವನಹಳ್ಳಿಯ ಕಂದಾಯ ಇಲಾಖೆಯಲ್ಲಿ ಸೇವೆಸಲ್ಲಿಸುತ್ತಿರುವಾಗ ಇವರ ಸ್ವಭಾವ ಹಾಗೂ ವ್ಯಕ್ತಿತ್ವವನ್ನು ಕಂಡು ಹಿರಿಯರಿಂದ ಶ್ರೀಮತಿ ಹಮೀದಾ ಬೇಗಂರವರೊಂದಿಗೆ ವಿವಾಹ ಮಾಡಿದರು.

ಇವರ ತಾಯಿಯ ತವರು ಮನೆಯವರು ಚಿಕ್ಕಬಳ್ಳಾಪುರ ಕಡೆಯವರು. ನಂತರ ಇವರು ದೇವನಹಳ್ಳಿಗೆ ಬಂದು ದೊಡ್ಡ ದೊಡ್ಡ ಮಾವು, ತೆಂಗು, ಹುಣಸೆ ತೋಪುಗಳ ವ್ಯಾಪಾರಕ್ಕಾಗಿ ಬಂದು ನೆಲೆಸಿದರು. ದೇವನಹಳ್ಳಿಯಲ್ಲಿಯೇ ನಮ್ಮ ನಿತ್ಯೋತ್ಸವದ ಕವಿ ಕೆ.ಎಸ್.ನಿಸಾರ್ ಅಹಮದ್‌ರವರು 05–02–1936ರಂದು ಜನಿಸಿದರು.

## ಬಾಲ್ಯ

ನಿಸಾರ್ ಅಹಮದ್‌ರವರಿಗೆ ಮನೆಯೇ ಮೊದಲ ಪಾಠಶಾಲೆಯಾಗಿತ್ತು. ಇವರ ತಾಯಿಯವರಾದ ಹಮೀದಾ ಬೇಗಂರವರು ಇವರನ್ನು ಶಿಸ್ತುಬದ್ಧವಾಗಿ ಬೆಳೆಸಿದರು. 'ಮನೆಯೆ ಮೊದಲು ಪಾಠಶಾಲೆ, ಜನನಿ ತಾನೆ ಮೊದಲು ಗುರುವು' ಎಂಬಂತೆ ಇವರನ್ನು ಮಾತೆಯವರು ಬೆಳೆಸಿದರು. ಇವರ ತಾಯಿಯವರು ಧರ್ಮದಲ್ಲಿ ತುಂಬಾ ಭಕ್ತಿ ಹಾಗೂ ಶ್ರದ್ಧೆಯುಳ್ಳವರಾಗಿದ್ದರು. ಇಸ್ಲಾಂ ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಇವರ ತಂದೆಯವರು ಸ್ವಲ್ಪ ಪ್ರಮಾಣದಲ್ಲಿ ಸರಳ ವ್ಯಕ್ತಿತ್ವದವರು. ಇವರದು ಹಳ್ಳಿಯ ರೈತ ಜನರೊಂದಿಗೆ ಬೆರೆತ, ಜನಪರ ಕಾಳಜಿಯಿಂದ ಕೂಡಿದ ಜೀವನವಾಗಿತ್ತು. ಇವರದು ಜಮೀನ್ದಾರ ಮನೆತನವಾಗಿದ್ದರಿಂದ ನಿಸಾರರ ಬಾಲ್ಯ ಜೀವನ ಯಾವುದೇ ತೊಂದರೆಯ ಸೋಂಕಿಲ್ಲದೆ, ಏರುಪೇರುಗಳಿಲ್ಲದೆ, ಸುಮಧುರವಾಗಿ ಸಾಗಿತ್ತು. ಇವರ ಬಾಲ್ಯಜೀವನ ತುಂಬಾ ಸುಭಿಕ್ಷತೆಯಿಂದ ಕೂಡಿತ್ತು. ತುಂಬಾ ಆನಂದಮಯವಾದ, ಸುಸಂಸ್ಕೃತ ಪರಿಸರದಲ್ಲಿ ಇವರ ಬಾಲ್ಯ ಜೀವನ ಬೆಳೆದುಬಂದಿದೆ.

## ಶಿಕ್ಷಣ:

ಶಿಕ್ಷಣ ಎನ್ನುವುದು ವ್ಯಕ್ತಿಯ ಜೀವನದಲ್ಲಿ ಮಹತ್ವದ ಘಟ್ಟ. ನಿಸಾರ್‌ರವರಿಗೆ ಅವರ ಮನೆಯಲ್ಲಿಯೇ ಅವರಿಗೆ ಉತ್ತಮವಾದ ಸಂಸ್ಕಾರ ಸಿಕ್ಕಿತ್ತು. ಬೆಂಗಳೂರು ನಗರದಲ್ಲಿದ್ದರೂ ಸಹ ಅವರ ಶಿಸ್ತು, ಸಮಯಪಾಲನೆ ವ್ಯವಸ್ಥಿತವಾಗಿತ್ತು. ಆಗ ಬೆಂಗಳೂರು ಚಿಕ್ಕ ನಗರ, ಈಗಿನಂತೆ ಅಂದು

ಬೃಹದಾಕಾರದಲ್ಲಿ ಬೆಳೆದ ಊರಲ್ಲ. ಮನೆಯಲ್ಲಿ ಅವರ ತಾಯಿ ಇಸ್ಲಾಂ ಧರ್ಮ ಪಾಲನೆ, ಪೋಷಣೆಯೆಡೆಗೆ ಹೆಚ್ಚು ಆಸಕ್ತಿವಹಿಸುತ್ತಿದ್ದರು. ಹೀಗಾಗಿ ಅವರಿಗೆ ಮನೆಯಲ್ಲಿ ಒಂದು ಧಾರ್ಮಿಕ ನೆಲೆಗಟ್ಟು ಸಿಕ್ಕಿತು. ಇಸ್ಲಾಂ ಮಸೀದಿಯಲ್ಲಿ ರಾತ್ರಿ ಹೊತ್ತಿನಲ್ಲಿ ಅಂಜುಮನ್ ಶಾಲೆಯಲ್ಲಿ ಖುರಾನ್–ನೀತಿಪಾಠ ಕಲಿಸಿಕೊಡುತ್ತಿದ್ದರು. ಮನೆಯಲ್ಲಿಯೂ ಸಹ ಧರ್ಮದ ಆಚರಣೆ, ಹಬ್ಬ ಹರಿದಿನಗಳಲ್ಲಿ ಪಾಲ್ಗೊಳ್ಳುವದು, ಕಟ್ಟುನಿಟ್ಟಿನ ನಮಾಜುಗಳನ್ನು ಪಾಲಿಸುವುದು. ಮುಸ್ಲಿಂ ಬಾಂಧವರ ಮತ್ತು ಧರ್ಮಗುರುಗಳ ಸಂಪರ್ಕವಿದ್ದಿತು. ಆದರೆ ನಿಸಾರ್ ಅಹಮದ್‌ರವರ ತಂದೆಯವರೂ ಸಹ ತುಂಬಾ ಉದಾರವಾದಿಗಳಾಗಿದ್ದರು. ಅವರಿಗೆ ಸಾಹಿತ್ಯದ ಬಗ್ಗೆ ತುಂಬಾ ಆಸಕ್ತಿ ಮತ್ತು ಪತ್ರಿಕೆಗಳನ್ನು ಓದುವ ಆಸಕ್ತಿಯೂ ಇತ್ತು.ಅಂದಿನ ಕಾಲದಲ್ಲಿಯೇ ದಿನಪತ್ರಿಕೆಗಳನ್ನು ಮನೆಗೆ ತರಿಸುತ್ತಿದ್ದರು. ದಿನಪತ್ರಿಕೆ ತರಿಸುವುದೆಂದರೆ ಅಂದು ತುಂಬಾ ವೈಭವವೆಂದೇ ಭಾವಿಸಲಾಗಿತ್ತು. ಅದರಂತೆ ಅವರಿಗೆ ರೇಡಿಯೋ ಕೇಳುವ ಹವ್ಯಾಸವೂ ಸಹ ಇತ್ತು.ನಿಸಾರ್ ಅವರ ತಂದೆಯವರು ಉದಾತ್ತ ವ್ಯಕ್ತಿತ್ವದವರಾಗಿದ್ದರು. ಅವರು ಮಕ್ಕಳಿಗೆ ಹೇಗೆ ಬೆಳೆಸಬೇಕೆಂಬ ಮುಂದಾಲೋಚನೆಯುಳ್ಳವರಾಗಿದ್ದರು. ತಮ್ಮ ಮಕ್ಕಳಿಗೆ ಗೋವಿನ ಹಾಡು, ಕುವೆಂಪುರವರ ಕಿಂದರಜೋಗಿ ಮುಂತಾದ ಆದರ್ಶ ಮೌಲ್ಯಗಳ ಪದ್ಯಗಳನ್ನು ಹೇಳಿಕೊಡುತ್ತಿದ್ದರು. ಈ ಎರಡೂ ಪದ್ಯಗಳು ನಿಸಾರ್ ಅವರ ಮೇಲೆ ಅಚ್ಚಳಿಯದ ಪರಿಣಾಮ ಬೀರಿ ಇವರ ಕಣ್ಣಲ್ಲಿ ನೀರು ಹರಿಸಿದ ಹಾಡುಗಳಾಗಿವೆ. ಅಲ್ಲದೆ ಇವರ ತಂದೆಯವರು ರಾತ್ರಿ ಮಲಗುವ ಹೊತ್ತಿನಲ್ಲಿ 'ಅರೇಬಿಯನ್ ನೈಟ್ಸ್' ಕಥೆಗಳನ್ನು ಹೇಳುತ್ತಿದ್ದರು. ತೆರೆದ ಆಕಾಶ ನೋಡುತ್ತಾ ಕಂಪೌಂಡಿನಲ್ಲಿ ಮಲಗಿದ ನಿಸಾರರು ಕಲ್ಪನಾ ಲೋಕದಲ್ಲಿ ವಿಹರಿಸುತ್ತಿದ್ದರು. ಇವರ ತಾಯಿಯವರೂ ಸಹ ಇಸ್ಲಾಮಿನ ಹಳೆಯ ಕಥೆಗಳನ್ನು ಹೇಳುತ್ತಿದ್ದರು. ಹೀಗಾಗಿ ಇವರ ಸಾಹಿತ್ಯದ ಹುಟ್ಟಿಗೆ ಮನೆಯಲ್ಲಿಯೇ ಪ್ರೇರಣೆ ಸಿಕ್ಕಿತು. ಇಂತಹ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದ ನಿಸಾರ್ ಅವರ ಸಾಹಿತ್ಯಕ್ಕೆ ಒಳ್ಳೆಯ ನೆಲೆಗಟ್ಟು ಸಿಕ್ಕಿತು.

ನಿಸಾರ್ ಅಹಮದ್ ಅವರ ತಂದೆಯವರು ಇವರ ತಮ್ಮಂದಿರನ್ನೂ ಸಹ ಕನ್ನಡ ಶಾಲೆಗೆ ಸೇರಿಸಿದ್ದರು. ಏಕೆಂದರೆ ಕನ್ನಡದಿಂದ ಮುಂದೆ ಉದ್ಯೋಗ ದೊರೆಯಬಹುದೆಂಬ ದೂರದೃಷ್ಟಿಯಿಂದ ಅವರ ಭಾಗದಲ್ಲಿ ಮುಸ್ಲಿಂರದು ಅಚ್ಚ ಉರ್ದು ಭಾಷೆಯಾಗಿತ್ತು. ಶಾಲೆಗೆ ನಿಸಾರ್ ಅಹಮದ್‌ರವರು ಹಾಗೂ ಅವರ

ತಮ್ಮ ಅದರಂತೆ ಇನ್ನೊಬ್ಬ ಸಹಪಾಠಿ ಹೀಗೆ ಇಡೀ ಶಾಲೆಗೆ ಮೂರೇ ಜನ ಮುಸ್ಲಿಂ ಹುಡುಗರು ಶಾಲೆಗೆ ಪ್ರವೇಶ ಪಡೆದವರಾಗಿದ್ದರು. ಆ ಕಾಲದಲ್ಲಿ ಮುಸ್ಲಿಂ ಮಕ್ಕಳನ್ನು ಹೆಚ್ಚಾಗಿ ಉರ್ದು ಶಾಲೆಗಳಿಗೆ ಸೇರಿಸುತ್ತಿದ್ದರು. ಹೆಣ್ಣುಮಕ್ಕಳಿಗಂತೂ ಉರ್ದು ಕಲಿಯಲು ಕಳಿಸುತ್ತಿದ್ದರು. ಏಕೆಂದರೆ ಅವರು ಮನೆಯಲ್ಲೇ ಇರುತ್ತಾರೆಂಬ ಭಾವನೆಯಿಂದ. ನಿಸಾರ್ ಅಹಮದ್‌ರವರಿಗೆ ಅವರ ತಂದೆಯವರೇ ಪ್ರಥಮ ಗುರುಗಳಾಗಿ ತಮ್ಮ ಮಗನ ಕನ್ನಡವನ್ನು ತಿದ್ದುತ್ತಿದ್ದರು. 'ವಿಘ್ನೇಶ್ವರ', 'ಕೃತಜ್ಞತೆ' ಮುಂತಾದ ಕಠಿಣ ಶಬ್ದಗಳನ್ನು ಶುದ್ಧವಾಗಿ ಕನ್ನಡದಲ್ಲಿ ಓದಿಸುತ್ತಿದ್ದರು, ಬರೆಸುತ್ತಿದ್ದರು.ಅವರಿಗೆ ಮಕ್ಕಳು ಕನ್ನಡದಲ್ಲಿ ಒಳ್ಳೆಯ ಜ್ಞಾನಾರ್ಜನೆ ಮಾಡಲಿ ಎಂಬ ಆಕಾಂಕ್ಷೆಯಿಂದ ಗಂಗಪ್ಪ ಮಾಸ್ತರರು ಎಂಬುವವರನ್ನು ಮನೆ ಪಾಠದ ಸಲುವಾಗಿ ನೇಮಿಸಿದರು. ಗಂಗಪ್ಪ ಅವರು ಪಂಡಿತರು ಹಾಗೂ ಒಳ್ಳೆಯ ಶಿಸ್ತಿನ ಶಿಕ್ಷಕರಾಗಿದ್ದರು. ನಿಸಾರ್ ಅವರು ಮಾಧ್ಯಮಿಕ ಶಿಕ್ಷಣವನ್ನು ಹೊಸಕೋಟೆಯಲ್ಲಿ ಮುಗಿಸಿದರು. ನಂತರ ಸೆಂಟ್ರಲ್ ಕಾಲೇಜಿನಿಂದ ಭೂವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು 1959ರಲ್ಲಿ ಪಡೆದರು.

## ಸಾಹಿತ್ಯಿಕ ಹಿನ್ನೆಲೆ ಹಾಗೂ ಪರಿಸರ

ಪ್ರೊ: ಕೆ.ಎಸ್.ನಿಸಾರ್ ಅಹಮದ್‌ರವರು ಪ್ರೌಢಶಾಲಾ ಶಿಕ್ಷಣಕ್ಕಾಗಿ ಬೆಂಗಳೂರಿನ ಹತ್ತಿರದ ಹೊಸಕೋಟೆ ಶಾಲೆಯಲ್ಲಿ ಪ್ರವೇಶ ಪಡೆದಾಗ ಅಲ್ಲಿ ಒಳ್ಳೆಯ ವ್ಯಾಸಂಗ ಕೋಣೆಯ ಸೌಲಭ್ಯವಿತ್ತು. ಅಂದಿನ ಕಾಲದಲ್ಲಿ ಅಲ್ಲಿ ಬರುತ್ತಿದ್ದ ಪತ್ರಿಕೆಗಳಾದ ಚಿತ್ರಗುಪ್ತ, ಪ್ರಜಾಮತ, ಜಯಕರ್ನಾಟಕ ಮುಂತಾದ ಪತ್ರಿಕೆಗಳನ್ನು ಓದುತ್ತಿದ್ದರಿಂದ ಇವರಿಗೆ ಸಾಹಿತ್ಯಿಕ ಸ್ಫೂರ್ತಿ ಬರಲು ಕಾರಣವಾಯಿತು.ಇಷ್ಟೇ ಅಲ್ಲದೇ ಶಾಲೆಯ ಪಠ್ಯಕ್ರಮದಲ್ಲಿ ಕುವೆಂಪು, ಮಾಸ್ತಿ, ವೀಸೀ, ಬೇಂದ್ರೆ, ಜಿ.ಪಿ. ರಾಜರತ್ನಂ, ಎಲ್. ಗುಂಡಪ್ಪ, ಪಂಜೆಯವರ ಪದ್ಯಗಳಿರುತ್ತಿದ್ದವು. ಇವರ ಪದ್ಯಗಳು ನಿಸಾರರಿಗೆ ಸಾಹಿತ್ಯದೆಡೆಗೆ ಸೆಳೆಯಲು ತುಂಬಾ ಪ್ರಭಾವ ಬೀರಿದವು.ಅವರ ಸಾಹಿತ್ಯಕ್ಕೆ ಹೊಸ ದಿಕ್ಕನ್ನು ನೀಡಿ ಅವರಿಗೆ ಸ್ಫೂರ್ತಿಯ ದ್ರವ್ಯವನ್ನು ತುಂಬಿದವು.

**"ಬೆಳೆಯ ಸಿರಿ ಮೊಳಕೆಯಲ್ಲೇ ನೋಡು"** ಎಂಬಂತೆ ನಿಸಾರ್‌ರವರಿಗೆ ಕಾವ್ಯದೇವಿ ಒಲಿದದ್ದು ಕೇವಲ 14ನೆಯ ವಯಸ್ಸಿನಲ್ಲಿಯೇ (1947). ಇವರು ತಮ್ಮ ಸ್ನೇಹವರ್ಗದೊಂದಿಗೆ ಯಾವುದೇ ವಿಷಯವನ್ನು ಮುಕ್ತ ಮನಸ್ಸಿನಿಂದ ಚರ್ಚಿಸುತ್ತಿದ್ದರು. ಇವರು 15ನೇ ವರ್ಷದಲ್ಲಿ 'ವನಸುಮ' ಎಂಬ ಹಸ್ತಲಿಖಿತ ಪತ್ರಿಕೆಯನ್ನು ಸಂಪಾದನೆ ಮಾಡಿದ್ದರು. ಇವರಿಗೆ ಹೈಸ್ಕೂಲಿನಲ್ಲಿ ಬಹಳ ಪರಿಣಾಮ ಬೀರಿದ್ದು ನೀತಿಪಾಠದ ಪಿರಿಯಡ್ಡು (ಪ್ರತಿ ವಾರದಲ್ಲಿ ಒಂದು ದಿನ) ಆ ಪಿರಿಯಡ್ಡಿನಲ್ಲಿ ಜಗತ್ತಿನ ಮಹತ್ವದ ಗ್ರಂಥವನ್ನು ಅವರ ಗುರುಗಳು ಓದುತ್ತಿದ್ದರು ಹಾಗೂ ಮುಕ್ತವಾಗಿ ಚರ್ಚಿಸುತ್ತಿದ್ದರು. ಇಂಗ್ಲೀಷಿನಲ್ಲಿರುವ ಅನೇಕ ಕಾದಂಬರಿಗಳನ್ನು ಓದಿ ಹೇಳುತ್ತಿದ್ದರು. ಅದರಲ್ಲಿನ ಚಿತ್ರಣ ಅವರ ಕಾವ್ಯಕ್ಕೆ ಪ್ರೇರಣೆ ನೀಡಿತು. ಅನಕೃಷ್ಣರಾಯರ 'ಸಂಧ್ಯಾರಾಗ', ಬಿ.ಎಂ.ಶ್ರೀ ಯವರ 'ಇಂಗ್ಲೀಷ ಗೀತೆಗಳು', ಮಾಸ್ತಿಯವರ ಸಾಹಿತ್ಯ ಹೀಗೆ ಒಂದೊಂದನ್ನು ಆರಿಸಿಕೊಂಡು ಆ ಪಾಠದ ಅವಧಿಯಲ್ಲಿ ಹೇಳುತ್ತಿದ್ದರು. ಅದು ನಿಸಾರ್ ಅವರಿಗೆ ಒಳ್ಳೆಯ ತರಬೇತಿಯನ್ನು ಕೊಟ್ಟಂತಾಯಿತು. ಅವರಿಗೆ ನಾಗರಾಜಯ್ಯ ಹಾಗೂ ಕೇಶವಮೂರ್ತಿಯವರೆಂಬ ಆ ಕಾಲೇಜಿನ ಗುರುಗಳು ಒಂದು ದಿನ ನಿಸಾರರನ್ನು ಕರೆದು 'ನೀನು ಚೆನ್ನಾಗಿ ಬರೆಯುತ್ತೀಯಾ' ಎಂದು ಬರೆಯಲು ಪ್ರೋತ್ಸಾಹ ನೀಡಿದರು.

ಒಂದು ಸಾರಿ ಎಲ್. ಗುಂಡಪ್ಪ ಎಂಬ ಕನ್ನಡ ಉಪನ್ಯಾಸಕರು ಒಂದು ನಾಡಹಬ್ಬದ ಸಮಾರಂಭದಲ್ಲಿ ಕವಿತೆಗಳನ್ನು ಹೇಳಲು ಸೂಚಿಸಿದಾಗ ಅವರ ಸ್ನೇಹಿತರು ನಿಸಾರ್ ಅವರನ್ನು ಸೂಚಿಸಿದ್ದರು. ಇವರ ಕವಿತೆಯನ್ನು ಆಲಿಸಿ, ಸನ್ಮಾನಿಸಿ ಹೊಗಳಿದರು. 1953–54ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಕರ್ನಾಟಕ ಸಂಘವಿತ್ತು. ಆಗ ಅದು ಬಹಳ ಪ್ರತಿಷ್ಠಿತ ಕಾಲೇಜಾಗಿತ್ತು. ಡಾ.ಜಿ.ಪಿ. ರಾಜರತ್ನಂ ಹಾಗೂ ವೀ. ಸೀತಾರಾಮಯ್ಯನವರು ನಿಸಾರರ ಗುರುಗಳಾಗಿದ್ದರು. ಅವರು ನಿಸಾರ್‌ರ ಪದ್ಯಗಳನ್ನು ಓದಿ 'ಪದ್ಯಾಂಜಲಿ' ಎನ್ನುವ ಪುಸ್ತಕವನ್ನು ಹೊರತಂದರು. ಆ ಪುಸ್ತಕದಲ್ಲಿ ಇವರ ಕವನಗಳ ಜೊತೆಗೆ ಲಂಕೇಶ, ನಾಡಿಗ, ಎಂ.ಜಿ.ಸುನಿತಾ, ಶ್ರೀನಿವಾಸ ಮುಂತಾದವರ ಕವನಗಳಿದ್ದವು. ಇದರಿಂದ ಕಾವ್ಯಕ್ಷೇತ್ರದಲ್ಲಿ ಇವರಿಗೆ ಸ್ವಲ್ಪ ಹೆಸರು ಬಂತು. ದಿನಪತ್ರಿಕೆ ಪ್ರಜಾವಾಣಿಯಲ್ಲಿ ಉಪ ಸಂಪಾದಕರಾಗಿ ವೈಎನ್ಕೆ ಎಂಬುವವರಿದ್ದರು. ಅವರಿಂದ ನವ್ಯ ಸಾಹಿತ್ಯದ ಸಂಪರ್ಕ ಬಂದಿತು. 1953–54ರಲ್ಲಿ ಡಿ.ಎನ್.ಸುಬ್ಬರಾಯರ ಕಲಾಮಂದಿರದಲ್ಲಿ ಇವರೆಲ್ಲಾ ಸೇರುತ್ತಿದ್ದರು.ಅಲ್ಲಿ ಪ್ರಸಿದ್ಧ ಸಾಹಿತಿಗಳು ಬರುತ್ತಿದ್ದರು. ಹೀಗಾಗಿ ಅವರೆಲ್ಲರ ಪರಿಚಯ ಇವರಿಗಾಗತೊಡಗಿತು. ಇವರೆಲ್ಲರ ಸಂಪರ್ಕದಿಂದ ನಿಸಾರರ ಸಾಹಿತ್ಯ ಕ್ಷೇತ್ರ ಬೆಳೆಯಲು ಸಹಾಯಕವಾಯಿತು. ಇವರ ಆಸಕ್ತಿ ಹಾಗೂ ಆಪ್ತ ಸಾಹಿತ್ಯಕ ವಲಯದ ಕಾರಣವಾಗಿ ಸಾಹಿತ್ಯದೇವಿ ಇವರನ್ನು ಬಹುಬೇಗ ಆಕರ್ಷಿಸಿದಳು.

# ವೃತ್ತಿ ಮತ್ತು ಪ್ರವೃತ್ತಿ

'ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯಾ' ಎನ್ನುವ ಹಾಗೆ ಪ್ರೊ: ನಿಸಾರ್ ಅಹಮದ್‌ರವರ ವೃತ್ತಿ ಹಾಗೂ ಪ್ರವೃತ್ತಿ ತುಂಬಾ ವಿಶಿಷ್ಟವಾದದ್ದು. ಇವರು ಹುದ್ದೆಗೆ ಸೇರಿದ್ದು ಆಕಸ್ಮಿಕ. 1958ರಲ್ಲಿ ಆಗತಾನೆ ಅನರ್ಸ ಮುಗಿಸಿದ್ದರು. ಕೆಲಸಕ್ಕಾಗಿ ಸೇರಿದರು ಗುಲಬರ್ಗಾಕ್ಕೆ ಪೋಸ್ಟಿಂಗ್ ಕೊಟ್ಟರು. ಗುಲಬರ್ಗಾ ಎಂದರೆ ಎದೆ ಝುಲ್ಲೆನ್ನುವಂತಹ ಅನುಭವ ಆ ಭಾಗದವರಿಗೆ ಆಗುವಂತೆ ಇವರಿಗೂ ಸಹ ಆಯಿತು. ಆಗ ಗುಲಬರ್ಗಾ ಬಿಕೋ ಎನ್ನುತ್ತಿತ್ತು. ಹಿಂದುಳಿದ ಈ  ನಗರ ಚಿಕ್ಕ ಊರಿನಂತೆ ಕಾಣುತ್ತಿತ್ತು. ಇಲ್ಲಿ ಸಹಾಯಕ ಭೂ ವಿಜ್ಞಾನಿಯಾಗಿ 7–8 ತಿಂಗಳಲ್ಲಿ ಇಲ್ಲಿಯ ಹಳ್ಳಿಯ ಜೀವನದ ಅನುಭವವಾಯಿತು. ಅಷ್ಟೇ ಅಲ್ಲದೇ ಅವರಿಗೆ ಇಲ್ಲಿನ ಪರಿಸರದೊಂದಿಗೆ ಹೊಂದಿಕೊಳ್ಳಲೂ ಸಹ ತೊಂದರೆಯಾಯಿತು. ಆದರೂ ಇಲ್ಲಿ ಅವರಿಗೆ ಬಹಳಷ್ಟು ಓದಲು ಸಮಯ ಸಿಕ್ಕಿತು. ಕುವೆಂಪುರವರ 'ಕಾನೂರು ಹೆಗ್ಗಡತಿ'ಯಂತಹ ಕಾದಂಬರಿ, ಅವರ ಪದ್ಯಗಳು, ಬೇಂದ್ರೆ ಅಡಿಗ, ನರಸಿಂಹ ಸ್ವಾಮಿಯವರ ಪದ್ಯಗಳನ್ನು ಓದಿದರು. ನಂತರ ಬೆಂಗಳೂರಿಗೆ ಬಂದು ಎಂ.ಎಸ್ಸಿ ಮಾಡಿಕೊಂಡರು. ಮೊದಲು ಬೆಂಗಳೂರು ವಿಶ್ವವಿದ್ಯಾಲಯವು ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿತ್ತು. ಆಗ ರಸಋಷಿ ಕುವೆಂಪುರವರು ಕುಲಪತಿಗಳಾಗಿದ್ದರು. ಒಮ್ಮೆ ಆಕಾಶವಾಣಿಯ ನಾಡಹಬ್ಬದ ಸಮಾರಂಭದಲ್ಲಿ ಕುವೆಂಪು, ಪು.ತಿ.ನ. ರಾಮಯ್ಯರವರಂತಹ ಕವಿಗಳೊಂದಿಗೆ ಕವಿ ಸಮ್ಮೇಳನದಲ್ಲಿ ಭಾಗವಹಿಸುವ ಭಾಗ್ಯ ನಿಸಾರ ಅವರಿಗೆ ಲಭಿಸಿತು. ಆ ಸಮಾರಂಭದ ಅಧ್ಯಕ್ಷತೆಯನ್ನು ಮಾಸ್ತಿಯವರು ಮಹಿಸಿಕೊಂಡಿದ್ದರು. ಆಗ ರಸಋಷಿ ಕುವೆಂಪುರವರು ನಿಸಾರ್ ಅವರನ್ನು ಪಕ್ಕದಲ್ಲಿ ಕೂರಿಸಿಕೊಂಡು "ನೀವೇನು ಮಾಡುತ್ತಿದ್ದೀರಿ" ಎಂದು ಪ್ರಶ್ನಿಸಿದಾಗ "ಅಧ್ಯಾಪಕನಾಗಬೇಕೆಂದಿದ್ದೇನೆ" ಎಂದು ನಿಸಾರರು ಉತ್ತರಿಸಿದರು. ಅದೇ ನೆನಪಿನಲ್ಲಿಟ್ಟುಕೊಂಡು ನಿಸಾರ್ ಅವರನ್ನು ಮೈಸೂರಿನ ವಿಜಯದಶಮಿ ಕವಿ ಸಮ್ಮೇಳನಕ್ಕೆ ಕುವೆಂಪುರವರು ಕರೆಸಿದರು. ನಂತರ ಮುಂದೆ ಎಂಟು ದಿನಗಳಲ್ಲಿಯೇ ಕುವೆಂಪುರವರೇ ಸೆಂಟ್ರಲ್ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕ ಕೆಲಸ ಒದಗಿಸಿಕೊಟ್ಟರು. ಆಗ ಸೆಂಟ್ರಲ್ ಕಾಲೇಜು ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿತ್ತು.

ಮುಂದೆ 1960–62ರಲ್ಲಿ ಚಿತ್ರದುರ್ಗಕ್ಕೆ ನಿಸಾರ್ ಅವರಿಗೆ ವರ್ಗವಾಯಿತು. ಅಲ್ಲಿ ಅವರಿಗೆ ಸಾಕಷ್ಟು ಓದಲು ಸಮಯ ಸಿಕ್ಕಿತು. ಏಕೆಂದರೆ ಚಿತ್ರದುರ್ಗವು ಆಗ ಹಳ್ಳಿಯಂತೆ ಇತ್ತು. ಮನರಂಜನೆ ಇರಲಿಲ್ಲ. ಕೆಲವು ದಿನಗಳ ನಂತರ ಬೆಂಗಳೂರಿಗೆ ಬಂದು ಮತ್ತೆ ಸಾಹಿತ್ಯ ಪರಿಸರದಲ್ಲಿ ಬೆರೆತರು. 1967ರಿಂದ 1972ರವರೆಗೆ ಐದು ವರ್ಷಗಳ ಕಾಲ ಬೆಂಗಳೂರಿನಿಂದ ಶಿವಮೊಗ್ಗಕ್ಕೆ ವರ್ಗವಾಗಿ ಹೋದರು. ಈ ಐದು ವರ್ಷಗಳ ಕಾಲ ಅವರ ಸಾಹಿತ್ಯದ ಪರ್ವಕಾಲ, ಸುವರ್ಣಕಾಲವೆಂದು ಹೇಳಿದರೆ ತಪ್ಪಾಗಲಾರದು. ಮತ್ತೆ 1975ರಿಂದ 78ರಲ್ಲಿ ಮತ್ತೆ ಶಿವಮೊಗ್ಗಕ್ಕೆ ವರ್ಗವಾಗಿ ಒಟ್ಟು 8 ವರ್ಷಗಳ ಶಿವಮೊಗ್ಗದ ಜೀವನ ಇವರ ಸಾಹಿತ್ಯದ ಉಗಮದ ಮಧುರಕಾಲ. ಅಲ್ಲಿ ಇವರೊಬ್ಬರೇ ಇದ್ದುದರಿಂದ ಅವರಿಗೆ ಓದಲು, ಚಿಂತನೆ ಮಾಡಲು ಏಕಾಂತದ ಸಮಯ ದೊರೆಯಿತು. ಇಲ್ಲಿಯೇ ಅವರಿಂದ 'ಸಂಜೆ ಐದರ ಮಳೆ', 'ನಾನೆಂಬ ಪರಕೀಯ' ಮತ್ತು 'ನಿತ್ಯೋತ್ಸವ'ದಂತಹ ಮಹತ್ವದ ಸಂಕಲನಗಳು ರಚನೆಯಾದವು.

ಶಿವಮೊಗ್ಗದ ಜನ ಜೀವನ ಸಂಸ್ಕೃತಿ ಅಲ್ಲಿನ ವಾತಾವರಣ ಇವರಿಗೆ ಹಿಡಿಸಿತು. ಏಕಾಂಗಿಯಾಗಿ ಸೇವೆ ಸಲ್ಲಿಸುವಾಗ ಹೆಚ್ಚಿನ ಓದಿಗೆ ಅನುಕೂಲಕರವಾದ ಪರಿಸರ ಒದಗಿತ್ತು. ಹೀಗಾಗಿ ಇವರಿಗೆ ಸಾಹಿತ್ಯ ಕೃಷಿ ಗೈಯಲು ಅವಕಾಶ ದೊರೆತಂತಾಗಿತ್ತು. ಅಲ್ಲಿ ಕೆ.ಜಿ.ಸುಬ್ರಹ್ಮಣ್ಯರಂತಹವರು ಇವರು ಬರೆದದ್ದನ್ನು ಓದುವಂತಹ ಜನರು ಪ್ರೋತ್ಸಾಹಿಸಿದರು. ಇವರ ಕವನಗಳನ್ನು ಓದಿ ಸಂತೋಷಪಡುವವರಲ್ಲಿ ಅಲ್ಲಿನ ಶ್ರೀನಿವಾಸ, ರಾಮಸ್ವಾಮಿ, ಲೀಲಾ ಮತ್ತು ಸ್ನೇಹಿತರು ಹಾಗೂ ನಿಸಾರರ ವಿದ್ಯಾರ್ಥಿಗಳು ಇವರ ಸಾಹಿತ್ಯವನ್ನು ಓದಿ ಚರ್ಚಿಸಿ ಪ್ರೋತ್ಸಾಹಿಸುತ್ತಿದ್ದರು. ಹಾಗೆಯೇ ಅಲ್ಲಿನ ಶ್ರೀಕಂಠ ಕೂಡಿಗೆ ಮತ್ತು ಮಾನಪ್ಪ ಮುಂತಾದ ಆಸಕ್ತರ ಪ್ರೋತ್ಸಾಹವಿತ್ತು. ಅದೇ ವೇಳೆಗೆ ಕುವೆಂಪುರವರ ಊರಿಗೆ ಹೋಗಿ ಕಾಲ ಕಳೆದದ್ದು, ಆ ನೆಮ್ಮದಿಯ ವಾತಾವರಣದಲ್ಲಿಯೇ ಅತೀ ಹೆಚ್ಚು ನಿಸಾರ್ ಬರೆದದ್ದು, ಒಳ್ಳೆಯ ಕವನಗಳೆಲ್ಲಾ ಅಲ್ಲಿಯೇ ಬಂದವು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇವರೂ ಭೂ ವಿಜ್ಞಾನ ಪಾಠ ಮಾಡಿದ್ದು, ಇವರ ಸಾಹಿತ್ಯಕ್ಕೆ ತುಂಬಾ ಅನುಕೂಲವಾಯಿತು. ಅಲ್ಲಿನ ಪ್ರಾಕೃತಿಕ ವಿಷಯಗಳನ್ನು ಅರಿತುಕೊಂಡು. ಕಾವ್ಯ ರಚನೆಗೆ ಅನುಕೂಲವಾಯಿತು. ಭೂಕಂಪಗಳು, ಜ್ವಾಲಾಮುಖಿ, ನದಿ, ಸಾಗರಗಳ ಅಧ್ಯಯನಗಳು ಬರುತ್ತಿದ್ದರಿಂದ ವರ್ಣನಾತ್ಮಕವಾಗಿ ಬರೆಯಲು

ಸಹಾಯಕವಾಯಿತು. ಇವರ ಭೂ ವಿಜ್ಞಾನ ಕಾವ್ಯದ ಹೋಲಿಕೆ, ಪ್ರತಿಮೆ, ಸಂಕೇತಕ್ಕೆ ಎಷ್ಟೊಂದು ಆಕರಗಳನ್ನು ಕೊಟ್ಟಿದೆ ಎಂಬುದು ಇವರು ರಚಿಸಿದ ಕಾವ್ಯಗಳನ್ನು ನೋಡಿದರೆ ಅರ್ಥವಾಗುತ್ತದೆ.

**ಕೌಟುಂಬಿಕ ಜೀವನ:**

ಪ್ರೊ: ನಿಸಾರ್ ಅಹಮದ್‌ರವರ ದಾಂಪತ್ಯ ಜೀವನ ಯಾವುದೇ ಏರುಪೇರುಗಳಿಲ್ಲದೆ ಸುಖ ಸಂತೋಷಮಯವಾಗಿತ್ತು. 1966 ಎಪ್ರೀಲ್ 17ಕ್ಕೆ ಇವರು ಷಾನವಾಜ್ ಬೇಗಂರವರನ್ನು ವಿವಾಹವಾದರು. ಇವರ ಪತ್ನಿಯವರೂ ಸಹ ಬಿ.ಎ.ಪದವಿಯವರೆಗೆ ಶಿಕ್ಷಣವನ್ನು ಪಡೆದವರಾಗಿದ್ದರು. ನಿಸಾರ್ ಅಹಮನದ್‌ರವರಿಗೆ ಇಬ್ಬರು ಗಂಡು ಮಕ್ಕಳು(ನವೀದ್ ನಿಸಾರ್ ಮತ್ತು ಫರೀದ್ ನಿಸಾರ್) ಹಾಗೂ ಇಬ್ಬರು ಹೆಣ್ಣು ಮಕ್ಕಳು (ತನ್ವೀರ್ ಫಾತೀಮಾ ಮತ್ತು ಫರ್‌ಹೀನ್ ಫಾತಿಮಾ). ನಿಸಾರ್ ಅಹಮದ್‌ರವರು ತಮ್ಮ ಕುಟುಂಬದವರ ಆಗು ಹೋಗುಗಳಲ್ಲಿ ಹೆಚ್ಚಾಗಿ ಬೆರೆಯದೆ ತಮ್ಮ ಓದು ಬರಹದಲ್ಲಿ ತಲ್ಲೀನರಾಗಿರುತ್ತಿದ್ದರು."ಇವರ ಜಾಯಮಾನವೇ ಹೀಗೆ" ಎನ್ನುತ್ತಾ ಎಲ್ಲವನ್ನೂ ಇವರ ಪತ್ನಿಯವರೇ ತುಂಬಾ ಜವಾಬ್ದಾರಿಯಿಂದ ನೋಡಿಕೊಳ್ಳುತ್ತಿದ್ದರು. ಹೀಗಾಗಿ ತಮ್ಮ ಪತ್ನಿಗೆ ಮೊದಲ ಕೃತಜ್ಞತೆ ಮತ್ತು ಋಣಿಯಾಗಿದ್ದಾಗಿ ಸ್ವತ: ನಿಸಾರ್ ಅವರೇ ಹೇಳುತ್ತಾರೆ. ನಿಸಾರ್ ಅವರ ಬರವಣಿಗೆಗೆ ಮೂಲವಾಗಿ ಒತ್ತಾಸೆ ಕೊಟ್ಟವರು ಅವರ ಸಹಧರ್ಮಿಣಿ ಷಾನವಾಜ ಬೇಗಂ(ಪತ್ನಿ)ರವರು. ಇವರ ಮಕ್ಕಳಲ್ಲಿ ದೊಡ್ಡವರು ನವೀದ್ ನಿಸಾರ್ ಮದುವೆಯಾಗಿ ಬೆಂಗಳೂರಿನಲ್ಲಿದ್ದಾರೆ. ಎರಡನೆಯವರು 20 ವರ್ಷಗಳಿಂದ ಅಮೇರಿಕಾದಲ್ಲಿದ್ದಾರೆ. ಹಾಗೆಯೇ ತನ್ವೀರ ಫಾತಿಮಾ ಎಂಬ ಮಗಳೂ ಸಹ ಅಮೇರಿಕಾದಲ್ಲಿದ್ದಾರೆ. ನಿಸಾರ್‌ರವರು ತಮ್ಮ ಮಕ್ಕಳಿಗೆ ಸಾಹಿತ್ಯದ ಪ್ರಭಾವಕ್ಕೆ ಬಲವಂತ ಮಾಡಲಿಲ್ಲ. ಹೀಗಾಗಿ ಅವರು ಸಾಹಿತ್ಯದಲ್ಲಿ ತೊಡಗಲಿಲ್ಲ. ಆದರೂ ಅವರೆಲ್ಲರೂ ಇವರ ಸಂತೋಷದಲ್ಲಿ ಭಾಗಿಯಾಗುತ್ತಾರೆ, ಸಮಾರಂಭಗಳಲ್ಲಿ ಭಾಗಿಯಾಗುತ್ತಾರೆ.

**ಹವ್ಯಾಸ:**

ನಿಸಾರ್‌ರವರಿಗೆ ಸಂಗೀತ ಬಹಳ ಇಷ್ಟ ಹಾಗೂ ವಾಸ್ತುಶಿಲ್ಪವೂ ಬಹಳ ಇಷ್ಟ. ಪ್ರಾಚೀನ ಕಾಲದ ಗುಡಿ, ಮಸೀದಿ, ಕೋಟೆ ಕೊತ್ತಲುಗಳು, ಹರಪ್ಪಾ–ಮೆಹೆಂಜೋದಾರೋ ನಾಗರಿಕತೆಯಲ್ಲಿ ತುಂಬಾ ಆಸಕ್ತಿ, ಬಾದಾಮಿ, ಐಹೊಳೆ,

ಪಟ್ಟದಕಲ್ಲು, ವಿಜಾಪುರ ಮುಂತಾದ ಐತಿಹಾಸಿಕ ಸ್ಥಳಗಳ ಅಧ್ಯಯನ ಇವರ ಹವ್ಯಾಸಗಳು. ನಿಸಾರ್‌ರವರಿಗೆ ಮನರಂಜನೆಯೆಂದರೆ ದೂರದರ್ಶನ ವೀಕ್ಷಿಸುವರು, ಬಿಬಿಸಿ ಚಾನೆಲ್, ನ್ಯಾಶನಲ್ ಜಿಯಾಗ್ರಫಿ, ಡಿಸ್ಕವರಿ ಹಾಗೂ ಒಳ್ಳೆಯ ಕನ್ನಡ, ಹಿಂದಿ ಹಾಗೂ ಇಂಗ್ಲೀಷ್ ಚಿತ್ರಗಳನ್ನು ನೋಡುವದು.ಸದಾ ಓದು ಬರಹಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

**ಮರೆಯದ ಕ್ಷಣಗಳು:**

ನಿಸಾರ್ ಅವರ ಜೀವನದಲ್ಲಿ ಪ್ರತಿ ಹೆಜ್ಜೆಯೂ ಮರೆಯದ ಕ್ಷಣಗಳಾಗಿವೆ. ಅವುಗಳಲ್ಲಿ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಪ್ರಕಟವಾದ ಕವನದಿಂದ ಆದ ಸಂತೋಷ, ಮಹಾಕವಿ ಕುವೆಂಪುರವರು ಇವರ ಬಗ್ಗೆ ಆಡಿದ ಒಂದೆರಡು ಮಾತುಗಳು.ನಿಸಾರ್ ಅವರ ಹಾಡುಗಳು ಅವರಿಗೆ ಗೊತ್ತಿಲ್ಲದೇ ಬೇರೆಯವರು ಹಾಡಿದಾಗ ಅವರಿಗೆ ಉಂಟಾಗುವ ಸಂತೋಷದ ಕ್ಷಣಗಳು. ಬೆಂಗಳೂರಿನಲ್ಲಿ ಅಯ್ಯಪ್ಪನ ಭಕ್ತರು 'ನಿತ್ಯೋತ್ಸವ'ದ ಧಾಟಿಯಲ್ಲಿ ಒಂದು ಸಾರಿ ಭಕ್ತರು ಹಾಡಿದ ಆ ಹಾಡನ್ನು ಕೇಳಿ ರೋಮಾಂಚನಗೊಂಡದ್ದು. ಅಪರೂಪದ ಸಂತೋಷವೆಂದರೆ ಶಾಲಾ ಕಾಲೇಜುಗಳಲ್ಲಿ ನಿತ್ಯೋತ್ಸವದ ಹಾಡುಗಳನ್ನು ಹಾಡಿದಾಗ ಇಂತಹ ಸಂದರ್ಭಗಳು ಅವರ ಮರೆಯದ ಸವಿನೆನಪುಗಳಾಗಿವೆ.

## ಪ್ರಶಸ್ತಿ, ಗೌರವಗಳು

ಕನ್ನಡ ಸಾಹಿತ್ಯದಲ್ಲಿ ತಮ್ಮ ಅಪೂರ್ವವಾದ ಬರವಣಿಗೆಯಿಂದ ಜನಮನಸೂರೆಗೊಂಡ ಪ್ರೊ.ಕೆ.ಎಸ್.ನಿಸಾರ್ ಅಹಮದ್‌ರವರಿಗೆ ಅರಸಿ ಬಂದ ಪ್ರಶಸ್ತಿ, ಸನ್ಮಾನಗಳು, ದೊರೆತ ಸ್ಥಾನಮಾನ ಗೌರವಗಳು ಅಪಾರ. ಆ ಪ್ರಶಸ್ತಿ ಗೌರವಗಳಲ್ಲಿ 1967 ಹಾಗೂ 1985ರಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ನವದೆಹಲಿಯಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಕನ್ನಡವನ್ನು ಪ್ರತಿನಿಧಿಸಿಧಿಸುವ ಅವಕಾಶ. 1973 ರಿಂದ 1975ರವರೆಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದರು. 1977ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದರು. 1978ರಲ್ಲಿ ಅಂತರಾಷ್ಟ್ರೀಯ ಮಕ್ಕಳ ವರ್ಷದಲ್ಲಿ "ಹಕ್ಕಿಗಳು" ಕೃತಿಗೆ ಎನ್.ಸಿ.ಈ.ಆರ್.ಟಿ.ರಾಷ್ಟ್ರೀಯ ಬಹುಮಾನ. ಅದೇ ವರ್ಷ "ಹಕ್ಕಿಗಳು" ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ.ಅವರ 'ಹೆಜ್ಜೆಗುರುತು' ಕೃತಿಗೆ 1981ರಲ್ಲಿ 'ಸೋವಿಯತ್ ಲ್ಯಾಂಡ್' ನೆಹರು ಅಂತರಾಷ್ಟ್ರೀಯ ಪುರಸ್ಕಾರ, ಅದೇ ವರ್ಷ ಅವರ 'ಇದು ಬರೀ ಬೆಡಗಲ್ಲೋ ಅಣ್ಣ' ಗ್ರಂಥಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಿಮರ್ಶಾ ಪ್ರಕಾರದ ಅತ್ಯುತ್ತಮ ಕೃತಿಯೆಂಬ ಪ್ರಶಸ್ತಿ, 1981ರಲ್ಲಿ ಕರ್ನಾಟಕ ರಾಜ್ಯೋತ್ಸವ ಬೆಳ್ಳಿ ಹಬ್ಬದ ಪ್ರಯುಕ್ತ 'ರಾಜ್ಯೋತ್ಸವ ಪ್ರಶಸ್ತಿ', 1982ರಲ್ಲಿ ಅತ್ಯುತ್ತಮ ಕವನ ಸಂಗ್ರಹವೆಂದು ಅವರ 'ಅನಾಮಿಕ ಆಂಗ್ಲರು' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ, 1978ರಲ್ಲಿ ಭಾರತೀಯ ಭಾಷೆಗಳಲ್ಲೇ ಮೊಟ್ಟ ಮೊದಲನೆಯ ಭಾವಗೀತೆಗಳ ಕ್ಯಾಸೆಟ್ "ನಿತ್ಯೋತ್ಸವ" ಬಿಡುಗಡೆ. 1973ರಲ್ಲಿ ಷೇಕ್ಸಪೀಯರ್ ಮಹಾಕವಿಯ " ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್" ಹಾಗೂ 1975ರಲ್ಲಿ "ಒಥೆಲೋ" ನಾಟಕವನ್ನು ಸಮಕಾಲೀನ ಭಾಷೆಯಲ್ಲಿ ಅನುವಾದಿಸಿ ಮೊಟ್ಟಮೊದಲನೆಯ ಸಲ ರಂಗಸ್ಥಳದ ಮೇಲೆ ಅವುಗಳನ್ನು ಅತ್ಯಂತ ಯಶಸ್ವಿಗೊಳಿಸಲು ಕಾರಣರಾದರು. ಕೇಂದ್ರ ಚಲನಚಿತ್ರ ಸೆನ್ಸಾರ್ ಬೋರ್ಡಿನ ಕನ್ನಡ ವಿಭಾಗದ ಸದಸ್ಯರಾಗಿದ್ದರು. ಬೆಂಗಳೂರು ದೂರದರ್ಶನ ಕಾರ್ಯಕ್ರಮಗಳ ಸಲಹಾ ಸಮಿತಿಯ ಸದಸ್ಯರಾಗಿದ್ದರು. ಆಕಾಶವಾಣಿಯ ಕಾರ್ಯಕ್ರಮ ಸುಧಾರಣಾ ಸಲಹಾ ಸಮಿಯ ಸದಸ್ಯರಗಿದ್ದರು.ಮೈಸೂರು ವಿಶ್ವವಿದ್ಯಾಲಯ ಹೊರತಂದ 'ರತ್ನಸಂಪುಟ' ಎಂಬ ಬೃಹತ್ ಕಾವ್ಯ ಸಂಪುಟದ ಸಂಪಾದಕ ಮಂಡಲಿಯಲ್ಲಿದ್ದರು.

1995ರಲ್ಲಿ ವಿಜಯಪುರದಲ್ಲಿ ನಡೆದ ಬೆಂಗಳೂರು ಜಿಲ್ಲಾ ಗ್ರಾಮಾಂತರ 4ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಇಲಾಖೆಗೆ ಒಳಪಟ್ಟ ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜಸ್ ಸಲಹಾ ಸಮಿತಿಗೆ ಕರ್ನಾಟಕದ ಏಕೈಕ ಪ್ರತಿನಿಧಿಯಾಗಿದ್ದರು. ಕರ್ನಾಟಕ ಸರಕಾರ ಸಚಿಸಿದ್ದ ಉನ್ನತಮಟ್ಟದ "ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ"ಯ ಸದಸ್ಯರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ 1984ರಿಂದ 1987ರವರೆಗೆ ಮೂರು ವರ್ಷ ಸೇವೆ ಸಲ್ಲಿಸಿದ್ದಾರೆ. ಅವರ ಕಾಲದಲ್ಲಿ ಅಕಾಡೆಮಿಯ ಕಾರ್ಯಕ್ರಮಗಳು ತಾಲ್ಲೂಕು ಮತ್ತು ಗ್ರಾಮಾಂತರ ಪ್ರದೇಶಗಳಿಗೂ ವ್ಯಾಪಿಸಿದವು. ಕರ್ನಾಟಕ ಸರ್ಕಾರದ ಪುಸ್ತಕಗಳ ಸಗಟು ಖರೀದಿಯ ಸಮಿತಿಯ ಸದಸ್ಯರಾಗಿದ್ದರು. ಇವರ "ಮನದೊಂದಿಗೆ ಮಾತುಕತೆ' ಕೃತಿಗೆ 1991ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸೃಜನೇತರ ವಿಭಾಗದಲ್ಲಿ ಅತ್ಯುತ್ಕೃಷ್ಟ ಕೃತಿಯ ಪುರಸ್ಕಾರ ದೊರೆತಿದೆ. 1992ರಲ್ಲಿ ಇವರ "ಹಿರಿಯರು ಹರಸಿದ ಹೆದ್ದಾರಿ" ವೈಚಾರಿಕ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉತ್ತಮ ಪುಸ್ತಕ ಪ್ರಶಸ್ತಿ ಲಭಿಸಿದೆ. ಸರ್ಕಾರದ ಪ್ರತಿಷ್ಠಿತ "ಪಂಪ ಪ್ರಶಸ್ತಿ"ಯ ಆಯ್ಕೆ ಸಮಿತಿಯ ಸದಸ್ಯರಾಗಿದ್ದರು. 'ಕಾನೂನು ಶಬ್ದಕೋಶ'ದ ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ಕರ್ನಾಟಕ ಸರ್ಕಾರಇವರನ್ನು ನೇಮಿಸಿತು.1994ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಇವರಿಗೆ "ಫೆಲೋಷಿಪ್" ಗೌರವ ನೀಡಿ ಸನ್ಮಾನಿಸಿದೆ. 1994ರಲ್ಲಿ ಕೊಲ್ಲಿ ರಾಷ್ಟ್ರದ ದುಬೈ ಮತ್ತು ಅಬುಧಾಭಿ ಪಟ್ಟಣದಲ್ಲಿ ಇವರನ್ನು ಅಲ್ಲಿನ ಕರ್ನಾಟಕ ಸಂಘಗಳು ಸನ್ಮಾನಿಸಿವೆ.1996ರಲ್ಲಿ ಡಾ.ದೇ.ಜ.ಗೌ. ಟ್ರಸ್ಟ್ ವತಿಯಿಂದ 'ವಿಶ್ವಮಾನವ' ಪ್ರಶಸ್ತಿ, ಬೆಂಗಳೂರಿನ ಕಲಾರತ್ನ ಸಂಸ್ಥೆಯ ವತಿಯಿಂದ 'ಕರ್ನಾಟಕ ಜ್ಯೋತಿ' ಪ್ರಶಸ್ತಿ, 1994ರ ಬಿ.ಎಂ.ಶ್ರೀ ಪ್ರಶಸ್ತಿ, 1999ರಲ್ಲಿ ಹೆಸರುಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನೆ ಸಂಸ್ಥೆ ವತಿಯಿಂದ 'ಕನ್ನಡ ಕಂಪು' ಪ್ರಶಸ್ತಿ, 2000ರಲ್ಲಿ ಡಾ.ಸಾ.ಶಿ.ಮ ಪ್ರಶಸ್ತಿ, 2001ರ 'ಸಹಕಾರ ರತ್ನ' ಪ್ರಶಸ್ತಿ, 2002ರಲ್ಲಿ ಅನಕೃ ಪ್ರಶಸ್ತಿ, 2002ರಲ್ಲಿ ವೈ.ಟಿ. ಮತ್ತು ತಾತಾಚಾರಿಯ ಭ್ರಮರ ಟ್ರಸ್ಟ್ ವತಿಯಿಂದ ಪ್ರೊ.ವೈ.ಟಿ. ತಾತಾಚಾರಿ ಕನ್ನಡ ಸಾಹಿತ್ಯ ಪುರಸ್ಕಾರದಿಂದ ಸನ್ಮಾನಿತರಾಗಿದ್ದಾರೆ. ಪುರಸ್ಕಾರ, 2002ರಲ್ಲಿ ಅಮೇರಿಕಾದ ಡೆಟ್ರಾಯಿಟ್‌ನಲ್ಲಿ ನಡೆದ ಎರಡನೆಯ ವಿಶ್ವ ಕನ್ನಡ ಸಮ್ಮೇಳನದ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಗೌರವ, 2002ರಲ್ಲಿ ಅಮೇರಿಕಾದ ವಿವಿಧ ನಗರಗಳಲ್ಲಿಯ ಕನ್ನಡ ಸಂಘಗಳು, ಸಂಘ ಸಂಸ್ಥೆಗಳು ಶ್ರೀಯುತರನ್ನು ಸನ್ಮಾನಿಸಿದ್ದಾರೆ.

ಅಮೇರಿಕಾದಲ್ಲಿ ಪ್ರಮುಖ ನಗರಗಳಲ್ಲಿ ಹಲವಾರು ಉಪನ್ಯಾಸಗಳನ್ನು ನೀಡಿದ್ದಾರೆ. ಕರ್ನಾಟಕ ವಿ.ವಿ. ಹಾಗೂ ಕುವೆಂಪು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ. ಹೀಗೆ ಇವರಿಗೆ ಹುಡುಕಿಕೊಂಡು ಬಂದ ಗೌರವ, ಪ್ರಶಸ್ತಿಗಳ ಪಟ್ಟಿ ಬೆಳೆಯುತ್ತದೆ. 2006ರಲ್ಲಿ ಶಿವಮೊಗ್ಗದಲ್ಲಿ ಜರುಗಿದ ಅಖಿಲ ಭಾರತ 73ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಹೀಗೆ ಅವರ ವ್ಯಕ್ತಿತ್ವಕ್ಕೆ, ಸಾಹಿತ್ಯ ಸೇವೆಗೆ ಅನೇಕ ಪುರಸ್ಕಾರಗಳು, ಗೌರವಗಳು ದೊರೆತಿವೆ.

ಪ್ರೊ.ಕೆ.ಎಸ್.ನಿಸಾರ್ ಅಹಮದ್‌ರವರು ತಮ್ಮ ಸರಳ ಶೈಲಿಯ ಉದಾತ್ತ ಜೀವನದೊಂದಿಗೆ ತಮ್ಮ ಅಪ್ರತಿಮವಾದ ಬರಹಗಳ ಮೂಲಕ ಅನೇಕ ಸ್ಥಾನಮಾನ, ಗೌರವಗಳನ್ನು ಪಡೆಯುವ ಮುಖಾಂತರ ಕನ್ನಡ ಭಾಷೆಗೆ, ಕನ್ನಡ ನಾಡಿಗೆ, ಭಾರತ ದೇಶಕ್ಕೆ ಕೀರ್ತಿಯನ್ನು ತಂದಿದ್ದಾರೆ.

## ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆ 1984–1987

ಪ್ರೊ. ಕೆ.ಎಸ್. ನಿಸಾರ್ ಅಹಮದ್‌ರವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜವಾಬ್ದಾರಿಯನ್ನು ಹೊತ್ತು ಅಧ್ಯಕ್ಷರಾಗಿದ್ದಾಗ ಅವರ ಸದಸ್ಯರ ತಂಡ ವಿಶಿಷ್ಟವಾಗಿತ್ತು. ಬಹುಶ: ಒಂದು ಆದರ್ಶ ಸದಸ್ಯರ ಪಡೆ ಅದಾಗಿತ್ತೆಂದು ಆ ತಂಡದಲ್ಲಿನ ಸದಸ್ಯರು ಬಂಡಾಯ ಸಾಹಿತಿಗಳಾದಂತಹ ಬಿ.ಟಿ.ಲಲಿತಾನಾಯಕ್‌ರವರು ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟಿದ್ದಾರೆ. ನಿಸಾರ್ ಅಹಮದ್‌ರವರು ಅಧ್ಯಕ್ಷರಾಗಿದ್ದ ಅವಧಿ ತುಂಬಾ ಅಪೂರ್ವವಾದದ್ದು ಎಂದು ನಿಸಾರ ಅಹಮದ್‌ರವರ ಅಭಿನಂದನಾ ಗ್ರಂಥದಲ್ಲಿ ಆ ನೆನಪುಗಳನ್ನು ತುಂಬು ಮನದಿಂದ ಬಿಚ್ಚಿಟ್ಟಿದ್ದಾರೆ. ಅವರ ಮನದಾಳದ ಮಾತುಗಳನ್ನು ಯಥಾವತ್ತಾಗಿ ಭಟ್ಟಿಯಿಳಿಸಲಾಗಿದೆ. ಕಾರಣ ನಾನು ಅವರ ಅವಧಿಯ ಕಾರ್ಯವೈಖರಿಯನ್ನು ವಿವರಿಸುವುದಕ್ಕಿಂತ ಪ್ರೊ. ನಿಸಾರ್ ಅವರ ಜೊತೆ ಅಕಾಡೆಮಿಯ ಸದಸ್ಯರಾಗಿ ಅಹರ್ನಿಸಿ ದುಡಿದ ಅನುಭವ ನೈಜವಾಗಿ ದಾಖಲಾಗಲಿ ಎಂಬ ಕಾಳಜಿಯಿಂದ ಅವರ ಮಾತುಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಇವರೊಂದಿಗೆ ಹಿರಿಯ ವಿದ್ವಾಂಸರಾದ ಡಾ.ವಿಜಯಾ, ವಿ.ಎಸ್.ಕೃಷ್ಣಯ್ಯರ್, ಜಿ.ನಾರಾಯಣ ಅವರ ಅಭಿಪ್ರಾಯಗಳನ್ನೂ ಬಳಸಿಕೊಂಡಿರುವೆ. ಈ ನಾಲ್ವರು ಹಿರಿಯರ ಹೆಮ್ಮೆಯ ಮಾತುಗಳು ಈ ಕೃತಿಗೆ ಮೌಲ್ಯ ಹಾಗೂ ಮೆರಗು ನೀಡಿವೆ, ಅವರಿಗೆ ಈ ಸಂದರ್ಭದಲ್ಲಿ ನಾನು ಋಣಿಯಾಗಿರುವೆ.

ಪ್ರೊ. ಕೆ.ಎಸ್. ನಿಸಾರ್ ಅಹಮದ್‌ರವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಬಿ.ಟಿ.ಲಲಿತಾ ನಾಯಕರವರು ಅವರು ರಾಯಚೂರು ಜಿಲ್ಲೆಯ ಪ್ರತಿನಿಧಿಯಾಗಿ ನೇಮಕಗೊಂಡಿದ್ದರು. ಅವರು ಆಯ್ಕೆಗೊಂಡ ಸುದ್ದಿ ಅವರಿಗೆ ದಿನಾಂಕ 21–04–1984ರಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಂದಿನ ರಿಜಿಸ್ಟ್ರಾರ್ ಎಸ್.ಟಿ. ಬಾದಾಮಿಯವರಿಂದ ಒಂದು ಪತ್ರ ಬರುತ್ತದೆ. ಆ ಪತ್ರದಲ್ಲಿ ಇವರನ್ನು ಅಕಾಡೆಮಿಯ ಸದಸ್ಯರನ್ನಾಗಿ ಆಯ್ಕೆ ಮಾಡಿದ ವಿಷಯ ತಿಳಿದು ತುಂಬಾ ಸಂತಸ ವ್ಯಕ್ತಪಡಿಸುತ್ತಾರೆ.ಆ ಪತ್ರಕ್ಕೆ ಸಂತೋಷದಿಂದ ತಮ್ಮ ಒಪ್ಪಿಗೆಯನ್ನು ತಿಳಿಸಿದ್ದರು. ತಮ್ಮ ಮೂರು ವರ್ಷದ ಅವಧಿ ಹೇಗೆ ಕಳೆಯಿತೋ ತಿಳಿಯದು ಅಷ್ಟು ಆನಂದ ಹಾಗೂ ಉತ್ಸಾಹದಲ್ಲಿ ನಾವಿದ್ದೆವು ಎಂದು ಶ್ರೀಮತಿ ಬಿ.ಟಿ.ಲಲಿತಾನಾಯಕ್‌ರವರು ತಿಳಿಸುತ್ತಾರೆ. ಈ ಆನಂದದ ಕೇಂದ್ರ ವ್ಯಕ್ತಿ ಅಕಾಡೆಮಿಯ ಅಧ್ಯಕ್ಷರಾಗಿ ಸಾರಥ್ಯವಹಿಸಿದ

ಪ್ರೊ.ನಿಸಾರ್ ಅಹಮದ್‌ರವರ ವ್ಯಕ್ತಿತ್ವವಾಗಿತ್ತು. ಅಂದಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಲ್ಲಿ ಕನ್ನಡ ಸಾಹಿತ್ಯದಲ್ಲಿ ಹೆಸರುವಾಸಿಯಾದ ದಿಗ್ಗಜರಿದ್ದರು. ಅವರಲ್ಲಿ ಶಾಂತಿನಾಥ ದೇಸಾಯಿ, ಟಿ.ಸುನಂದಮ್ಮ, ಗೀತಾ ಕುಲಕರ್ಣಿ, ಕಯ್ಯಾರ ಕಿಞ್ಞಣ್ಣ ರೈ, ಟಿ.ರಾಮಣ್ಣ, ಆಲನಹಳ್ಳಿ ಕೃಷ್ಣ, ಎಚ್.ಜೆ.ಲಕ್ಕಪ್ಪಗೌಡ, ಬರಗೂರು ರಾಮಚಂದ್ರಪ್ಪ, ದಲಿತ ಕವಿ ಸಿದ್ಧಲಿಂಗಯ್ಯ, ಪುಂಡಲೀಕ ಶೇಟ್‌ರವರಂತಹ ಸಾಹಿತಿಗಳಿದ್ದರು. ಈ ತಂಡ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಹೇಳಿ ಮಾಡಿಸಿದಂತೆ ಕಂಗೊಳಿಸುವ ಅಕಾಡೆಮಿಯ ಆಧಾರಸ್ತಂಭವಾಗಿತ್ತು. ಲಲಿತಾ ನಾಯಕ್‌ರವರು ಹೇಳುವಂತೆ "ಇಂತಹ ಅಪೂರ್ವ ಘನತೆವೆತ್ತ ಕವಿ–ಸಾಹಿತಿಗಳ ತಂಡ ಅಕಾಡೆಮಿಯ ಆಸ್ತಿಯಾಗಿ ಕಂಗೊಳಿಸಿತ್ತು. ಇಂಥ ಪ್ರತಿಷ್ಠಿತ ಹಾಗೂ ಹಿರಿಯ ಕವಿ–ಸಾಹಿತಿಗಳ ಮೇಳ ಇದಕ್ಕೂ ಮುಂಚೆಯಾಗಲಿ ಆಮೇಲಾಗಲಿ ಇರಲಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಆದರೆ ಪ್ರೊ. ನಿಸಾರ್ ಅಧ್ಯಕ್ಷರಾಗಿದ್ದ ಮೂರು ವರ್ಷಗಳ (1984–1987) ಕಾಲದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಷಹರುಗಳ ಸರಸ್ವತೀ ಪುತ್ರರ ಸ್ವತ್ತಾಗಿ ಜರೀ ಶಲ್ಯಗಳಲ್ಲಿ ಅಡಗಿ ಕೂರದೆ, ರಾಜಧಾನಿಯ ಮಟ್ಟದಿಂದ ಕೆಳಗಿಳಿದು ಜಿಲ್ಲೆ, ತಾಲ್ಲೂಕು, ಹೋಬಳಿ, ಕುಗ್ರಾಮಗಳವರೆಗೂ ಬಿಡು ಬೀಸಾಗಿ ಹರಿದಾಡಿ, ನನ್ನಂಥವರ ಬದುಕಿನಲ್ಲಿ ಸಾಹಿತ್ಯದ ಹೊಚ್ಚ ಹೊಸ ಝಲಕ್ ಅನ್ನು ಕಾಣಿಸುವ 'ಕ್ಷ' ಕಿರಣವಾಗಿ ಮಾರ್ಪಟ್ಟಿತು. ತನ್ನ ಕಾರ್ಯಕ್ರಮಗಳ ಗುಣಮಟ್ಟವನ್ನು ತಗ್ಗಿಸಿಕೊಳ್ಳದೆಯೂ ಶ್ರೀಸಾಮಾನ್ಯರ, ಗ್ರಾಮೀಣ ಜನಪದರ ಬಳಿಗೂ ಸಾಗಿತು" ಎಂದು ಹೇಳುತ್ತಾರೆ.

ನಿಸಾರ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಾಡಿನಲ್ಲಿ ಸದಾ ಅಕಾಡೆಮಿಯ ಕಾರ್ಯಕ್ರಮಗಳು ಎಡೆಬಿಡದೆ ಸಾಗುತ್ತಿದ್ದವು. ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಸೂಕ್ತ ಸಲಹೆಗಳನ್ನು ನೀಡಲು ಸರ್ವ ಸದಸುರಿಗೆ ನಿಸಾರರು ಮುಕ್ತ ಸ್ವಾತಂತ್ರ್ಯ ನೀಡಿದ್ದರು. ಸದಸ್ರು ತಮ್ಮ ತಮ್ಮ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಹಂಚಲು ಎಲ್ಲರಿಗೂ ಅವಕಾಶವಿತ್ತು. ಇದಕ್ಕೆ ಸಾಕ್ಷಿಯಾಗಿ ರಾಯಚೂರು ಜಿಲ್ಲೆಯಿಂದ ಸದಸ್ಯರಾಗಿದ್ದ ಬಿ.ಟಿ.ಲಲಿತಾನಾಯಕ್‌ರವರು ಮುಕ್ತವಾಗಿ ನಿಸಾರರ ಅವಧಿಯನ್ನು ಮನತುಂಬಿ ಬಣ್ಣಿಸಿದ್ದಾರೆ. ನಿಸಾರರ ಸಲಹೆಯ ಮೇರೆಗೆ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ನಾಯಕತ್ವವನ್ನು ವಹಿಸಿಕೊಳ್ಳುವ ಸದವಕಾಶ

ಎಲ್ಲಾ ಸದಸ್ಯರಂತೆ ಇವರಿಗೂ ಇದ್ದದ್ದನ್ನು ಹೇಳಿಕೊಂಡಿದ್ದಾರೆ.ಅಧ್ಯಕ್ಷರ ಸಲಹೆಯ ಮೇರೆಗೆ ಜಿಲ್ಲೆ, ತಾಲ್ಲೂಕು ಮಟ್ಟದ ವಚನ ಗಾಯನ, ಭಾವಗೀತೆ, ತತ್ವಪದ, ಕವಿಗೋಷ್ಠಿ, ವಿಚಾರ ಸಂಕಿರಣಗಳನ್ನು ಇತರ ಕೆಲವು ಸದಸ್ಯರಂತೆ ಇವರೂ ಸಹ ಏರ್ಪಡಿಸಿದ್ದರು.ಅಂತಹ ಕಾರ್ಯಕ್ರಮಗಳಲ್ಲಿ ಅಲ್ಲಿನ ಸ್ಥಳೀಯ ಬರಹಗಾರರಿಗೆ ಅಧಿಕ ಆದ್ಯತೆಯನ್ನು ಕೊಡಲಾಯಿತು. ಕವಿ ಸಿದ್ಧಯ್ಯ ಪುರಾಣಿಕ, ಜಯತೀರ್ಥ ರಾಜಪುರೋಹಿತ, ಡಾ.ಹಾ.ಮಾ.ನಾಯಕ, ಶಾಂತರಸರಂತಹ ಹಿರಿಯ ಬರಹಗಾರರು ಇವರ ಕರೆಗೆ ಓಗೊಟ್ಟು ಆಗಮಿಸಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಯಿಸಿಕೊಟ್ಟಂತಹ ನಿದರ್ಶನಗಳಿವೆ. ಹೀಗೆ ಸದಸ್ಯರಿಗೆ ಅವಕಾಶ ನೀಡಿದ್ದರಿಂದ ಅಕಾಡೆಮಿಯು ವಿಸ್ತಾರವಾಗಿ ಬೆಳೆಯಲು ಅನುವಾಯಿತು ಹಾಗೂ ಸದಸ್ಯರಿಗೂ ಆತ್ಮಸಂತೃಪ್ತಿ ದೊರೆತಂತೆ ಕಾಣುತ್ತದೆ.

ನಿಸಾರ ಅವರು ಅಧಿಕಾರ ವಹಿಸಿಕೊಂಡ ತಕ್ಷಣ ಒಂದು ಸಭೆಯನ್ನು ಕರೆದು ಅದರಲ್ಲಿ ಅಕಾಡೆಮಿಯ ಸದಸ್ಯರಲ್ಲದೆ, ಅನೇಕ ಹಿರಿಯ ಸಾಹಿತಿಗಳನ್ನು, ಬರಹಗಾರರನ್ನು, ಸಾಹಿತ್ಯಾಸಕ್ತರನ್ನು, ಕಲಾವಿದರನ್ನು, ಪತ್ರಕರ್ತರನ್ನು, ಸಮಾಜದ ಶಿಷ್ಟ ಗಣ್ಯವ್ಯಕ್ತಿಗಳನ್ನು ಸಭೆಗೆ ಆಹ್ವಾನಿಸಿದರು. ಅವರು ಮುಂದೆ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸುವ ನೂತನ ಸತ್‌ಸಂಪ್ರದಾಯವನ್ನು ಪ್ರೊ.ನಿಸಾರರು ಹುಟ್ಟು ಹಾಕಿದರೆಂದರೆ ಅತಿಶಯೋಕ್ತಿಯಲ್ಲ, ಏಕೆಂದರೆ ಇಂತಹ ಪರಂಪರೆಯು ಹಿಂದೆ ಇರಲಿಲ್ಲವೆಂದು ತೋರುತ್ತದೆ. ಅಂದಿನ ಸಭೆಗೆ ಅನೇಕ ದಿಗ್ಗಜರು ಪಾಲ್ಗೊಂಡದ್ದು ನೋಡಿದರೆ ನಿಸಾರ ಅಹಮದ್‌ರವರ ಮುಂದಾಲೋಚನೆ ಅರಿವಿಗೆ ಬರುತ್ತದೆ. ಅಂದಿನ ಸಭೆಯಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗ್ಯಾರ್, ಶ್ರೀರಂಗ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಗೋಪಾಲಕೃಷ್ಣ ಅಡಿಗ, ಕೆ.ಎಸ್.ನರಸಿಂಹಸ್ವಾಮಿ, ಜಿ.ವೆಂಕಟಸುಬ್ಬಯ್ಯ, ಜಿ.ನಾರಾಯಣ, ಸಿದ್ಧಯ್ಯ ಪುರಾಣಿಕ, ಪರ್ವತವಾಣಿ ಮುಂತಾದ ಹಿರಿಯರನ್ನು ಕಾಣುವ ಯೋಗ ಎಲ್ಲ ಸದಸ್ಯರಿಗೂ ದೊರೆತದ್ದು, ಅವರ ವಿಚಾರಧಾರೆಯನ್ನು ಕೇಳುವ ಅವಕಾಶವನ್ನು ನಿಸಾರರು ಎಲ್ಲರಿಗೂ ಒದಗಿಸಿಕೊಟ್ಟಿದ್ದರು. ಇವರ ಇನ್ನೊಂದು ವೈಶಿಷ್ಟ್ಯವೆಂದರೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಹಿಂದಿನ ಅಧ್ಯಕ್ಷರಾಗಿದ್ದ ಡಾ.ಹಾ.ಮಾ.ನಾಯಕ್ ಅವರನ್ನು ಸಭೆಗೆ ಆಹ್ವಾನಿಸಲು ನಿಸಾರ್ ಅವರು ಮರೆಯಲಿಲ್ಲವೆಂಬುದು ಅತ್ಯಂತ ಮಹತ್ವದ್ದು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಾಹಿತ್ಯ ಸಮಾರಂಭಗಳು ನಿಸಾರ ಅವರು ಅಧ್ಯಕ್ಷರಾದ ಮೇಲೆ ರಾಜಧಾನಿಗಷ್ಟೇ ಕೇಂದ್ರಿತವಾಗಿದ್ದ ಸಾಹಿತ್ಯ ಸಮಾವೇಶಗಳೂ, ವಿಚಾರಗೋಷ್ಠಿಗಳು ಹಾಗೂ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ದೆಹಲಿ, ಕೋಲಕೊತ್ತ, ಮುಂಬಯಿಯಂತಹ ಹೊರ ರಾಜ್ಯದ ನಗರಗಳಿಗೂ ವಿಸ್ತರಿಸಿದವು. ಅಲ್ಲದೆ ರಾಜ್ಯದ ಗಡಿ ಭಾಗಗಳಿಗೆ, ಗ್ರಾಮೀಣ ಪ್ರದೇಶಗಳಿಗೂ ಅಕಾಡೆಮಿಯ ಕಾರ್ಯಕ್ರಮಗಳು ತಲುಪಿದವು. ಅವರು ಅಧ್ಯಕ್ಷರಾಗಿದ್ದ ಮೂರು ವರುಷಗಳ ಅವಧಿಯಲ್ಲಿ ಸುಮಾರು 300 ಕಾರ್ಯಕ್ರಮಗಳೂ ಜರುಗಿದ್ದು ಒಂದು ದಾಖಲೆಯೇ ಸರಿ. ನಾಡಿನಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಗಳನ್ನು ಪ್ರೋತ್ಸಾಹಿಸಿ ಬೆಳೆಸುವಂತಹ ಸಂಸ್ಥೆ ಎಂಬುದು ಇದೆ ಎಂದು ಜನರ ಅರಿವಿಗೆ ಬಂದದ್ದು ಬಹುಶ: ನಿಸಾರರ ಅವಧಿಯಲ್ಲಿಯೇ ಎನ್ನಬಹುದು. ಒಟ್ಟಿನಲ್ಲಿ ಇಂದು ನಾವು ಯಾವುದನ್ನು ಜನಪರ, ಸಮಾಜಮುಖಿ ಎಂದು ಘೋಷಿಸುತ್ತೇವೆವೋ ಅದು ಆ ಕಾಲಕ್ಕೆ, ಅಂದರೆ ಎರಡು ದಶಕಗಳಿಗೂ ಮುಂಚೆ ಕಾರ್ಯಶೀಲವಾಯಿತೆಂಬುದು ಗಮನಾರ್ಹ ವಿಷಯ.ದ್ರಾವಿಡ ಭಾಷಾ ಸಾಹಿತ್ಯದ ಅಂಗವಾಗಿ ತಮಿಳು, ತುಳು, ಮಲೆಯಾಳಂ, ತೆಲುಗು ಭಾಷಾ ವಿಚಾರ ಸಂಕಿರಣ ನಡೆಯಿತು. ಡಾ.ಶಿವರಾಮ ಕಾರಂತರು ಉದ್ಘಾಟಿಸಿದ ಈ ವಿಶಿಷ್ಟವಾದ ಇಡೀ ದಿವಸದ ಕಾರ್ಯಕ್ರಮದಲ್ಲಿ ನೆರೆ ರಾಜ್ಯಗಳ ಸಾಹಿತ್ಯಾವಲೋಕನ, ಚರ್ಚೆಗಳು ನಡೆದದ್ದಲ್ಲದೆ ಒಂದು ರಾಜ್ಯ ಮಟ್ಟದ ಕವಿಗೋಷ್ಠಿಯೂ ನಡೆದು, ಅನ್ಯ ಭಾಷಿಗರೂ ಅದರಲ್ಲಿ ಪಾಲ್ಗೊಂಡದ್ದು ಒಂದು ವಿಶೇಷ. ಕೆಲವು ಪ್ರದೇಶಗಳಲ್ಲಿ ಹಳ್ಳಿಯ ರೈತ ಜನಗಳೂ ಎತ್ತಿನ ಬಂಡಿಗಳನ್ನು ಕಟ್ಟಿಕೊಂಡು ಅಕಾಡೆಮಿಯ ಕಾರ್ಯಕ್ರಮಗಳಿಗೆ ಪ್ರೀತಿಯಿಂದ ಧಾವಿಸಿ ಬರುತ್ತಿದ್ದರು. ನಮ್ಮ ಹಿರಿಯ ಕವಿಗಳ ಹಾಡುಗಳನ್ನು, ನೃತ್ಯ ಇತ್ಯಾದಿಗಳನ್ನು ರಾತ್ರಿ ಹನ್ನೊಂದರವರೆಗೂ ಆನಂದಿಸಿ ಹೋಗುತ್ತಿದ್ದರು.ಇದರಿಂದ ಆ ಸಂಸ್ಥೆಯ ಮಹದಾಶಯವೇನಿತ್ತು ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

ಹಿಂದೆ ಕಾವ್ಯ, ವಿಮರ್ಶೆಗಳಿಗೆ ಸೀಮಿತವಾಗಿದ್ದ ವಾರ್ಷಿಕ ಪ್ರಕಟಣೆಗಳನ್ನು ಪ್ರಬಂಧ, ಸಣ್ಣಕಥೆ, ಮಕ್ಕಳ ಸಾಹಿತ್ಯಗಳಿಗೂ ವಿಸ್ತರಿಸಿದ್ದು ನಿಸಾರರ ಅಗ್ಗಳಿಕೆ. ಅಲ್ಲದೆ, ನಿಸಾರರು ಮತ್ತೂ ಒಂದು ಹೆಜ್ಜೆ ಮುಂದುವರೆದು ದಶವಾರ್ಷಿಕ ಕಾವ್ಯ, ವಿಮರ್ಶೆ, ಸಣ್ಣ ಕಥೆ, ಪ್ರಬಂಧಗಳ ಹೆಬ್ಬೊತ್ತಿಗೆಗಳನ್ನು ಪ್ರಥಮ ಬಾರಿಗೆ ಹೊರ ತಂದದ್ದು ಅಕಾಡೆಮಿಯ ಇತಿಹಾಸದಲ್ಲೊಂದು

ಮೈಲಿಗಲ್ಲಾಗಿದೆ. ಅಕಾಡೆಮಿಯ ಮುಖವಾಣಿಯಾಗಿ ಕನ್ನಡ–ಇಂಗ್ಲಿಷ್ 'ಚಂದನ' ತ್ರೈಮಾಸಿಕಗಳನ್ನು ಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದದ್ದು ಇವರ ಕಾಲದಲ್ಲಿಯೆ. ಗಡಿ ಪ್ರದೇಶಗಳಲ್ಲೂ ವಿಜ್ಞಾನ, ಕಾವ್ಯ, ನಾಟಕ ಕಮ್ಮಟಗಳೂ ನಡೆದವು. ಅದೇ ಚಟುವಟಿಕೆಗಳ ಪರಿಚಯ ನಾಡಿನ ಮೂಲೆ ಮೂಲೆಗೂ ತಲುಪುವಂತಾಗಿ ಅದಕ್ಕೊಂದು ಹೊಸ ಆಯಾಮ ದೊರಕಿತು.

ಆಗಿನ ಮುಖ್ಯಮಂತ್ರಿಗಳಾಗಿದ್ದ ಹಾಗೂ ಸಾಹಿತ್ಯ ಸಂಸ್ಕೃತಿಯ ಬಗೆಗೆ ನಿಜವಾದ ಕಳಕಳಿ ಇದ್ದ ಶ್ರೀ ರಾಮಕೃಷ್ಣ ಹೆಗಡೆಯವರು ಮತ್ತು ಕನ್ನಡ ಸಂಸ್ಕೃತಿ ಸಚಿವರಾಗಿದ್ದ ಡಾ.ಜೀವರಾಜ ಆಳ್ವರವರು ಅಕಾಡೆಮಿಗೆ ಹಣದ ಕೊರತೆಯುಂಟಾಗದಂತೆ ಉದಾರತೆ ತೋರಿ ಹೆಚ್ಚಿನ ಅನುದಾನ ನೀಡಿ ಸಹಕರಿಸಿದರು. ನಿಸಾರರು ಯಾವುದೇ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡಾಗಲೂ ಪತ್ರ ಬರೆದು ಶ್ಲಾಘಿಸಿ ಉತ್ತೇಜಿಸಿದರು. ಇದರಿಂದಾಗಿ ನಾಡಿನ ಉದ್ದಗಲಕ್ಕೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಕಾಡೆಮಿಯನ್ನು ಉನ್ನತ ಮಟ್ಟಕ್ಕೊಯ್ಯಲು ನಿಸಾರರಿಗೆ ಸಾಧ್ಯವಾಯಿತು. ಅಂದಿನ ಕಾಲದಲ್ಲಿಯೂ ಸಹ ಕೆಲವೊಂದು ಸಂಸ್ಥೆಗಳಿಗೆ ಆರ್ಥಿಕ ಮುಗ್ಗಟ್ಟು ತಲೆದೋರಿದ ಸಂದರ್ಭಗಳೂ ಇದ್ದವು. ಅನುದಾನದ ಕೊರತೆಯಿಂದಾಗಿ ರದ್ದುಗೊಳ್ಳುವ ಹಂತದಲ್ಲಿದ್ದ ಕೆಲವು ರಂಗಸಂಸ್ಥೆಗಳೂ ಆರ್ಥಿಕ ಸಂಕಷ್ಟದಿಂದ ಪಾರಾಗಿ ಮರು ಜೀವವನ್ನು ಪಡೆದವು. ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸುವಾಗ, ವ್ಯವಸ್ಥೆ ಮಾಡುವಾಗ ಅಕಾಡೆಮಿಯ ಮಾನ್ಯ ಸದಸ್ಯರುಗಳ ಸಂಪೂರ್ಣ ಬೆಂಬಲ ಹಾಗೂ ಸಹಕಾರ ನಿಸಾರರಿಗಿತ್ತು.

ಇವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕೆಲವು ಮಹತ್ವದ ಕಾರ್ಯಕ್ರಮಗಳು ಜರುಗಿದವು. 1985ರಲ್ಲಿ ಮೈಸೂರಿನಲ್ಲಿ ಪ್ರಪ್ರಥಮವಾಗಿ ವಿಶ್ವ ಕನ್ನಡ ಸಮ್ಮೇಳನ ನಡೆದಾಗ, ಕಲಾಮಂದಿರದ ಉದ್ಘಾಟನೆಯೂ ಸಹ ಕರ್ನಾಟಕ ಸಾಹಿತ್ಯ ಅಕಾಡೆಮಿಯ ನೇತೃತ್ವದಲ್ಲಿ ಮೂರು ದಿನಗಳ ಕಾರ್ಯಕ್ರಮಗಳೂ ನಡೆದದ್ದು ಒಂದು ಅಪೂರ್ವ ಘಟನೆ. ಮಹಾಕವಿ ರಸಋಷಿ ಕುವೆಂಪುರವರ ಘನ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಕವಿಗೋಷ್ಠಿ ನಡೆದಾಗ ರಾಮಕೃಷ್ಣ ಹೆಗಡೆ, ನಜೀರ್ ಸಾಬ್, ಜೀವರಾಜ ಆಳ್ವ, ಬಿ.ರಾಚಯ್ಯ ಮತ್ತು ಅಂತಾರಾಷ್ಟ್ರೀಯ ಖ್ಯಾತಿಯ ಇಂಗ್ಲೀಷ್ ಮತ್ತು ಫ್ರೆಂಚ್ ಸಾಹಿತಿ ಹಾಸನದ ರಾಜಾರಾವ್ ಮೊದಲಾದ ಗಣ್ಯರು ಸಹ ಸಭಿಕರ ಸಾಲಿನಲ್ಲಿ ಕುಳಿತು ಕಾರ್ಯಕ್ರಮವನ್ನು ವೀಕ್ಷಿಸಿದ್ದು ನಭೂತೋ ನಭವಿಷ್ಯತಿ ಎಂಬಂತೆ ಎಂದಿಗೂ

ಮರೆಯುವ ವಿಚಾರವಲ್ಲ. ಮಹಾಕವಿ ಕುವೆಂಪುರವರನ್ನು ನೋಡುವುದೇ ಒಂದು ಭಾಗ್ಯ, ಏಕೆಂದರೆ ಅವರು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಪರೂಪವಾಗಿತ್ತು. ಸಾಮಾನ್ಯವಾಗಿ ಯಾವುದೇ ಕಾರ್ಯಕ್ರಮಕ್ಕೂ ಬರಲು ನಿರಾಕರಿಸುತ್ತಿದ್ದ ರಾಷ್ಟ್ರಕವಿ ಕುವೆಂಪು ಅವರ ಮನವೊಲಿಸಿ ಕರೆ ತಂದವರು ನಿಸಾರ್ ಅಹಮದ್‌ರವರು. ಅವರು ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರಿಂದ ಅಕೆಡೆಮಿಯ ಹೆಮ್ಮೆ ಗೌರವಗಳು ನೂರ್ಮಡಿಸಿದವು. ರಸಋಷಿ ಕುವೆಂಪುರವರ ಆಕರ್ಷಣೆ ಎಷ್ಟಿತ್ತೆಂದರೆ, ಅಂದು ಸಭಾಂಗಣದಲ್ಲಿ ಜಾಗ ಸಿಗದೆ ಜನ ಅಸಮಾಧಾನಗೊಂಡು, ಗಲಾಟೆ ಮಾಡಿದ್ದರಿಂದ ಪೋಲೀಸರು ಲಘು ಲಾಠಿ ಪ್ರಹಾರವನ್ನೂ ಮಾಡಬೇಕಾಯಿತು. ಕವಿ ಸಮ್ಮೇಳನದ ಪ್ರವೇಶಕ್ಕೆ ಇಂಥ ಘಟನೆ ನಡೆದದ್ದು ಜಗತ್ತಿನಲ್ಲೇ ಅಪರೂಪ ಎನ್ನಿಸುತ್ತದೆ! ಕುವೆಂಪು ಅವರ ಉಪಸ್ಥಿತಿ ಇದಕ್ಕೆ ಬಹು ಮಟ್ಟಿಗೆ ಕಾರಣವಾದರೂ ಕನ್ನಡದ ಅತ್ಯಂತ ಪ್ರಖ್ಯಾತ ಮತ್ತು ಶ್ರೇಷ್ಠ ಕವಿಗಳನ್ನು ಕಾಣಲು ಮತ್ತು ಅವರ ಕವಿತೆಗಳನ್ನು ಕೇಳಲು ಸಹ ಜನ ಕಾತರಿಸಿದ್ದರು ಎನ್ನು ಸಂಗತಿ ಸಹ ಸರ್ವವಿದಿತವಾಗಿತ್ತು. ಹೀಗೆ ಇಂತಹ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಕಾಡೆಮಿಗೆ ವಿಭಿನ್ನ ಸ್ವರೂಪವನ್ನು ನಿಸಾರ್ ಅಹಮದ್‌ರವರು.

ಪ್ರೊ.ಕೆ.ಎಸ್.ನಿಸಾರ ಅಹಮದ್‌ರವ ಮತ್ತೊಂದು ವೈಶಿಷ್ಟ್ಯವೆಂದರೆ ಸಾಹಿತ್ಯದ ಕಾರ್ಯಕ್ರಮಗಳಲ್ಲಿ ರಾಜಕೀಯ ವ್ಯಕ್ತಿಗಳಿಗೆ ಅಧಿಕ ಪ್ರಾಮುಖ್ಯತೆ ನೀಡುತ್ತಿರಲಿಲ್ಲ. ಇದು ಅವರ ಕನ್ನಡ ಸಾಹಿತ್ಯದ ನೈಜ ಕಾಳಜಿ ಹಾಗೂ ಬದ್ಧತೆ ತೋರಿಸುತ್ತದೆ. ಆದಾಗ್ಯೂ ಪ್ರತಿ ವರ್ಷದ ವರುಷದ ಕೊನೆಯಲ್ಲಿ ಪ್ರಶಸ್ತಿ ಪ್ರದಾನದ ದಿವಸ, ಸಭೆಯ ಅಧ್ಯಕ್ಷತೆಯನ್ನು ವಹಿಸಲು ಮಾತ್ರ ರಾಜಕಾರಣಿಗಳನ್ನು ಆಹ್ವಾನಿಸುತ್ತಿದ್ದುದ್ದನ್ನು ಬಿಟ್ಟರೆ, ಅಕಾಡೆಮಿಯಲ್ಲಿ ಅವರುಗಳನ್ನು ಓಲೈಸುವ ಪರಿಪಾಠವೇನೂ ಅವರು ಇಟ್ಟುಕೊಂಡಿರಲಿಲ್ಲ. ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಮೈಸೂರಿನ ದೊಡ್ಡ ಕೆರೆ ಮೈದಾನದಲ್ಲಿ ಏರ್ಪಾಟಾಗಿದ್ದ ವಸ್ತು ಪ್ರದರ್ಶನದಲ್ಲಿ ಪ್ರದರ್ಶನದಲ್ಲಿ ಪ್ರಥಮ ಬಾರಿಗೆ ಅಕಾಡೆಮಿಯ ಪುಸ್ತಕ ಪ್ರದರ್ಶನವನ್ನೂ ಏರ್ಪಡಿಸಿದ್ದು ಸಹ ಅಕಾಡೆಮಿಯ ಅಗ್ಗಳಿಕೆಯೇ. 'ಸಾಲು ದೀಪಗಳು' ಎಂಬ ಪ್ರತಿಷ್ಠಿತ ಪ್ರಕಟಣೆಯನ್ನು ಹಮ್ಮಿಕೊಂಡು, ಅದರ ಕಲ್ಪನೆಯ ರೂಪುರೇಷೆಗಳು ನಿರ್ಧರಿತವಾಗಿ, ಸಂಬಂಧಪಟ್ಟ ಲೇಖಕರನ್ನು ಬರಹಗಳಿಗಾಗಿ ಒಪ್ಪಿಸಿದ್ದು ನಿಸಾರರ ಕಾಲದಲ್ಲೇ ಎಂದು ಹೇಳಬಹುದು. ನಿಸಾರರವರು ಅಧ್ಯಕ್ಷರಾಗುವುದಕ್ಕೂ ಮುಂಚೆ

ಅಕಾಡೆಮಿಯಲ್ಲಿ ಉತ್ತಮ ಪುಸ್ತಕಗಳು ಲಭ್ಯವಿಲ್ಲದೆ ಓದುಗರು ಪರದಾಡುವ ಪರಿಸ್ಥಿತಿ ಇತ್ತು ಇಂತಹ ಕೊರತೆಯನ್ನು ಪರಿಹರಿಸುವಲ್ಲಿ ಇವರ ಕಾರ್ಯ ಶ್ಲಾಘನೀಯವಾದುದು. ಅಲ್ಲದೆ ಇದ್ದಂತಹ ಅಳಿದುಳಿದ ಪುಸ್ತಕಗಳಿಗೆ ಭದ್ರತೆ ಇಲ್ಲದೇ ಯಾರು ಬೇಕಾದರೂ ಹೊತ್ಯೊಯ್ಯಬಹುದಾದ ಸಂದರ್ಭವಿತ್ತು. ಇಂತಹ ಸ್ಥಿತಿಯನ್ನು ಮನಗಂಡ ನಿಸಾರರು ಪುಸ್ತಕಗಳ ರಕ್ಷಣೆಗೆ ಮುಂದಾದರು. ಅಲ್ಲಿನ ಪುಸ್ತಕಗಳಿಗೆ ಅಂಕೆ ಸಂಖ್ಯೆಯನ್ನು ಬರೆದು, ಅವುಗಳನ್ನು ಕಳೆದುಹೋಗದಂತೆ, ಲೇಖಕರಿಗೆ ಸುಲಭವಾಗಿ ಲಭ್ಯವಾಗುವಂತೆ, ಹಾಗೂ ಸುರಕ್ಷಿತವಾಗಿರುವಂತೆ ನೋಡಿಕೊಂಡರು.

ನಿಸಾರ ಅಹಮದ್‌ರವರು ತಮ್ಮ ಕ್ರಿಯಾಶೀಲ ವ್ಯಕ್ತಿತ್ವದಿಂದ ಅಕಾಡೆಮಿಯಲ್ಲೂ ಚುರುಕುತನವನ್ನು ತಂದಂತಹ ಮಹನೀಯರು. ಇವರ ಅವಧಿಯಲ್ಲಿಯೂ ಅಕಾಡೆಮಿಯ ಹಿಂದಿನ ಅಧ್ಯಕ್ಷರುಗಳು ಜಾರಿಗೆ ತಂದಂತಹ ಅನೇಕ ಯೋಜನೆಗಳನ್ನೂ ಮೊಟಕುಗೊಳಿಸದೆ, ಅಂತಹ ಯೋಜನೆಗಳು ದುರುಪಯೋಗವಾಗದಂತೆ, ಅದಕ್ಕೆ ವಿನೂತನ ಶೈಲಿಯಲ್ಲಿ ಅರ್ಥಪೂರ್ಣವಾಗಿ ಮಾರ್ಪಡಿಸಿದವರು. ಅಂತಹ ಯೋಜನೆಗಳಲ್ಲಿ ಆಸಕ್ತ ಲೇಖಕರನ್ನು ಬೇರೆ ಬೇರೆ ರಾಜ್ಯಗಳಿಗೆ ಅಕಾಡೆಮಿಯಿಂದ ಕಳುಹಿಸಿ ಅಲ್ಲಿನ ಸಾಹಿತ್ಯ, ಸಾಂಸ್ಕೃತಿಕ ಲೋಕದ ಬಗ್ಗೆ ಬರೆಯಿಸುವ ಯೋಜನೆಯೂ ಇತ್ತು. ಈ ಯೋಜನೆಯೇನೋ ಚೆನ್ನಾಗಿತ್ತು, ಆದರೆ ಅದನ್ನು ಮಾಡಿ ಪೂರ್ಣಗೊಳಿಸಬೇಕಾದ ಜವಾಬ್ದಾರಿ ಪ್ರವಾಸ ಕೈಗೊಂಡವರ ಮೇಲಿರುತ್ತಿತ್ತು. ಆದರೆ ಕೆಲವೊಮ್ಮೆ ವಹಿಸಿಕೊಂಡ ಜವಾಬ್ದಾರಿಯನ್ನು ನಿರ್ವಹಿಸದೆಯೇ, ಹಣವನ್ನು ಜೇಬಿಗೆ ಹಾಕಿಕೊಳ್ಳುವ ಘಟನೆಗಳೂ ನಡೆದಿರುವುದನ್ನು ಗಮನಿಸಿದ ನಿಸಾರರು, ಅಕಾಡೆಮಿಯ ಹಣ ಹಾಳಾಗದಂತೆ ಮುನ್ನೆಚ್ಚರಿಕೆ ವಹಿಸಿ ಅದನ್ನು ಪೋಲಾಗದಂತೆ ನೋಡಿಕೊಂಡಿದ್ದಾರೆ. ಇದಕ್ಕೆ ಪರ್ಯಾಯವಾಗಿ ನಿಸಾರರು ಆಯಾ ಲೇಖಕರನ್ನು ವಿಶ್ವಾಸಕ್ಕೆ ಪಡೆದು ಅವರು ತಮ್ಮ ಜವಾಬ್ದಾರಿಯನ್ನು ತಿಳಿಹೇಳಿ ಅವರುಗಳ ಮನವೊಲಿಸಿ ಕೆಲಸ ಮಾಡಿಸಿದ್ದಾರೆ. ಆರ್ಥಿಕ ನೆರವನ್ನು ಪಡೆದವರು ತಾವು ಕೈಗೊಂಡ ಪ್ರವಾಸದ ಕುರಿತಾದ ಗ್ರಂಥವನ್ನು ಬರೆದು ಒಪ್ಪಿಸುವಂತೆ ಮಾಡುವಲ್ಲಿ ನಿಸಾರರ ಶಕ್ತಿ ಮೆಚ್ಚುವಂಥದ್ದು. ನಿಸಾರರವರು ತಾವು ವಹಿಸಿಕೊಂಡ ಕೆಲಸಕ್ಕೆ ನ್ಯಾಯ ಒದಗಿಸುವಂತಹ ಉದಾತ್ತ ವ್ಯಕ್ತಿತ್ವದವರು.

ನಿಸಾರ್ ಅಹಮದ್‌ರವರ ಆಧ್ಯಕ್ಷತೆಯಲ್ಲಿ ಕೈಗೊಂಡ ಇನ್ನೊಂದು ಮಹತ್ವದ ಕಾರ್ಯಕ್ರಮವೆಂದರೆ ದೇಶದ ರಾಜಧಾನಿಯಾದ ದೆಹಲಿಯಲ್ಲಿ ಹಮ್ಮಿಕೊಂಡಂತಹ ರಾಷ್ಟ್ರೀಯ ವಿಚಾರ ಸಂಕಿರಣ. ಅದು 1987ರ ಫೆಬ್ರವರಿ ಮಾಹೆಯ 14 ಮತ್ತು 15ರಂದು ಅಕಾಡೆಮಿ 2 ದಿನಗಳವರೆಗೆ ನವದೆಹಲಿಯಲ್ಲಿ ನಡೆಸಿದ 'ಸಮಕಾಲೀನ ಭಾರತೀಯ ಸಾಹಿತ್ಯ' (ಕಾಂಟೆಂಪೊರರಿ ಇಂಡಿಯನ್ ಲಿಟರೇಚರ್)ವನ್ನು ಕುರಿತ, ಪರ ಭಾಷೆಯವರಿಗೆ ಅರ್ಥವಾಗಬೇಕೆಂಬ ಉದ್ದೇಶದಿಂದ ಪ್ರೇರಿತವಾದ ರಾಷ್ಟ್ರೀಯ ವಿಚಾರ ಸಂಕಿರಣ. ಇದೊಂದು ಅಭೂತಪೂರ್ವ ಸಮಾವೇಶ. ಈ ವಿಚಾರ ಸಂಕಿರಣವು ಇವರ ಅವಧಿಯ ಅಪೂರ್ವ ಮೈಲಿಗಲ್ಲಾಗಿದೆ. ಈ ಸಮ್ಮೇಳನದ ವೈಶಿಷ್ಟ್ಯವೆಂದರೆ ಅದರಲ್ಲಿ ಪಾಲ್ಗೊಂಡವರ ಅನುಕೂಲಕ್ಕಾಗಿ ಇಂಗ್ಲಿಷ್ ಭಾಷೆಯಲ್ಲೇ ನಡೆಯಿತು, ಇದೊಂದು ಅಭೂತಪೂರ್ವ ಸಮಾವೇಶ. ಅಂದಿನ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ.ವಿ.ಕೃ. ಗೋಕಾಕರು ಅಧ್ಯಕ್ಷತೆ ವಹಿಸಿದ್ದರು. ಅಲ್ಲದೆ ಈ ಕಾರ್ಯಕ್ರಮವನ್ನು ಅಂದಿನ ಕರ್ನಾಟಕದ ಮುಖ್ಯಮಂತ್ರಿ ಶ್ರೀರಾಮಕೃಷ್ಣ ಹೆಗಡೆಯವರು ಉದ್ಘಾಟಿಸಿದ್ದರು. ಈ ಅದ್ಭುತ ಕಾರ್ಯಕ್ರಮವು ನವ ದೆಹಲಿಯ 'ಕರ್ನಾಟಕ ಭವನ'ದಲ್ಲಿ ಜರುಗಿದ್ದು ಇನ್ನೊಂದು ವಿಶೇಷ. ಈ ಕಾರ್ಯಕ್ರಮದಲ್ಲಿ ಭಾರತದ ಬೇರೆ ಬೇರೆ ಭಾಷೆಗಳ ಪ್ರಸಿದ್ಧ ಬರಹಗಾರರು ಪಾಲ್ಗೊಂಡಿದ್ದರು. ಅಲ್ಲದೆ ಕನ್ನಡದಿಂದಲೂ ಪ್ರತಿಷ್ಠಿತ ಲೇಖಕರು ಭಾಗವಹಿಸಿದ್ದರು, ಅಂತಹ ಮಹನೀಯರಲ್ಲಿ ಎ.ಎನ್. ಮೂರ್ತಿರಾವ್, ಆರ್.ಸಿ. ಹಿರೇಮಠ, ಪ್ರಭುಶಂಕರ ಮುಂತಾದವರು ಪಾಲ್ಗೊಂಡಿದ್ದರು. ವಿಚಾರ ಸಂಕಿರಣದ ಕೊನೆಯ ದಿವಸ ನಡೆದ ಅಂತರಭಾಷಾ ಕವಿಗೋಷ್ಠಿ ಹಮ್ಮಿಕೊಳ್ಳಲಾಗಿತ್ತು.

ಇಂತಹ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ದೂರದ ದೆಹಲಿಯಲ್ಲಿ ಎರಡು ದಿವಸ ಯಶಸ್ವಿಯಾಗಿ ಪೂರ್ಣಗೊಳಿಸಿದ್ದು ಅವರ ಸಾಮರ್ಥ್ಯ ತೋರಿಸುತ್ತದೆ. ಕಾರ್ಯಕ್ರಮದೊಂದಿಗೆ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರನ್ನು ಅಶೋಕ ಯಾತ್ರಿ ನಿವಾಸದಲ್ಲಿ ವಸತಿಯನ್ನು ಕಲ್ಪಿಸಿ ಊಟ, ತಿಂಡಿ, ವಾಹನದ ಅಚ್ಚುಕಟ್ಟಾದ ವ್ಯವಸ್ಥೆ ಮಾಡಿದ್ದರು. ಇಂತಹ ಅಭೂತಪೂರ್ವ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದರೆ ಅಗಾಧವಾದ ಪೂರ್ವಸಿದ್ಧತೆಯೂ ಕೂಡ ಅಷ್ಟೇ ಮುಖ್ಯವಾಗಿರುತ್ತದೆ. ಒಟ್ಟಾರೆ ಕನ್ನಡದ ಕಂಪನ್ನು ದೇಶದ ರಾಜಧಾನಿಯಲ್ಲಿ ಯಶಸ್ವಿಯಾಗಿ ಪಸರಿಸುವ ಕಾರ್ಯ

ಮಾಡಿದ್ದು ಅನುಪಮ. ನಂತರದ ದಿನಗಳಲ್ಲಿ ಇಂತಹ ಕಾರ್ಯಕ್ರಮ ನಡೆದ ಬಗ್ಗೆ ನೆನಪಿಲ್ಲವೆಂದು ಅವರ ಅವಧಿಯ ಸದಸ್ಯರಲ್ಲೊಬ್ಬರಾದ ಶ್ರೀಮತಿ ಬಿ.ಟಿ. ಲಲಿತಾನಾಯಕ್‌ರವರು ಹೆಮ್ಮೆಯಿಂದ ಸ್ಮರಿಸುತ್ತಾರೆ. ದೆಹಲಿಯ ಈ ವಿಚಾರ ಸಂಕಿರಣವನ್ನು ಸ್ಮರಿಸಿಕೊಳ್ಳಲು ಕೆಲವೊಂದು ಕಾರಣಗಳೂ ಇದ್ದವು. ಇವರ ಸದಸ್ಯರಲ್ಲಿ ಕೆಲವರು ಅಲ್ಲಿಯವರೆಗೆ ದೆಹಲಿಯನ್ನೆ ನೋಡಿರಲಿಲ್ಲವಂತೆ ಹೀಗಾಗಿ ಅವರಿಗೆ ಇದೊಂದು ಒಳ್ಳೆಯ ಪ್ರವಾಸಾನುಭವವಾದದ್ದಲ್ಲದೆ, ಈ ಕಾರ್ಯಕ್ರಮದೊಂದಿಗೆ ಆಸಕ್ತರಿಗೆ ದೆಹಲಿ, ಆಗ್ರಾ ಮುಂತಾದ ಕಡೆಯ ಚಾರಿತ್ರಿಕ ಸ್ಮಾರಕಗಳ, ದೈವಭಕ್ತಿಯುಳ್ಳವರಿಗೆ ಹೃಷಿಕೇಶ, ಹರಿದ್ವಾರಗಳ ದರ್ಶನವೂ ಆದದ್ದು ಒಂದು ಅವಿಸ್ಮರಣೀಯ ನೆನಪಾಗಿ ಉಳಿದಿದೆ. ಹೀಗಾಗಿ ಅಂದಿನ ಅಕಾಡೆಮಿಯ ಸದಸ್ಯರು ಅಧ್ಯಕ್ಷರಾದ ನಿಸಾರರಿಗೆ ಧನ್ಯವಾದವನ್ನು ಸಲ್ಲಿಸಬೇಕಾಗುತ್ತದೆಂದು ಅತ್ಯಂತ ಗೌರವದಿಂದ ಹೇಳಿಕೊಂಡಿದ್ದಾರೆ.

ಪ್ರೊ. ನಿಸಾರ್ ಅಧ್ಯಕ್ಷರಾಗಿದ್ದ ಮೂರು ವರ್ಷಗಳ (1984–1987) ಅವಧಿಯಲ್ಲಿ ಅಭೂತಪೂರ್ವ ಕೆಲಸ ಮಾಡಿ ಸಾರ್ಥಕ, ಸಂತೃಪ್ತ ಭಾವ ಸದಸ್ಯರಲ್ಲಿ ಮನೆಮಾಡಿತ್ತೆಂದು ಅವರ ಸದಸ್ಯರಲ್ಲಿದ್ದಂತಹ ಬಿ.ಟಿ.ಲಲಿತಾನಾಯಕ್‌ರವರು ತಿಳಿಸುತ್ತಾರೆ. "ನಿಸಾರ್ ಅಹಮದ್‌ರವರು ಅಧ್ಯಕ್ಷರಾಗಿದ್ದ ಅವಧಿ ಅಪೂರ್ವವಾಗಿತ್ತು. ಸಿಬ್ಬಂದಿ ವರ್ಗದ ಅವಿಸ್ಮರಣೀಯ ಶ್ರಮ, ಸರಕಾರದ ಸಹಕಾರ, ಸದಸ್ಯರ ಅಮೂಲ್ಯ ಸಲಹೆ ಸೂಚನೆಗಳನ್ನು ಪಡೆದು ಮೂರು ವರ್ಷಗಳ ಕಾಲ ಬಿಡುವಿಲ್ಲದಂತೆ ದೇಶದ ನಾನಾ ಕಡೆಗಳಲ್ಲಿ ಈ ಎಲ್ಲಾ ಸಭೆ–ಸಮಾರಂಭ, ಗೋಷ್ಠಿ, ಕಮ್ಮಟ, ಪುಸ್ತಕ ಪ್ರಕಟಣೆ, ಪುಸ್ತಕ ಪ್ರದರ್ಶನ ಏನೆಲ್ಲಾ ಕಾರ್ಯಕ್ರಮಗಳು ಸಮಾಜೋಪಯೋಗಿಯಾಗಿ, ಯಶಸ್ವಿಯಾಗಿ ಜರುಗಿದವು. ಇದನ್ನು ಸ್ವಂತದ ಕೆಲಸವೋ ಎಂಬಂತೆ ಹಗಲಿರುಳು ಶ್ರಮಿಸಿ, ಬೇರೆಯವರಿಗೂ ಉತ್ತೇಜನ ನೀಡಿ ನಿಭಾಯಿಸಿದ ಕವಿ ನಿಸಾರರು, ಸಾಹಿತ್ಯ ಅಕಾಡೆಮಿಯನ್ನು ಆಧಾರವಾಗಿಸಿಕೊಂಡು ನಾಡಿನ ಜನತೆಯ ಮನೆ–ಮನಗಳಲ್ಲಿ ನಿತ್ಯೋತ್ಸವದ ಛಾಪು ಒತ್ತಿದರು. ಗಂಟೆ ಘಳಿಗೆಗಳ ಲೆಕ್ಕವಿಡದೆ ಮನೆ ಮಾರು ಮರೆತು ಅಕಾಡೆಮಿಯ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ಜೊತೆಗೆ ತಮ್ಮ ಪ್ರಾಧ್ಯಾಪಕ ವೃತ್ತಿಗೂ ನ್ಯಾಯವನ್ನು ಸಲ್ಲಿಸಿದರು. ಅವರಿಗೆ ನಾವೆಲ್ಲಾ 'ಫುಲ್‌ಟೈಂ ಪ್ರೆಸಿಡೆಂಟ್' ಎಂದು ತಮಾಷೆ ಮಾಡುತ್ತಿದ್ದೆವು. ಅವರ ಶಿಸ್ತಿನ, ಜರ್ಬಿನ ಅಧಿಕಾರವನ್ನು ಕಂಡವರು 'ಪ್ರೆಸಿಡೆಂಟ್ ರೂಲ್ ಹೇಗಿದೆ ಸಾರ್?'ಎಂದು

ಭೇಡಿಸುತ್ತಿದ್ದರು. ಪರೋಕ್ಷವಾಗಿ ಪ್ರಶಂಸಿಸುತ್ತಿದ್ದರು" ಎಂದು ತುಂಬಾ ಅಭಿಮಾನದಿಂದ ಅಕಾಡೆಮಿಗಾಗಿ ಸಹ ಸದಸ್ಯರಾಗಿ ದುಡಿದ ಬಿ.ಟಿ.ಲಲಿತಾ ನಾಯಕರವರು ಹೇಳಿಕೊಂಡಿದ್ದಾರೆ. ನಿಸಾರ ಅಹಮದ್‌ರವರನ್ನು ಅತ್ಯಂತ ಸಮೀಪದಿಂದ ಅಂದಿನ ಅಕಾಡೆಮಿಯ ಸದಸ್ಯರಾಗಿದ್ದ ಲಲಿತಾ ನಾಯಕರವರು ಅತ್ಯಂತ ಅಭಿಮಾನದಿಂದ, ಹೆಮ್ಮೆಯಿಂದ ವಾಸ್ತವವನ್ನು ಅಭಿವ್ಯಕ್ತಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ತಮ್ಮದೇ ವಿಶಿಷ್ಟ ಶೈಲಿಯಿಂದ ಗಮನಸೆಳೆಯುವ ಬರಹಗಾರರಾದ ಹಿರಿಯರಾದ ಡಾ.ವಿಜಯಾರವರೂ ನಿಸಾರ್ ಅವರ ಅಭಿಮಾನಿಗಳಲ್ಲೊಬ್ಬರು. ಅವರೂ ಸಹ ನಿಸಾರ್ ಅಹಮದ್‌ರವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅನುಪಮ ಕೆಲಸವನ್ನು ಮುಕ್ತ ಕಂಠದಿಂದ ಹೊರಹಾಕಿದ್ದಾರೆ.

"ನಿಸಾರ್ ತಾನು ಅಂದುಕೊಂಡದ್ದನ್ನು ಅಚ್ಚುಕಟ್ಟಾಗಿ ನಿರ್ವಹಿಸಲಾಗದೇ ಹೋದರೆ ಒಳಗೇ ಕುದ್ದುಕೊಳ್ಳುವ ಸ್ವಭಾವದವರು.ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆಯ ಅವಧಿಯಲ್ಲಿ ಇಂಥ ನೋವುಗಳು ಬಹಳಷ್ಟು ಎದುರಾದವು. ಅದೇ ಅವಧಿಯಲ್ಲಿ ಗೋಕಾಕ್ ಚಳುವಳಿಯ ಭರಾಟೆಯ ಪ್ರಾರಂಭವಾಯಿತು. ಅಕಾಡೆಮಿಯ ಅಧ್ಯಕ್ಷರಾಗಿ ಸರ್ಕಾರವನ್ನೇ ವಿರೋಧಿಸಿ ನಿಲ್ಲುವುದು ಸರಳವಾದ ಮಾತಾಗಿರಲಿಲ್ಲ. ತಟಸ್ಥವಾಗಿಯೂ ಇರುವಂತಿಲ್ಲ. ಗುಂಡೂರಾಯರ ಸರ್ಕಾರ ಸಾಹಿತಿಯ ಇಕ್ಕಟ್ಟನ್ನು, ಭಾಷೆಯ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದೂ ಸಾಧ್ಯವಿರಲಿಲ್ಲ. ಆದರೂ ನಿಸಾರ್ ಚಳವಳಿಗೆ ಬಂದು ಭಾಗವಹಿಸಿದರು. ಅದು ಅವರ ಕನ್ನಡ ಪ್ರೀತಿ. ಅಧಿಕಾರಕ್ಕಾಗಿ ಹಪಹಪಿಸಿ ಒಪ್ಪಂದ ಮಾಡಿಕೊಳ್ಳಲಿಲ್ಲ. ಅವರ ಅವಧಿಯಲ್ಲಿ 'ಸಾಲು ದೀಪಗಳು' ಕೃತಿಯ ಯೋಜನೆಯನ್ನು ಹಾಕಿದರು. ಮಹತ್ವಾಕಾಂಕ್ಷೆಯ ಅದು ಸಕಾಲದಲ್ಲಿ ಪೂರ್ತಿಯಾಗಲಿಲ್ಲ. ಅನಂತರ ಜಿ.ಎಸ್.ಎಸ್. ಅಧ್ಯಕ್ಷತೆಯ ಅವಧಿಯಲ್ಲಿ ಯೋಜನೆ ಪೂರ್ತಿಯಾಯಿತು. ಆದರೆ 'ಸಾಲು ದೀಪಗಳು' ಬಗ್ಗೆ ನಿಸಾರ್ ಕಂಡ ಕನಸು, ಪ್ರಾರಂಭಿಸಿದ ಕೆಲಸ ಒಂದು ದಿವ್ಯವೇ ಸರಿ. ರಾಮಕೃಷ್ಣ ಹೆಗಡೆಯವರ ಸರ್ಕಾರ ಅಧಿಕಾರಕ್ಕೆ ಬಂದಿತು. ನಿಸಾರ್ ಅವರ ಅಧ್ಯಕ್ಷತೆಗೇನೂ ತೊಡಕು ಬರಲಿಲ್ಲ. ಗುಂಡೂರಾಯರ ಭವ್ಯವಾದ ಕನಸಾಗಿದ್ದ 'ವಿಶ್ವ ಕನ್ನಡ ಸಮ್ಮೇಳನ'ವನ್ನು ಒಂದಿಷ್ಟೂ ಕುಂದು ಬರದ ಹಾಗೆ ಹೆಗಡೆ ಅವರು ನೆರವೇರಿಸಿದರು. ಅದೊಂದು ಅಭೂತಪೂರ್ವ ಸಮಾರಂಭ. ಪರ–ವಿರೋಧಗಳ ನಡುವೆಯೂ ಸೊಗಸಾಗಿ ನೆರವೇರಿತ್ತು. 'ಅವರ ಕನಸಿದು, ಅವರ ಉಪಸ್ಥಿತಿ ಮುಖ್ಯ' ಎಂದು

ಗುಂಡೂರಾಯರನ್ನೇ ಕರೆದ ಹೆಗಡೆಯವರು ನಡೆಸಿದ ಕಾರ್ಯಕ್ರಮ; ಕುವೆಂಪು, ಶಿವರಾಮ ಕಾರಂತರ ಉಪಸ್ಥಿತಿ– ಒಂದಕ್ಕಿಂತ ಒಂದು ಸಂತೋಷ ತರುವ ಸಂಗತಿಗಳಾಗಿದ್ದವು.ಆಗ ಸಂಸ್ಕೃತಿ ಇಲಾಖೆ ಪ್ರಕಟಿಸಿದ ಪುಸ್ತಕಗಳಿಗೂ ಗುಂಡೂರಾಯರ ಮುನ್ನುಡಿಯೇ ಇತ್ತು" ಎಂದು ಡಾ. ವಿಜಯಾರವರು ಅಂದಿನ ಅಕಾಡೆಮಿಯ ಸ್ಥಿತಿಗತಿಯನ್ನು, ಹಾಗೂ ನಿಸಾರರು ದುಡಿದ ರೀತಿಯನ್ನು ಮನಪೂರ್ವಕವಾಗಿ ಹೇಳಿದ್ದಾರೆ.

ನಿಸಾರ್ ಅಹಮದ್‌ರವರ ಆತ್ಮೀಯರಲ್ಲೊಬ್ಬರಾದ ಶ್ರೀ ವಿ.ಎಸ್. ಕೃಷ್ಣಯ್ಯರ್‌ರವರೂ ಸಹ ಇವರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವಧಿಯ ಕ್ಷಣಗಳನ್ನು ಆತ್ಮೀಯವಾಗಿ ಹಂಚಿಕೊಂಡಿದ್ದಾರೆ. "ಶ್ರೀ ರಾಮಕೃಷ್ಣ ಹೆಗಡೆಯವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಪ್ರೊ.ಕೆ.ಎಸ್. ನಿಸಾರ್ ಅಹಮದ್‌ರವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಜನಸಾಮಾನ್ಯರ ಬಳಿಗೆ ಮೊದಲ ಬಾರಿಗೆ ಕರೆದೊಯ್ದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರು ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ಜರುಗಿದ ಅನೇಕ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿದ್ದೇನೆ. ವಿಚಾರಗೋಷ್ಠಿ, ಸಂವಾದ ಹಾಗೂ ಉಪನ್ಯಾಸ ಮೊದಲಾದ ಕಾರ್ಯಕ್ರಮಗಳ ಜೊತೆಗೆ ಕವಿ ಸಮ್ಮೇಳನಗಳನ್ನು ಕೂಡ ಅವರು ಹಮ್ಮಿಕೊಳ್ಳುತ್ತಿದ್ದರು. ಅಕಾಡೆಮಿ ಅಪ್ಪಿತಪ್ಪಿ ನೆನೆಸಿಕೊಳ್ಳಲೂ ಒಪ್ಪದ ಹಲವು ವರ್ಗಗಳ, ವರ್ಣಗಳ ಉದಯೋನ್ಮುಖ ಅಜ್ಞಾತ ಕವಿಗಳನ್ನು ಅವರು ವೇದಿಕೆಯೇರಿಸಿ ಬೆಳಕಿನಲ್ಲಿ ಮೆರೆಸಿದರು. ಇದರಿಂದ ನೂರಾರು ಯುವ ಕವಿಗಳಿಗೆ ಪ್ರೋತ್ಸಾಹ ದೊರೆಯಿತು. ಜೊತೆಗೇ, ಜನಸಾಮಾನ್ಯರು ಸಹ ಈ ಕವಿಗೋಷ್ಠಿಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಮನಪೂರ್ವಕವಾಗಿ ಭಾಗವಹಿಸುತ್ತಿದ್ದರು". ಹೀಗೆ ಶ್ರೀ ವಿ.ಎಸ್.ಕೃಷ್ಣಯ್ಯರ್ ರವರು ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟಿದ್ದಾರೆ.

ಕೆ.ಎಸ್.ನಿಸಾರ್ ಅಹಮದ್‌ರವರ ಆತ್ಮೀಯ ವಲಯದ ಹಿರಿಯರಲ್ಲಿ ನಾಡಿನ ಉದಾತ್ತ ವ್ಯಕ್ತಿತ್ವದ ಜಿ.ನಾರಾಯಣರವರೂ ಒಬ್ಬರು. ಇವರೂ ಸಹ ನಿಸಾರ್ ಅಹಮದ್‌ರವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ದಿನಗಳನ್ನು ಯಾವ ರೀತಿ ಪೂರೈಸಿದರು, ಎಂತಹ ಅರ್ಥಪೂರ್ಣ ಕೆಲಸಗಳನ್ನು ಕೈಗೊಂಡರೆಂಬುದನ್ನು ಹೀಗೆ ವಿವರಿಸಿದ್ದಾರೆ. "ನಿಸಾರ್ ಅಹಮದ್ ಅವರನ್ನು 1980ರ ದಶಕದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ

ಅಧ್ಯಕ್ಷರನ್ನಾಗಿ ಸರ್ಕಾರ ನೇಮಿಸಿದಾಗ ನನಗೆ ಆದ ಹರ್ಷ ಅಷ್ಟಿಷ್ಟಲ್ಲ. ಒಬ್ಬ ಸಮರ್ಥ ಹಾಗೂ ಉತ್ಸಾಹಶಾಲಿ ವ್ಯಕ್ತಿಯ ಆಯ್ಕೆಯಾಗಿದೆ ಎಂಬ ಭಾವನೆ ನನಗೆ ಉಂಟಾಗಿತ್ತು. ಆಗ ಅವರು ಮೈಸೂರಿಗೆ ಹೋಗಿ ರಾಷ್ಟ್ರಕವಿ ಕುವೆಂಪು ಅವರ ಆಶೀರ್ವಾದವನ್ನು ಪಡೆದು ಬಂದರು. ಬೆಂಗಳೂರಿನ ಹಿರಿಯ ಸಾಹಿತಿಗಳಾದ ಮಾಸ್ತಿಯಂಥವರ ಆಶೀರ್ವಾದವನ್ನೂ ಪಡೆದರು. ಅನೇಕ ಹಿರಿಯ ಸಾಹಿತಿಗಳನ್ನು, ಧೀಮಂತರನ್ನು ಕಲಾಕಾರರನ್ನು, ಸಮಾಜದ ಗಣ್ಯವ್ಯಕ್ತಿಗಳನ್ನು ಆಹ್ವಾನಿಸಿ, 'ಅನೌಪಚಾರಿಕ ಸಭೆ'ಯನ್ನು ಕರೆದು ಅವರೆಲ್ಲರ ಜೊತೆ ಅಕೆಡೆಮಿ ನಡೆಸಬೇಕಾದ ಮುಂದಿನ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಗಂಭೀರ ಸಮಾಲೋಚನೆಯನ್ನು ನಡೆಸಿದರು. ಅಂದಿನ ಅಧ್ಯಕ್ಷತೆ ಡಾ.ಮಾಸ್ತಿ ಅವರದು. ನಿಸಾರರು ನನ್ನ ಸಲಹೆಯನ್ನು ಕೇಳಿದಾಗ, ನಾನು 'ನಿಸಾರ್ ಅವರೆ, ನೀವು ಜನರ ಪ್ರೀತಿಯನ್ನು ಗಳಿಸಿದವರು, ಹುಮ್ಮಸ್ಸಿರುವವರು. ಅಕಾಡೆಮಿ ಈವರೆಗೆ ಕೇವಲ ಬೆಂಗಳೂರಿಗೆ ಸೀಮಿತವಾಗಿದೆ ಎಂಬ ಅಪವಾದವಿದೆ.ಇದನ್ನು ಹೋಗಲಾಡಿಸಲು ಪ್ರಯತ್ನಿಸಿ. ನಮ್ಮ ಗ್ರಾಮ ಪ್ರದೇಶಗಳ ಜನಗಳಿಗೆ, ಇತರೇ ಊರುಗಳವರಿಗೆ ನಮ್ಮ ಸಾಹಿತ್ಯ ಸಂಸ್ಕೃತಿಗಳ ತಿಳಿವಳಿಕೆ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ. ಹೆಚ್ಚು ಜನಪರವಾದ ಕೆಲಸಗಳೂ ನಮ್ಮ ಕಾಲದಲ್ಲಿ ನೆರವೇರಲಿ' ಎಂದು ಹಾರೈಸಿದೆ.ನನ್ನ ಈ ಆಸೆಯನ್ನು ನೆರವೇರಿಸಲೋ ಎನ್ನುವಂತೆ ಸತತ ಮೂರು ವರ್ಷಗಳ ಕಾಲ ನಿಸಾರರು ಜಿಲ್ಲೆಗೊಂದು ಕಾರ್ಯಕ್ರಮ', 'ತಾಲ್ಲೂಕಿಗೊಂದು ಕಾರ್ಯಕ್ರಮ' ಹೆಸರಿನಲ್ಲಿ ನೂರಾರು ಕಾರ್ಯಕ್ರಮಗಳನ್ನು ಏರ್ಪಡಿಸಿದರು. ಅಕಾಡೆಮಿಯ ಕೀರ್ತಿಯನ್ನು ಮೊದಲ ಬಾರಿಗೆ ಎಲ್ಲ ಕಡೆ ಪಸರಿಸಲು ಶ್ರಮಿಸಿದರು".

ಹೀಗೆ ಕನ್ನಡಿಗರ ಜನಮಾನಸದಲ್ಲಿ ತಮ್ಮದೇ ಆದ ಸ್ಥಾನವನ್ನು ಸ್ಥಾಪಿಸಿದಂತಹ ನಿಸಾರ ಅಹಮದ್‌ರವರು ಅಕಾಡೆಮಿಗೆ ಹೊಸ ಸ್ವರೂಪವನ್ನು ನೀಡಿದವರು. ಅವರು ಬದುಕು–ಬರಹಗಳಿಂದಷ್ಟೇ ಅಲ್ಲ ಇಂತಹ ಸಂಸ್ಥೆಗಳನ್ನೂ, ಸಾರಸ್ವತ ಲೋಕವನ್ನು ಎಷ್ಟು ಸಮರ್ಥವಾಗಿ ನಿರ್ವಹಿಸಿದರೆಂಬುದನ್ನು ಈ ಹಿರಿಯರು ಪ್ರಾಂಜಲಭಾವದಿಂದ ಅಭಿವ್ಯಕ್ತಿಸಿದ್ದಾರೆ. ನಿಸಾರ್ ಅವರು ಸಮರ್ಥವಾಗಿ ಅಕಾಡೆಮಿಯನ್ನು ಮುನ್ನಡೆಸಿದ ಮಹನೀಯರು. ಅವರು ಕನ್ನಡ ಸಾರಸ್ವತ ಲೋಕದ ಅಪೂರ್ವ ವ್ಯಕ್ತಿಯಾಗಿರದೆ ಅದ್ಭುತ ಶಕ್ತಿಯೂ ಅಗಿದ್ದರೆಂಬುದನ್ನು ಅವರ ಸಮೀಪದಿಂದ ಕಂಡವರು ತಿಳಿಸಿದ್ದಾರೆ. ಇಂತಹ ಜವಾಬ್ದಾರಿಯನ್ನು ವಹಿಸಿಕೊಂಡಾಗ ಎಲ್ಲವೂ

ಸುಸೂತ್ರವಾಗಿಯೇ ಜರುಗುತ್ತವೆ ಎಂಬುದಾಗಲಿ, ಎಲ್ಲರ ಸಹಕಾರವೂ ಖಂಡಿತವಾಗಿ ದೊರೆಯುತ್ತದೆ ಎಂದು ಹೇಳುವದು ಸಮಂಜಸವಲ್ಲ. ಒಂದಂತೂ ನಿಜ ನಿಸಾರ್‌ರವರು ತಾವು ವಹಿಸಿಕೊಂಡಂತಹ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ, ಅದಕ್ಕೆ ನ್ಯಾಯ ದೊರಕಿಸುವ ಜಾಯಮಾನದವರು. ಯಾರದೇ ಸಹಕಾರ ಸಿಗಲಿ ಬಿಡಲಿ, ತಮ್ಮ ಸದುದ್ದೇಶಕ್ಕಾಗಿ ಸದಾ ಹಂಬಲಿಸುವ ವಿಶಾಲ ಹೃದಯಿಗಳು. ಇಂತಹ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆಯ ಜವಾಬ್ದಾರಿಯಲ್ಲಿ ಅವರಿಗೆ ಎಲ್ಲರ ಹಾಗೂ ಎಲ್ಲ ಸದಸ್ಯರ ಸಹಕಾರ ಸಿಕ್ಕಿತ್ತೆಂದೋ ಅಥವಾ ಸಿಗದಿರಲಿಕ್ಕಿಲ್ಲ ಈ ವಿಚಾರ ಇಲ್ಲಿ ಅಪ್ರಸ್ತುತ. ಏಕೆಂದರೆ ಅವರು ತಮ್ಮ ಕಾರ್ಯಕ್ಕೆ ಬೆಂಬಲ ಸಿಗದೇ ಇದ್ದರೂ ಒಳಗೊಳಗೇ ವ್ಯಥೆಪಟ್ಟರೂ ಕನ್ನಡದ ಕೆಲಸಕ್ಕಾಗಿ ತಮ್ಮ ಮನವನ್ನು ಸದಾ ಸನ್ನದ್ಧರಾಗಿಟ್ಟಂತಹ ಅಪ್ಪಟ ಕನ್ನಡಿಗರವರು. ಒಟ್ಟಾರೆ ಅವರು ಅಕಾಡೆಮಿಯ ಅಧ್ಯಕ್ಷರಾಗಿ ಕನ್ನಡವನ್ನು, ಕನ್ನಡ ಮನಸ್ಸುಗಳನ್ನು ಬೆಸೆಯುವಲ್ಲಿ ಅವರು ಮಾಡಿರುವ ಕಾಯಕ ಅಮೂಲ್ಯವಾದುದು.

# ವ್ಯಕ್ತಿತ್ವ

ಕೆ.ಎಸ್. ನಿಸಾರ್ ಅಹಮದ್‌ರವರು ಕನ್ನಡ ನಾಡಿನ ಕನ್ನಡಾಂಬೆಯ ಅಪೂರ್ವ ಚೇತನ. ಸುಸಂಸ್ಕೃತ ಮನೆತನದಲ್ಲಿ ಜನಿಸಿದ ನಿಸಾರ್ ಅಹಮದ್‌ರವರ ಬೆಳವಣಿಗೆ ಮನೆಯ ಆರೋಗ್ಯಕರ ಪರಿಸರವೂ ಸಹ ಅಷ್ಟೇ ಅವರ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮಹತ್ವದ ಸಂಗತಿಯಾಗಿದೆ. ಸರಳ, ವಿನಯಪೂರ್ವಕ, ಸೌಜನ್ಯ ಮನೋಭಾವದ ನಿಸಾರ ಅಹಮದ್‌ರವರು ತಮ್ಮ ವಿಶಾಲ ಹೃದಯದಿಂದ ಸರ್ವರ ಮನಸೂರೆಗೊಳ್ಳುತ್ತಾರೆ. ಅವರ ನಿರಹಂಕಾರ ಮನೋಭಾವವು ಪ್ರತಿಭಾವಂತಿಕೆಗೆ ಹೆಚ್ಚಿನ ಮೆರಗನ್ನು ನೀಡಿದೆ. ನಿಷ್ಪಕ್ಷಪಾತ, ಪ್ರಾಮಾಣಿಕ ಸ್ವಭಾವದ ನಿಸಾರ್ ಅಹಮದ್‌ರವರು ಅದ್ಭುತ ಜ್ಞಾನದ ಗಣಿ. ಕ್ರಿಯಾತ್ಮಕ ಬರಹಗಳಿಂದ ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದಂತಹ ವಿಶಿಷ್ಟ ಛಾಪನ್ನು ಮೂಡಿಸಿದವರು. ಎಲ್ಲಿಯೂ ಗುಂಪುಗಾರಿಕೆಗೆ ಅವಕಾಶ ಕೊಡದ ಅವರ ಮನಸ್ಸು ವಿಶಿಷ್ಟ ಶೈಲಿಯ ಬರವಣಿಗೆಯಿಂದ ತಮ್ಮದೇ ಆದ ಶೈಲಿಯನ್ನು ಪರಿಚಯಿಸಿದವರು.

'ನಿಸಾರ್' ಎಂದರೆ 'ದಾನ, ತ್ಯಾಗ, ಬಲಿದಾನ' ಎಂದು ಅರ್ಥವಂತೆ ಹೀಗಾಗಿ ಹೆಸರಿಗನ್ವರ್ಥವೆಂಬಂತೆ ನಿಸಾರ್ ಅಹಮದ್‌ರವರ ಹೃದಯ ತುಂಬಾ ವಿಶಾಲ ಹಾಗೂ ಉದಾರವಾದದ್ದು.ಅದನ್ನು ಅವರ ಜೀವನ ಹಾಗೂ ಬರವಣಿಗೆ ಆದರ್ಶಪಾಯವಾದದ್ದು.ಬರಹದಲ್ಲೂ ಸಹ ಅವರ ಆಯ್ಕೆಯ ವಿಷಯಗಳು ವ್ಯಕ್ತಿಗತ ಚಿತ್ರಣಗಳಿಂದಲೇ ಅವರ ಅಂತರಾಳ ಎಂತಹ ನಿರ್ಮಲ ಹಾಗೂ ಪ್ರಾಂಜಲವಾದದ್ದು ಎಂಬುದನ್ನು ಕಾಣಬಹುದು. ನಡೆ ನುಡಿಯಲ್ಲೂ ಸಹ ಅಷ್ಟೇ ನೇರವಾದ ಸದಾ ಅವರ ಜೀವನ ನಿರಾಡಂಬರ ಮನೋಭಾವದ ಪ್ರೊ: ನಿಸಾರ್ ಅಹಮದ್‌ರವರ ವ್ಯಕ್ತಿತ್ವ ಅನುಕರಣೀಯವಾದದ್ದು, ಆದರಣೀಯವಾದದ್ದು. ಯಾವ ಕೋಮಿಗೆ, ಗುಂಪುಗಾರಿಕೆಗೆ ಅವಕಾಶ ನೀಡದ ನಿಸ್ವಾರ್ಥ ಮನೋಭಾವದ ನಿಸಾರರು ಮಹಾ ಮಾನವತಾವಾದಿಯಾಗಿ ತೋರುತ್ತಾರೆ. ಸೌಜನ್ಯದ ಇನ್ನೊಂದು ಹೆಸರೇ ಮೈವೆತ್ತಂತೆ ಅವರು ಕಂಗೊಳಿಸುತ್ತಾರೆ. ನಿಸಾರರು ಕನ್ನಡ ನಾಡಿನ ಹಿರಿಮೆ ಹಾಗೂ ಚೇತನವಾಗಿ ಕಂಗೊಳಿಸುತ್ತಾರೆ ಇದು ಕನ್ನಡಿಗರ ಭಾಗ್ಯ.

## ಪ್ರೊ: ನಿಸಾರ್ ಅಹಮದ್ ಅವರ ಕಾವ್ಯ

ಕನ್ನಡ ನಾಡು–ನುಡಿ

ನಿಸರ್ಗ

ದೇಶಪ್ರೇಮ

ನಗರ ಚಿತ್ರಣ

ವಿಡಂಬನೆ, ಕೋಮುಸೌಹಾರ್ದತೆ

ಸಂಸ್ಕೃತಿ ಹಾಗೂ ಸಂಪ್ರದಾಯ

ಆಡುಮಾತಿನ ಕವನಗಳು,

ಕವಿತೆಯ ಆಯಾಮಗಳು.

ನಿಸಾರ್ ಅಹಮದ್‌ರವರು ಕಾವ್ಯ ಕಟ್ಟುವ ಕಲೆಯಲ್ಲಿ ನಿಷ್ಣಾತರು. ಅರ್ಥಪೂರ್ಣ ಕಲಾವಂತಿಕೆಯಿಂದ ಕೂಡಿದ ಅವರ ಕಾವ್ಯ, ಸಾಹಿತ್ಯ ಪ್ರತಿಯೊಬ್ಬರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗುತ್ತದೆ.ಅವರ ವರ್ಣನಾ ಚಾತುರ್ಯ, ಸೂಕ್ಷ್ಮ ಶೈಲಿಯ ಪದಬಂಧಗಳ ಜೋಡಣಾ ಕೌಶಲ ತೀವ್ರ ಆಸಕ್ತಿಯಿಂದ ಓದುಗರನ್ನು ತನ್ನೆಡೆ ಸೆಳೆಯುತ್ತದೆ.ಮೋಹಕ ರಚನೆಯಿಂದ ಹೊರಹೊಮ್ಮುವ ನಿಸಾರರ ಕವನಗಳು ಓದುಗರನ್ನು ಭಾವಪರವಶಗೊಳಿಸುತ್ತ ಮನಸ್ಸಿಗೆ ಮುದನೀಡುತ್ತ ತಮ್ಮದೇ ಆದಂತಹ ವಿಶಿಷ್ಟ ಛಾಪನ್ನು ಓದುಗನ ಮೇಲೆ ಮೂಡಿಸುತ್ತಾ ಅವರ ಕವನಗಳು ಅರ್ಥವಂತಿಕಿಯಿಂದ ಮೂಡಿಬರುತ್ತವೆ.

ಕನ್ನಡವನ್ನು ಕನ್ನಡಾಂಬೆಯನ್ನು ಕುರಿತು ಹೊಸಗನ್ನಡದ ಕವಿಗಳು ಸಾಕಷ್ಟು ಹಾಡಿಹೊಗಳಿದ್ದಾರೆ. ಕನ್ನಡ ನೆಲ ಜಲ, ಪ್ರಕೃತಿ ಸಂಪತ್ತನ್ನು ವರ್ಣಿಸಿದ್ದಾರೆ. ಆದರೆ ಪ್ರೊ: ನಿಸಾರ್ ಅಹಮದ್‌ರವರು ಇಲ್ಲಿನ ಪ್ರಕೃತಿ ಸಂಪತ್ತು, ಶಾಸನ, ದೇವಾಲಯ, ವಾಸ್ತುಶಿಲ್ಪ ಮುಂತಾದವುಗಳಲ್ಲಿ ಕನ್ನಡಾಂಬೆಯ ಅನುದಿನದ ಉತ್ಸವವನ್ನೇ ಕಾಣುತ್ತಾರೆ.

"ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ

ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ

ನಿತ್ಯ ಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ ತಾಯಿ ನಿತ್ಯೋತ್ಸವ ನಿನಗೆ......
ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ,
ಗತಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ,
ಓಲೆಗರಿಯ ಸಿರಿಗಳಲ್ಲಿ ದೇಗುಲಗಳ ಭಿತ್ತಿಗಳಲಿ
ನಿತ್ಯೋತ್ಸವ ತಾಯಿ ನಿತ್ಯೋತಸವ.......
ಹಲವೆನ್ನದ ಹಿರಿಮೆಯೆ ಕುಲವೆನ್ನದ ಗರಿಮೆಯೆ
ಸದ್ವಿಕಾಸಶೀಲ ನುಡಿಯ ಲೋಕಾವೃತ ಸೀಮೆಯೇ
ಈ ವತ್ಸರ ನಿರ್ವತ್ಸರ ಮನದುದಾರ ಮಹಿಮೆಯೆ
ನಿತ್ಯೋತ್ಸವ ತಾಯಿ ನಿತ್ಯೋತ್ಸವ"

ಪ್ರೊ: ನಿಸಾರ್ ಅಹಮದ್‌ರವರಿಗೆ ವ್ಯಾಪಕವಾಗಿ ಪ್ರಚಾರ ಹಾಗೂ ಖ್ಯಾತಿಯನ್ನು ತಂದುಕೊಟ್ಟಂತಹ ಕವನ ನಿತ್ಯೋತ್ಸವ ಈ ಮಹತ್ವದ ಕವನ ಎಂಥವರನ್ನೂ ಕ್ಷಣಕಾಲ ಮಂತ್ರಮುಗ್ಧರನ್ನಾಗಿಸುತ್ತದೆ. ಹೊಸಗನ್ನಡದ ಕವನಗಳಲ್ಲಿ ಇದೊಂದು ವಿಶಿಷ್ಟವಾದ ಶೈಲಿಯಿಂದ ಹೊರಹೊಮ್ಮಿದೆ. ಇವರ ಅನೇಕ ಕವನಗಳು ಹಿಂದಿ, ಇಂಗ್ಲೀಷ, ಉರ್ದು, ಮಲಯಾಳಂ, ತೆಲುಗು, ಮರಾಠಿ ಹಾಗೂ ಚೀನಿ ಮುಂತಾದ ಭಾಷೆಗಳಿಗೆ ತರ್ಜುಮೆಗೊಂಡಿವೆ. ಆದರೆ ಆ ಕವನಗಳಲ್ಲಿ ವಿಶಿಷ್ಟ ರೀತಿಯ ಖ್ಯಾತಿ ನಿಸಾರ್‌ರವರಿಗೆ ದೊರೆತದ್ದು ಈ ನಿತ್ಯೋತ್ಸವ ಕವಿತೆಯಿಂದ ಈ ನಿತ್ಯೋತ್ಸವ ಕವಿತೆಯ ಕುರಿತಾಗಿ ಶ್ರೀ ಬಿ.ಎಸ್.ಕೇಶವರಾವ್‌ರವರು "ನಿಸಾರರು ಗಟ್ಟಿ ಎನಿಸುವ ನೂರಾರು ಕವನಗಳನ್ನು ಕಟ್ಟಿದ್ದಾರೆ ನಿಜ. ಆದರೆ ಮೂರು ದಶಕಗಳಿಗೂ ಹಿಂದೆಂದೋ ಒಂದು ಒತ್ತಡದ ಸಂದರ್ಭಕ್ಕೊಳಪಟ್ಟು ಹಗಲು-ರಾತ್ರಿ ಬೆಂಗಳೂರಿನಲ್ಲಿ ಪಟ್ಟು ಹಿಡಿದು ಬರೆದ ಗೀತೆಯೇ 'ನಿತ್ಯೋತ್ಸವ' ಇವರ ಕಾವ್ಯರಚನಾ ಶಕ್ತಿಗೆ ಕೋಡು ಮೂಡಿಸಿದ ಈ ಗೀತೆ ನಿಸಾರ್‌ರ ನಿತ್ಯ ಜೀವನದಲ್ಲಿ ನಿರಂತರವಾಗಿ ನಿತ್ಯೋತ್ಸವವನ್ನೇ ಕಾಣುವಂತೆ ಇಂದಿಗೂ ಮಾಸದೆ ಮಿಂಚುತ್ತಿದೆ. ನಿಸಾರ್ ಅಹಮದ್ ಎನ್ನುತ್ತಿದ್ದಂತೆ 'ನಿತ್ಯೋತ್ಸವದ ನಿಸಾರರು ತಾನೇ?ಎಂಬಂತಾಗಿ ಬಿಟ್ಟಿದೆ" ಎನ್ನುತ್ತಾ ನಿತ್ಯೋತ್ಸವ ಕವಿತೆಯ ಜನಪ್ರೀಯತೆಯ ಬಗ್ಗೆ ಬೆಳಕು ಚೆಲ್ಲುತ್ತಾರೆ.

ನಿತ್ಯೋತ್ಸವ ಕವನದ ಶೀರ್ಷಿಕೆಯೇ ತುಂಬಾ ಆಕರ್ಷಕವಾದದ್ದು.ಕವಿಯ ಅಪ್ಪಟ ಪ್ರತಿಭೆಯಿಂದ ಹೊರ ಹೊಮ್ಮಿದ ಈ ಶಬ್ದ ಬಹಳ ಸೊಗಸಾದದ್ದು,

1974ರಲ್ಲೇ ಭಾರತೀಯ ಭಾಷೆಗಳಲ್ಲೇ ಮೊಟ್ಟಮೊದಲನೆಯದಾಗಿ 'ನಿತ್ಯೋತ್ಸವ' ಎಂಬ ಭಾವಗೀತೆಗಳ ಧ್ವನಿಸುರುಳಿಯನ್ನು ಹೊರತಂದು ನಿಸಾರ್ ಅಹಮದ್‌ರವರು ತುಂಬಾ ಖ್ಯಾತಿಯನ್ನು ಗಳಿಸಿದ್ದಾರೆ.

"ಕನ್ನಡವೆಂದರೆ ಬರಿ ನುಡಿಯಲ್ಲ

ಹಿರಿದಿದೆ ಅದರರ್ಥ

ಜಲವೆಂದರೆ ಕೇವಲ ನೀರಲ್ಲ

ಅದು ಪಾವನ ತೀರ್ಥ

ಕನ್ನಡವೆಂದರೆ ಬರಿ ನಾಡಲ್ಲ

ಭೂಪಟ, ಗೆರೆ, ಚುಕ್ಕೆ

ಮರವೆಂದರೆ ಬರಿ ಕಟ್ಟಿಗೆಯೇ?

ಶ್ರೀಗಂಧದ ಚಕ್ಕೆ.

ಕನ್ನಡ ಬರಿ ಕರ್ನಾಟಕವಲ್ಲ

ಅಸೀಮ, ಅದು ಅದಿಗಂತ

ದೇವರು ಕೇವಲ ವಿಗ್ರಹವಲ್ಲ

ಅಂತರ್ಭಾವ ಅನಂತ.

ಕನ್ನಡವೆಂದರೆ ಜನಜಂಗುಳಿಯಲ್ಲ

ಜೀವನಶೈಲಿ, ವಿಧಾನ,

ವಾಯುವೆಂದರೆ ಬರಿ ಹವೆಯೇ ಅಲ್ಲ

ಉಸಿರದು ಪಂಚಪ್ರಾಣ"

**ದೇಶಪ್ರೇಮ**

"ನಮ್ಮ ನಾಡಗಡಿಗಳಲ್ಲಿ

ಪರ್ವತಗಳ ಮುಡಿಗಳಲ್ಲಿ

ಪ್ರಾಣವ ಪಣವಿಟ್ಟು ಸೆಣಸು
ತಿರುವ ಸಿಡಿಲ ಮರಿಗಳೆ,
ಚಳಿ ಮಳೆಗಳ ಕೇಡಿನಲ್ಲಿ
ಮಂಜಿನ ಬೆಳ್ಗಾಡಿನಲ್ಲಿ
ಎದೆಗುಂದದ ಉತ್ಸಾಹದ
ತುಂಬುನೆರೆಯ ಝರಿಗಳೆ
ಭಾರತಾಂಬೆ ಸಿರಿ ಮಕುಟದ
ಹಿರಿ ಹೆಮ್ಮೆಯ ಗರಿಗಳೆ
ಸಿಡಿಮದ್ದಿಗೆ ಒಡಲೊಡ್ಡುತ
ಹಗೆ ನೆಲೆಗಳ ಕೆಡೆದೊಡೆಯುತ
ಅರಿಪಡೆಗಳ ಸದೆಬಡಿಯುತ
ಮುಂದಿಡುವಿರಿ ಅಡಿಗಳ

**ನಿಸರ್ಗ**

"ಸಗ್ಗದ ಸಿರಿಬಂತೊ ನಮ್ಮೂರಿಗೆ
ಸುಗ್ಗಿಯ ಸೊಬಗಿಂದ ನಮ್ಮೂರಿಗೆ
ಎತ್ತೆತ್ತೆತ್ತಲು ತೆನೆ ಚೆಲ್ಲಿ ಹಾಲ
ಚಿಲಿಪಿಲಿ ಹರಿಸಿತು ಹಕ್ಕಿಯ ಮೇಳ
ಕಣಕಣದಲ್ಲಿ ಬಂಗಾರ ಜಾಲ
ಬೆರಗಾಗಿ ನಿಂತಿತೋ ಚಲಿಸದೆ ಕಾಲ
ಅರಿಸಿನ ಕುಂಕುಮ ಮೈಗೆಲ್ಲ ಮೆತ್ತಿ
ಹಸುರುಟ್ಟ ನೆಲದವ್ವ ಮದುವಣಗಿತ್ತಿ

ತೊಟ್ಟಿರೆ ಜರತಾರಿ ಮರಗಳನ್ನೆತ್ತಿ
ದಿಬ್ಬಣ ಹೊರಟವೊ ಪಾತರಗಿತ್ತಿ"

**ಪ್ರೀತಿ–ಪ್ರೇಮ**

"ನಿನ್ನ ಹಾಲುಗೆನ್ನೆ ತುಂಬ ಕೆನೆಗಟ್ಟಿದ ಮುನಿಸು ಪ್ರೀತಿ;
ನಿನ್ನ ಕಣ್ಣಿನಾಳದಂಚ ಮೀನ ಮಿಂಚ ಹೊರಳು ಪ್ರೀತಿ;
ದೇಹವಪ್ಪಿದಾಗ ತುಟಿಯ ಅದುರು ವೇಗದುಸಿರು ಪ್ರೀತಿ;
ಅಧರಕಧರ ಸೋಕಿದಾಗ ಬಳೆಯ ಸಣ್ಣ ಉಲಿತ ಪ್ರೀತಿ;
ಗದ್ದೆನೆಲ್ಲ ಮೆದ್ದನವಿಲು ಉದುರಿಸಿರುವ ಗರಿಯು ಪ್ರೀತಿ;
ಕೆರೆಯ ತೆರೆಯ ಪುಟ್ಟಬೆರಳ ಕೆಂಪು ಹರಳು ಕಮಲ ಪ್ರೀತಿ.
ಹಕ್ಕಿಗೊರಳಿಂಪಿನಿಂದ ಸಂಜೆಕೋದ ಮಾಲೆ ಪ್ರೀತಿ;
ಆಣೆ ಭಾಷೆ ಜಲವನೆರೆದು ಹಬ್ಬಿಸಿರುವ ಹಂಬು ಪ್ರೀತಿ.
ಹುಟ್ಟು ಸಾವಿನಿಸವಿ ನಡುವೆ ಪುಟ್ಟ ಕಪ್ಪು ಗೀಟು ಪ್ರೀತಿ;
ನೆಲಕ್ಕೆ ಬಿದ್ದ ಮಳೆಯ ಹನಿಯ ಚಣದ ಹೂವಿನರಳು
ಪ್ರೀತಿ;..........................................................
ಬಾಳ ಬೆರಳಿನುಂಗುರಕ್ಕೆ ಪಚ್ಚೆಹರಳ ಮಿರುಗು ಪ್ರೀತಿ;
ಮಡದಿ ಮುತ್ತನಿತ್ತ ಮತ್ತು ತಾಯ ಕೈಯ ತುತ್ತು ಪ್ರೀತಿ;
ಯಾರೋ ಉಡುವ ವಸ್ತ್ರಕ್ಕಾಗಿ ರೇಷ್ಮೆ ಹುಳದ ತ್ಯಾಗ ಪ್ರೀತಿ;
ಸ್ವಂತ ಅನ್ಯ ಎಣಿಸದೇಕ ನೀತಿ ಹಕ್ಕಿ ಕಾವು ಪ್ರೀತಿ"

**ನಗರಚಿತ್ರಣ**

"ಪ್ರಕೃತಿ ನಂಟನು ತೊರೆಯುತ, ಕಾಂಕ್ರೀಟ್
ಜಂಗಲುಗಳ ಬಿಲ ಹೊಕ್ಕವರು;
ಡೀಸೆಲ್, ಪೆಟ್ರೋಲ್ ಹೊಗೆ ಹವೆ ಸೇವಿಸಿ
ತಂಗಳು ಜಲವನೆ ಮುಕ್ಕುವರು;
ಲಾಲ್‌ಬಾಗ್, ಕಬ್ಬನ್ ಪಾರ್ಕಿಗೆ ಹೋದರೂ
ಮರಗಿಡ ನೋಡದೆ ಬರುವವರು.
ಕುದುರೆಯ ಮದಿರೆಯ, ಚದುರೆಯ ಮೋಜಿನ
ಸರಬರಾಯಿಯ ಶಾಸ್ತ್ರಿಗಳು;
ಸಾವಿರ ಅವ್ಯವಹಾರದ ರೀತಿಗೆ
ಚಾದರವೆಳೆಯುವ ರಾತ್ರಿಗಳು;
ಕರವಸ್ತ್ರದ ಬಲಕೋಟೆಯೆ ಇದ್ದರು
ಮೂಗನು ಮುತ್ತುವ ಮೂತ್ರಿಗಳು
ನಗರವಾಸಿಗಳು
ನಿತ್ಯ ನರಕವಾಸಿಗಳು"

**ಸೈಟುಗಳು**

ಕೆಲವು ಸೈಟು
ಮದುವೆ ಲೇಟಾದ ಕನ್ಯೆಯರೆ ಥೇಟು
ವಾರಿಗೆಯ ಪ್ರಿಯಂವದೆಯರೆಲ್ಲ ಸಂಸಾರವೊಂದಿಗರಾಗಿ
ಉಪ್ಪರಿಗೆ ಮೇಲುಪ್ಪರಿಗೆಯ ಕರುಳ ತೆನೆಗಳ ತೂಗಿ
ಬೀಗಿದ್ದರೂ, ಇವು ಮಾತ್ರ ಸೊರಗಿ
ಪ್ರಾಧಿಕಾರದ ಮಲತಾಯ

ತಹಬಂದಿಯಲ್ಲಿ ಬಂಧಿಗಳಾಗಿ,
ದಫ್ತರಿನ ಅಂಕಿ ಅಂಶದ ಇಂಕಿನ ಚಕ್ಕು ಬಂದಿಗಳಾಗಿ,
ಅಲಾಟಾಗದುಳಿದ ನೆಲದಾಕರದ ನೋಟುಗಳು
ಸದ್ಯಕ್ಕೆ ಈ ತೆರೆಮರೆಯ ಮಹಿವಾಟುಗಳು
ಕುಲಗೆಟ್ಟ ಓಟುಗಳು;
ಮುಂದೊಮ್ಮೆ ಹಿಗ್ಗಬಹುದು,
ವಧುದಕ್ಷಿಣೆಯ ಮೇರೆ
ಆ ಮಾತು ಬೇರೆ!"

**ವಿಡಂಬನೆ**

"ಕುರಿಗಳು ಸಾರ್ ಕುರಿಗಳು;
ಸಾಗಿದ್ದೇ
ಗುರಿಗಳು
ಮಂದೆಯಲ್ಲಿ ಒಂದಾಗಿ, ಸ್ವಂತತೆಯೇ ಬಂದಾಗಿ
ಇದರ ಬಾಲ ಅದು, ಮತ್ತೆ ಅದರ ಬಾಲ ಇದು ಮೂಸಿ,
ದನಿ ಕುಗ್ಗಿಸಿ, ತಲೆ ತಗ್ಗಿಸಿ
ಹುಡುಕಿ ಹುಲ್ಲುಕಡ್ಡಿಮೇವು, ಅಂಡಲೆಯುವ ನಾವು, ನೀವು,
ಕುರಿಗಳು ಸಾರ್ ಕುರಿಗಳು
ನಮಗೊ ನೂರು ಗುರಿಗಳು
ಎಡದಿಕ್ಕಿಗೆ, ಬಲದಿಕ್ಕಿಗೆ, ಒಮ್ಮೆ ದಿಕ್ಕುಪಾಲಾಗಿ,
ಒಮ್ಮೆ ಅದೂ ಕಳೆದುಕೊಂಡು ತಾಟಸ್ಥ್ಯದಿ ದಿಕ್ಕೆಟ್ಟು
ಹೇಗೆ ಹೇಗೋ ಏಗುತ್ತಿರುವ,
ಬರೀ ಕಿರುಚಿ ರೇಗುತ್ತಿರುವ,

ನೊಣ ಕೂತರೆ ಬಾಗುತ್ತಿರುವ,

ಹಿಂದೆ ಬಂದರೊದೆಯದ, ಮುಂದೆ ಬರಲು ಹಾಯದ

ಅವರು ಇವರು, ನಾವುಗಳು

ಕುರಿಗಳು ಸಾರ್ ಕುರಿಗಳು"

**ಸಂಸ್ಕೃತಿ ಮತ್ತು ಸಂಪ್ರದಾಯ**

ಅಮ್ಮ ಕಟ್ಟಾ ಸಂಪ್ರದಾಯಸ್ಥೆ;
ಖುರಾನು ನಮಾಜು ರಂಜಾನಿನ ಉಪವಾಸ
ಧಾರ್ಮಿಕಾಚರಣೆಗಳಲ್ಲಿ ಹೇಳತೀರದ ಆಸ್ಥೆ
ಬುರ್ಖಾ ತೊಡದೆ ಬೀದಿಯಲ್ಲಿ ಹಾದು ಹೋಗುವ ನಮ್ಮವರ
ಹೆಣ್ಣುಗಳ ಕಂಡು ಕಿಡಿಕಿಡಿಯಾಗಿ
ಹೆಚ್ಚು ಕಲಿತ ಬಜಾರಿಗಳ ಹಣೆಬರಹವೇ ಇಷ್ಟು
ದೇವರು ಧರ್ಮಗಳ ಭಯವಿರದೆ ಎಳ್ಳಷ್ಟು
ಗಂಡಸರೆದುದು ಮೈ ಪ್ರದರ್ಶಿಸುವ ಗಂಡು
ಬೀರಿಗಳು ಗಂಡಂದಿರ ಜೊತೆ ಬಾಳಿಯಾರೆ?.

.....................................................................................

ಅಪ್ಪ ಉದಾರಿ–
ಮಗ ತಾನೇ ಆರಿಸಿಕೊಳ್ಳಲಿ ಭವಿಷ್ಯದ ದಾರಿ
ಹೆತ್ತವರು ನಾವೇಕೆ ಆಗುವುದು ತಡೆ
ಆ ಯೋಚನೆಯ ಬಿಟ್ಟು ಬಿಡೆ
ಎಂದು ಎಚ್ಚರಿಸಿದಾಗ
ಅಮ್ಮ, ಅನ್ನ ನೀರು ಬಿಟ್ಟು ಗಳಗಳನೆ ಅತ್ತು
ಉರಲು ಬಾವಿ ಬೆಂಕಿಗಳ ಉಚ್ಚರಿಸಿದಾಗ
ತೆಪ್ಪಗಾದೆ.
ಅಪ್ಪ ಲೋಕ ಕಂಡವರು– ಹಾಗೆ ಅಮ್ಮನ

ಕೋಪ ಹಟ ಕಂಡವರು.
ವಿಪರೀತಕ್ಕೆ ಬಂತು ತಗಾದೆ
ಎನಿಸಿ, ಮುಂದೇನೂ ತೋಚದೆ "ನಿನ್ನಿಷ್ಟ"ವೆಂದರು;
ರಾತ್ರಿಯಲ್ಲಿ ಕೋಣೆಯ ದೀಪವುರಿಸಿ ಸಿಗರೇಟು ಹಚ್ಚಿ
ಶತಪಥಿಸಿ ಒಳಗೊಳಗೇ ನೊಂದರು.

..................................................................................

"ಮೊದಲ ಸಲ ತಿರುಗಾಡಲು ಹೊರಟಾಗ
ನನ್ನಾಕೆ ತೋಳಿಲ್ಲದ ರವಿಕೆಯುಟ್ಟು
ಭಾರೀ ಸೀರೆಯನ್ನು ಸೊಂಟದ ಕೆಳಗೆ ನಾಜೂಕಾಗಿ ಕಟ್ಟಿ
ಕಾಲಿಗೆ ಹೈಹೀಲ್ಡು ಕೆರ
ಕೊರಳಿಗೆ ಚಿನ್ನದ ಸರ
ಕಿವಿಗೆ ಬೆರಳಿಗೆ ಉಂಗುರ ತೊಟ್ಟ
ಲಿಪ್‌ಸ್ಟಿಕ್ಕು ಪೌಡರು ರೋಜು ಬಳೆದು ದೃಷ್ಟಿಬೊಟ್ಟಿಟ್ಟು
ಹೆರಳ ಗೋಪುರದಲ್ಲಿ ಕೂದಲ ಬಿಗಿದು
ಎಡ ಬೈತಲೆ ತೆಗೆದು
ಇವೆಲ್ಲವನ್ನೂ ಮೀರಿಸುವ ಮುಗುಳ್ನಗೆ ತೀಡಿ
ಹೊಸಿಲ ಇನ್ನೇನು ದಾಟಬೇಕು–ಆಗ
"ಬಂದೆ ತಡಿಯಿರಿ" ಎಂದಾಗ
ತಲೆಸುತ್ತಿ ನಾಲಗೆ ಬತ್ತಿ ನಾನಾದೆ ಮೂಕ;
ನೋಡಿದರೆ
ಉಟ್ಟಿದ್ದಳು ನಮ್ಮಮ್ಮನ ಬುರ್ಖಾ"

**ಮಾಟಗಾತಿಯ ಮಾತುಕತೆ**

"ಆಮೇಲೆ ಅವನು ಏನಂತಾನೆ ಅಂತೀಯ.....ಏನು ಬೇಕು?ಆ ಸೀರೇನೆ?
ಯಾವ ಬಣ್ಣ? ಮೆರೂನ್ ಇಲ್ಲವಲ್ಲ, ಇರೋದು ಒಂದೇ ಒಂದು ನೀಲೀನೆ...
ಮರ್ಲಿನ್ ಮನ್ರೋ ಹಾಗಿದೀಯ ಅಂದ ಕಣೇ... ಇದಕ್ಕಿಂತ ತಿಳೀ
ಬಣ್ಣಾನೂ ಇದೆ ತೋರಿಸಲೇ? .. ಹುಂ, ಸುಶೀ! ಹಾಗಂದ... ಕೊಟ್ಟೆ
ತಾಳಿ..
ಏನು ಮೇಡಂ?ಚೀಟಿ ಬಟ್ಟೇನೆ? ಕೊಟ್ಟೆ... ಮೊನ್ನೆ ಪ್ಲಾಜಾಕ್ಕೆ ಮ್ಯಾಟ್ನಿ
ಷೋಗೆ ಹೋಗಿದ್ವಿ... ಚೌಕುಳಿ ಕೊಡಲೆ?ಬೇಡ? ಸಾದಾನೆ ಕೊಡ್ತೀನಿ...
ಹೇಳ್ತಿನಲ್ಲೆ ಚಿನ್ನ, ಚಿನ್ನದಂಥ... ಇನ್ನೂ ನಯವಾದದ್ದು ಬೇಕೆ? ಇಲ್ಲವಲ್ಲ...
ಬೇಸಿಗೇಲಿ ಐಸ್‌ಕ್ರೀಮ್ ಇದ್ದಹಾಗೆ ಕಣೆ ಅವನು ... ಬಣ್ಣ ಷೇಡ್ ಆಗೊಲ್ಲ"

ಕನ್ನಡ ನಾಡಿನಲ್ಲಿಯೇ ಕನ್ನಡದ ಸ್ಥಿತಿಯನ್ನು ಪರಿಚಯಿಸುವ 'ಕನ್ನಡ ಕುವರಿ' ಎಂಬ ಕವನ ವಿಶಿಷ್ಟ ಶೈಲಿಯಿಂದ ಕೂಡಿ ಆಕರ್ಷಿಸುತ್ತದೆ.

**'ಕನ್ನಡ ಕುವರಿ'**

"ಫ್ರೀ ಇಂಡಿಯಾ ಕಾನ್ವೆಂಟ್ ಎದುರು
ಮಾಟವಾದ ಮಗು ಕುಳ್ತಿತ್ತು.
ಯಾಕೋ ಏನೋ ಪಾಪ, ಒಂದೇ ಸಮ ಅಳ್ತಿತ್ತು.
'ಯಾಕಳ್ತಿ ಮರಿ?
ಏನ್ ನಿನಗಂಥ ವರಿ?'
ಮೃದುವಾಗಿ ವಿಚಾರಿಸ್ದೆ.
ಮಗು ಅಳ್ತಾನೇ ಇತ್ತು

ಮಾತಾಡೋ ಆಸಕ್ತಿ ತೋರಿಸ್ದೆ

'ಅಪ್ಪ ಇಲ್ಲ ನಿಂಗೆ?'

'ಉಹುಂ'

ಹೋಗ್ಲಿ ಅಮ್ಮ?

'ಉಹುಂ'

'ಅಯ್ಯೋ ಪಾಪ!ಮತ್ಯಾರಿದಾರೆ ಪೋರಿ?

ನುಡಿ ಮುತ್ತು ಉದುರಿಸಿದಳು

ಕನ್ನಡದ ಕುವರಿ

ಸಂಕೋಚಾನ ದೂರ ದೂಡಿ

'ಮಮ್ಮಿ ಅಂಡ್ ಡ್ಯಾಡಿ!'

**ಕವಿತೆಯ ಆಯಾಮಗಳು**

**ಮಾತೃಭಾಷೆ**

ನಿಸಾರ್ ಅಹಮದ್ ಅವರ ಕವನಗಳಲ್ಲಿ ಅಲ್ಲಲ್ಲಿ ಮಾತೃಭಾಷೆಯ ಅನೇಕ ಪದಗಳು ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗಿ ಅವರ ಕವನಗಳಿಗೆ ಹೆಚ್ಚಿನ ಮೆರುಗನ್ನು ಅರ್ಥವಂತಿಕೆಯನ್ನು ತಂದುಕೊಟ್ಟಿವೆ. ಆ ಶಬ್ದಗಳು ತಮ್ಮದೇ ಆದ ಆಕರ್ಷಣೆಯ ಛಾಪನ್ನು ಕವನಗಳಲ್ಲಿ ಮೂಡಿಸಿವೆ. ನಿಸಾರರ ಕಾವ್ಯ ಪರಿಣಾಮಕಾರಿಯಾಗಿ ಕಾಣುವಲ್ಲಿ ಅನ್ಯಭಾಷೆಯ ಪದಗಳೂ ಸಹ ಅಷ್ಟೇ ಕಾರಣವಾಗಿ ಕಂಡುಬರುತ್ತದೆ. ಅವರ ಕವನಗಳಲ್ಲಿ ಸಾಕಷ್ಟು ಮಾತೃಭಾಷೆಯ ಪದಗಳನ್ನು ಬಳಸಿರುವುದನ್ನು ಕಾಣಬಹುದು. ಹಮಾರಾ ಕುತ್ತಾ ಹಮಾರೆ ಗಲೀ ಮೆ ಷೇರ್, ಏಕ್ ದಿನಕಾ ಸುಲ್ತಾನಾ, ಏಕ್ ದೇಹ ಏಕ ಪತ್ನಿ, ತೂಫಾನ್‌ಸೆ ಮುಖಾಬಿಲೆ, ಬಿಲ್‌ಕುಲ್, ಅಂದಾಜು, ಖುದ್ದು, ದೌಲತ್, ಏಕದಂ, ಬೇನಾಮಿ, ಬಿರಿಯಾನಿ, ತಂದೂರಿ, ಖುಲಾಸೆ, ಛೇಲ, ಫಿರ್ಯಾದಿ, ಮೆಹರುಬಾನಿ, ಜಮಾಬಂದಿ, ಖೈರತ್ತಿನಲ್ಲಿ ಕರಾಮತ್ತು, ಚಕ್‌ಬಾರ್, ಮೊಹಲ್ಲ, ಜಾದು, ಬೇಹುಷಾರಿ, ಜಾನುವಾರು, ಖಬರಸ್ಥಾನ, ಗೋರಿ, ಬೇವರ್ಸಿ, ಗರ್ಮಿ,

ಆಬಾದು–ಬರ್ಬಾದು, ಕಸಾಯಿಖಾನೆ, ಖಾಲಿ, ಚೂರಿ, ಮಾಸೂಮು, ಸಫಾಯಿ, ದಫ್ತರ, ಜವಾಬು, ತೇಜ್, ದೋಸ್ತಿ, ನಿಕಾ, ಫೈಸಲಾ, ಮರ್ಜಿ, ಖುರಾನು, ನಮಾಜು, ಥಂಡಿ, ಚಹರೆ, ಮುಕ್ಕಾಂ, ಬಯಾನು, ತಾಖತ್ತು, ಬೇನಸೀಬು, ಮೆಹನತ್, ಲಾಚಾರ, ದಖಲ್, ಚಾಕರಿ, ಖಾಯಂ, ತಾಜ, ಖಮೀಜ್, ದಫನ್, ಇನ್ನೂ ಮುಂತಾದ ಪದಗಳು ನಿಸಾರರ ಕಾವ್ಯದಲ್ಲಿ ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗಿವೆ.

**ವಿಜ್ಞಾನದ ಪದಗಳ ಬಳಕೆ**

ಅದಿರು, ಶಿಲೆ, ಖನಿಜ, ಯುರೇನಿಯಂ, ಲ್ಯಾಬೋರೇಟರಿ, ಕ್ಷಕಿರಣ, ಆಯಸ್ಕಾಂತ, ಬಾಂಬ್, ಹೆಲಿಕಾಪ್ಟರ್, ಜೆಟ್, ಕ್ಯಾಕ್ಟಸ್, ಲಾವಾ, ಗ್ರಾಮಫೋನು, ಭೂಕಂಪ, ಗ್ರನೇಡು, ವೈರಸ್ ಮುಂತಾದ ತಮ್ಮ ವಿಜ್ಞಾನದ ವಿಷಯಗಳನ್ನು ಕಾವ್ಯದಲ್ಲಿ ಹಿಡಿದಿಟ್ಟಿದ್ದಾರೆ.

## ನಿಸಾರ ಅಹಮದ್ ಅವರ ವಿಮರ್ಶೆ

ನಿಸಾರ್ ಅಹಮದ್‌ರವರು ಕನ್ನಡ ಸಾಹಿತ್ಯದಲ್ಲಿ ವೈವಿಧ್ಯಮಯ ರೀತಿಯಲ್ಲಿ ಕೃಷಿ ಮಾಡಿದವರು. ಅವರು ಕನ್ನಡ ಸಾಹಿತ್ಯದಲ್ಲಿ ಕಾವ್ಯ, ವಿಮರ್ಶೆ, ವೈಚಾರಿಕ ಸಾಹಿತ್ಯ, ಅನುವಾದ, ಮಕ್ಕಳ ಸಾಹಿತ್ಯ, ಸಂಪಾದನೆ ಹೀಗೆ ಇನ್ನೂ ಅನೇಕ ಪ್ರಕಾರಗಳಲ್ಲಿ ತಮ್ಮ ಕೊಡುಗೆಯನ್ನು ಸಲ್ಲಿಸಿದ್ದಾರೆ.ಅವರು ಕಾವ್ಯದಲ್ಲಿನಷ್ಟೇ ಗದ್ಯ ಸಾಹಿತ್ಯದಲ್ಲೂ ಅಷ್ಟೇ ಸಮರ್ಥವಾಗಿ ಕೃಷಿಮಾಡಿರುವವರು. ಅವರ ಗದ್ಯ ಸಾಹಿತ್ಯದ ವಿಸ್ತಾರವೂ ಸಹ ಸುಮಾರು ಸಾವಿರ ಪುಟಗಳಷ್ಟು ಅಮೂಲ್ಯವಾದಂತಹ ಗದ್ಯಬರಹಗಳು ಕನ್ನಡ ಸಾಹಿತ್ಯದ ಗಣಿಗೆ ಅವರು ನೀಡಿದ ಅನರ್ಘ್ಯ ನಿಧಿಗಳು.ಗದ್ಯ ಸಾಹಿತ್ಯದಲ್ಲಿಯೂ ಅವರು ಪಡೆದ ಪ್ರಭುತ್ವ, ಪ್ರಾವೀಣ್ಯತೆಯು ಆಶ್ಚರ್ಯ ಚಕಿತಗೊಳಿಸುವಂತಹದ್ದು. ಅವರು ಕವಿಗಳಾದಂತೆ ಸೂಕ್ಷ್ಮ ದೃಷ್ಟಿಯ ವಿಮರ್ಶಕರಾಗಿಯೂ ಕಂಡುಬಂದ ಬಗೆ ವಿಶಿಷ್ಟವಾದುದು.

ವಿಮರ್ಶಾ ಪ್ರಕ್ರಿಯೆ ಇಂದಿನ ಯುಗದಲ್ಲಿ ಅತ್ಯಂತ ಮಹತ್ವವನ್ನು ಪಡೆದಿದೆ. ಈ ಕ್ರಿಯೆ ಅತ್ಯಂತ ಜವಾಬ್ದಾರಿಯುತ, ನಿಷ್ಪಕ್ಷಪಾತವಾದ ಸೂಕ್ಷ್ಮತೆಯ ದೃಷ್ಟಿಯಿಂದ ಕೂಡಿದ್ದಾಗಿದೆ. ವಿಮರ್ಶೆಯೆಂಬುದು ಸುಲಭದ ಕೆಲಸವಲ್ಲ. ಇವರ 'ಇದು ಬರಿ ಬೆಡಗಲ್ಲೋ ಅಣ್ಣ' ಎಂಬುದು ಮಹತ್ವದ ವಿಮರ್ಶಾ ಕೃತಿಯಾಗಿದೆ. ವಿಮರ್ಶೆ ಎಂಬುದು ಅತ್ಯಂತ ಗುರುತರವಾದಂತಹ ಕಾರ್ಯ ಇಂತಹ ಜವಾಬ್ದಾರಿಯುತ, ಪ್ರಯಾಸದ ಕೆಲಸವನ್ನು ನಿಸಾರ್ ಅಹಮದ್‌ರವರು ಸಮರ್ಥ ರೀತಿಯಲ್ಲಿ ನಿರ್ವಹಿಸಿರುವುದನ್ನ ಕಾಣಬಹುದು.ಅವರ ವಿಮರ್ಶಾ ಕೃತಿಯ ಅಧ್ಯಯನದಿಂದ ಅವರ ಪಾಂಡಿತ್ಯವನ್ನು ಅರಿಯಬಹುದು. ಸಮರ್ಥವಾಗಿ ಕಾವ್ಯ ಕಟ್ಟಿದ ರೀತಿಯಲ್ಲೇ ಗದ್ಯ ಸಾಹಿತ್ಯದಲ್ಲೂ ಪಳಗಿದ ಅವರ ಲೇಖನಿ ಓದುಗರನ್ನು ಬೆರಗುಗೊಳಿಸುವಂತೆ ಸಾಹಿತ್ಯ ಸೃಷ್ಟಿಯಾಗಿದೆ. ಅವರ ವಿಮರ್ಶಾ ಶೈಲಿ ತುಂಬಾ ಸತ್ವಯುತವಾಗಿ ಮೂಡಿಬಂದದ್ದು ಕಂಡುಬರುತ್ತದೆ.

### ಇದು ಬರಿ ಬೆಡಗಲ್ಲೋ ಅಣ್ಣ

ನಿಸಾರ್ ಅಹಮದ್‌ರವರು ಕಾವ್ಯಕಟ್ಟುವ ಕಲೆಯಲ್ಲಿ ಎಷ್ಟು ಪ್ರವೀಣರೋ ಹಾಗೆಯೇ ಗದ್ಯ ಪ್ರಕಾರದಲ್ಲಿಯೂ ಸಹ ಅಷ್ಟೇ ಪ್ರಬುದ್ಧರಾಗಿ ಕಾಣುತ್ತಾರೆ. ಇದಕ್ಕೆ ಅವರ ವಿಮರ್ಶಾ ಕೃತಿ 'ಇದು ಬರಿ ಬೆಡಗಲ್ಲೋ ಅಣ್ಣ' ಎಂಬ ಕೃತಿಯೇ ಉತ್ತಮ ಉದಾಹರಣೆಯಾಗಿದೆ. ಈ ಕೃತಿ ಕರ್ನಾಟಕ ಸಾಹಿತ್ಯ

ಅಕಾಡೆಮಿಯಿಂದ ಅತ್ಯುತ್ತಮ ವಿಮರ್ಶಾ ಕೃತಿಯೆಂಬ ಪ್ರಶಸ್ತಿ ಪಡೆದಿದೆ. ವಿಮರ್ಶಾ ಕ್ಷೇತ್ರದಲ್ಲಿ ಈ ಕೃತಿ ತುಂಬಾ ವಿಶಿಷ್ಟವಾಗಿ ತೋರುತ್ತದೆ. ಈ ಕೃತಿಯಲ್ಲಿ ಅವರು ನಾಲ್ಕು ಭಾಗಗಳಾಗಿ ವಿಂಗಡಿಸಿ ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ.ಅವರು ಮಾಡಿರುವ ವಿಭಾಗ ಕ್ರಮವು ಈರೀತಿಯಾಗಿದೆ. 1.ಸ್ವಕೀಯ 2.ಮಂಥನ 3.ಅವಲೋಕನ 4.ವಿವೇಚನ ಎಂಬ ಪ್ರಕಾರಗಳಲ್ಲಿ ವಿಭಾಗಿಸಿ ಮೇಲಿನ ಕ್ರಮದಂತೆ ತಮ್ಮ ಕಾವ್ಯದ ಬಗೆಗಿನ ಸ್ವಯಂ ಚಿಂತನೆ, ಬೇರೆ ಬೇರೆ ಕವಿಗಳ ಕಾವ್ಯದ ವಿಮರ್ಶೆ, ಪ್ರಮುಖ ಕವಿಗಳ ಕವನ ಸಂಗ್ರಹಗಳ ಮೇಲೆ ಬೆಳಕು ಚೆಲ್ಲುತ್ತಾರೆ.ಅದರೊಂದಿಗೆ ಅಪೂರ್ವ ಕವಿಗಳ ವ್ಯಕ್ತಿತ್ವ ಅವರ ಬರಹದ ಕುರಿತಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ರೀತಿ ವಿಭಿನ್ನವಾಗಿದೆ.

ವಿಮರ್ಶಾ ಪ್ರಕ್ರಿಯೆ ಅತ್ಯಂತ ತರ್ಕಬದ್ಧ ಹಾಗೂ ಅತ್ಯಂತ ಜಾಗರೂಕ ಪ್ರಜ್ಞೆಯಿಂದ ಜರುಗುವ ಪ್ರಾಮಾಣಿಕ ಕ್ರಿಯೆಯಾದ್ದರಿಂದ ವಿಮರ್ಶಕನು ಅತ್ಯಂತ ಸೂಕ್ಷ್ಮ ದೃಷ್ಟಿಯ, ತೀಕ್ಷ್ಣ ಬುದ್ಧಿಯ, ನಿಷ್ಪಕ್ಷಪಾತ ವ್ಯಕ್ತಿತ್ವದ ನೇರ ಮನೋಭಾವ ಹೊಂದಿರಬೇಕಾದದ್ದು ಅವಶ್ಯಕ. ಒಬ್ಬ ವ್ಯಕ್ತಿ ಅಥವಾ ಆ ವ್ಯಕ್ತಿಯ ಬರಹದ ಕುರಿತಾಗಿ ತನ್ನ ಅಭಿಪ್ರಾಯಗಳನ್ನು ಹೊರಹಾಕುವಾಗ ಅತ್ಯಂತ ಜವಾಬ್ದಾರಿಯುತವಾಗಿ ತನ್ನ ಪ್ರತಿಭಾವಂತಿಕೆಯನ್ನು ಬಳಸಿ ತೂಕಬದ್ಧ ನಿರ್ಣಯವನ್ನು ನೀಡಬೇಕಾಗುತ್ತದೆ. ಆಳವಾದ ಅಧ್ಯಯನ, ಅನುಭವದ ಆಧಾರದಿಂದ ನಿಸಾರ್ ಅಹಮದ್‌ರವರು ಕೃತಿಗಳ ಕುರಿತು ತಮ್ಮ ತರ್ಕಬದ್ಧ ವಿಚಾರಗಳನ್ನು ಪ್ರಾಮಾಣಿಕವಾಗಿ ವ್ಯಕ್ತಪಡಿಸಿದ್ದು ಕಂಡುಬರುತ್ತದೆ.

ನಿಸಾರರು ವಿಮರ್ಶೆಯಲ್ಲಿ ತಮ್ಮದೇ ಆದಂತಹ ಸ್ವಯಂ ಚಿಂತನೆಯ ಸ್ವತಂತ್ರ ವಿಚಾರಗಳಿಂದ ಕೂಡಿದ ಪ್ರತ್ಯೇಕ ವಿಚಾರಗಳನ್ನು ಒಂದೆಡೆ ಸೇರಿಸಿ ಅವುಗಳಲ್ಲಿ ಪ್ರಮುಖವಾಗಿ 'ಕನ್ನಡ ಕಾವ್ಯದ ಭವಿಷ್ಯ', 'ಕವಿಯಾಗಿ ನನ್ನ ಅನುಭವ', 'ನಾನು ಮತ್ತು ನನ್ನ ಕಾವ್ಯ', 'ಕಾವ್ಯದ ಬಗೆಗೆ ಕೆಲವು ತಾತ್ವಿಕ ಚಿಂತನೆಗಳು' ಹೀಗೆ ಅಮೂಲ್ಯವಾದಂತಹ ವಿಚಾರಗಳಿಂದ ತಮ್ಮ ಸ್ವಂತಿಕೆಯನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯಗಳಿಗೆ 'ಸ್ವಕೀಯ'ವೆಂಬ ಪಟ್ಟಿಯಲ್ಲಿ ಸೇರಿಸಿ ಗಹನವಾದ ಅನುಭವದ ಆಧಾರದಿಂದ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಕೇವಲ ಅವರ ಸ್ವಂತ ವಿಚಾರಗಳಷ್ಟೇ ವ್ಯಕ್ತಪಡಿಸಿದ್ದಾರೆ. ಬೇರೆ ಕೃತಿಗಳ, ಕವಿಗಳ ಕುರಿತಾಗಿ ಮುಂದಿನ ಭಾಗದಲ್ಲಿ ವಿವೇಚಿಸುತ್ತಾ ಚರ್ಚೆ ಸಾಗುತ್ತದೆ.

## ಕನ್ನಡ ಕಾವ್ಯದ ಭವಿಷ್ಯ

ನಿಸಾರರು ಇಂದಿನ ಕಾವ್ಯದ ಭವಿಷ್ಯದ ಬಗೆಗೆ ಚಿಂತಿಸುತ್ತಾ ಕಾವ್ಯದ ಮಹತ್ವ, ಕ್ರಮಿಸಬೇಕಾದ ಮಾರ್ಗ ಎದುರಾಗುವ ಸವಾಲುಗಳು, ಒತ್ತಡಗಳು, ಕವಿಯ ಜವಾಬ್ದಾರಿ ಹಾಗೂ ಆಯ್ಕೆಯ ಬಗೆಗೆ ಚಿಂತನೆ ನೆಡಸುತ್ತಾರೆ. ಇಂದಿನ ಕವಿಗಳ ಮುಂದೆ ಎರಡು ಆಯ್ಕೆಯನ್ನು ಮುಂದಿಡುತ್ತಾರೆ. "ಒಂದನೆಯದು: ಸಾಮಾಜಿಕ ಸಮಸ್ಯೆಗಳಿಂದ ತನ್ನನ್ನು ಪ್ರಖರಗೊಳಿಸಿಕೊಂಡು ಪದ್ಯ ರಚನೆಯಲ್ಲಿ ತೊಡಗಿ, ಅದರ ಮುಖೇನ ಅರಿವು ಎಚ್ಚರಗಳನ್ನು ಜನಕ್ಕೆ ಹಂಚುವುದು. ಎರಡನೆಯದು: ಸಾಮಾಜಿಕ ಸಮಸ್ಯೆಗಳನ್ನು ಒಳಗೊಂಡಂತೆ ಇನ್ನಿತರ ಜೀವನದ ಕಲ್ಯಾಣಕಾರಿ ಕಾಳಜಿಗಳನ್ನು ಪ್ರೀತಿಸುತ್ತಾ ತನ್ನಷ್ಟಕ್ಕೆ ತಾನೇ ಕಾವ್ಯ ರಚನೆ ಮಾಡುತ್ತಾ ಹೋಗುವುದು. ಈ ಎರಡು ತೆರನ ಆಯ್ಕೆಯ ಹಿಂದೆ ನಮ್ಮ ಕವಿಗಳಿಗೆ ಇರಲಿಲ್ಲವೆನ್ನುವ ಅರ್ಥ ನನ್ನದಲ್ಲ. ಆದರೆ ಇವೊತ್ತು ಅದಕ್ಕೆ ಹೆಚ್ಚಿನ ತುರ್ತು ಲಭಿಸಿದೆ. ವಾಸ್ತವತೆಯ ಮಾರ್ಪಾಡಿನಿಂದಾಗಿ ನಮ್ಮ ಸಂವೇದನೆಯೂ ಬದಲಾಗಿರುವುದೇ ಕವಿಯೊಬ್ಬನ ಸ್ಪಷ್ಟ ಆಯ್ಕೆಯ ಅನಿವಾರ್ಯತೆಗೆ ಕಾರಣ. ತನ್ನ ಈ ತನಕದ ಸಾಧನೆ ಸಿದ್ಧಿಗಳನ್ನು ಹಾಲಿ ಪರಿಸ್ಥಿತಿಯಲ್ಲಿ ಜಾಲಾಡಿಸಿ ನೋಡಿ ನಿಖರವಾದ ನೆಲೆಯಲ್ಲಿ ಕವಿ ನಿಲ್ಲಬೇಕಾಗಿದೆ.."(ನಿಸಾರ್ 2002, 3) ಹೀಗೆ ಇಂದಿನ ಸಂದರ್ಭದಲ್ಲಿ ಕವಿಯ ಮುಂದಿನ ಆಯ್ಕೆಗಳು ಹಾಗೂ ಅವನ ಕಾವ್ಯ ಜನಕ್ಕೆ ಸ್ಪಂದಿಸುವ ರೀತಿಯನ್ನು, ಅಗತ್ಯತೆಯನ್ನು ವಿವರಿಸುತ್ತಾರೆ. ಸಾಮಾಜಿಕ ಸಮಸ್ಯೆಗಳನ್ನು ಮನಗಾಣುತ್ತಾ ತನ್ನ ಬರವಣಿಗೆಯ ಮುಖಾಂತರ ಜನರಿಗೆ ಸ್ಪಂದಿಸುವುದು, ಜನರಿಗೆ ಹಂಚುವಂತಹದು ಒಂದು ಆಯ್ಕೆಯಾದರೆ ಇನ್ನೊಂದು ಸಾಮಾಜಿಕ ಸಮಸ್ಯೆಗಳಿಂದೊಡಗೂಡಿದ ಜೀವನದ ಒಳಿತಿನ ಬಗೆಗೆ ಕಾಳಜಿಯನ್ನು ಪ್ರೀತಿಸುತ್ತಾ ಕಾವ್ಯ ರಚನೆಯಲ್ಲಿ ಮುಂದುವರೆಯುವದು. ಇವು ಹಿಂದಿನ ಕವಿಗಳ ಕಾಲದಲ್ಲಿಯೂ ಇದ್ದವು ಆದರೆ ಇಂದು ಈ ಎರಡೂ ಆಯ್ಕೆಯ ಬಗೆಗೆ ವಿಚಾರಿಸುವ ಅಗತ್ಯವನ್ನಿಲ್ಲಿ ನಿಸಾರರು ಒತ್ತಿ ಹೇಳಿದ್ದಾರೆ. ಇವರ ಆಯ್ಕೆಗಳು ನವ್ಯದ ಸಂದರ್ಭದಲ್ಲಿ ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತವೆ.

ಗೋಪಾಲಕೃಷ್ಣ ಅಡಿಗರ ಸಂದರ್ಭದಲ್ಲಿ ಹಲವಾರು ಜನರು ಕಾವ್ಯ ರಚನೆಯಲ್ಲಿ ತೊಡಗಿದ್ದರೂ ಸಹ ವಿಮರ್ಶಕರಿಗೆ ಕೇವಲ ಅಡಿಗರ ಮೇಲೆಯೇ ಹೆಚ್ಚು ಮಹತ್ವ ಕೊಟ್ಟದ್ದು ಇಲ್ಲಿ ನೆನಪಿಸುತ್ತಾರೆ. ಅಡಿಗರನ್ನು ಬಿಟ್ಟು ಬೇರೆ ಕವಿಗಳ ಕಾವ್ಯವನ್ನು ವಿಮರ್ಶಕರು ಗುರುತಿಸದೇ ಕೆಲವೊಮ್ಮೆ ತೂಕ ತಪ್ಪಿಸಿದ್ದಾರೆ.

ಜನರಿಂದ ಕಾವ್ಯವನ್ನು ದೂರವಿಡಲು ಈ ಅಡಿಗರಾರಾಧಕರು ಕಾರಣರಾದದ್ದು ಹಾಗೂ ತಮ್ಮ ಕಾವ್ಯದ ಬಗ್ಗೆ ಅಡಿಗರು ದೊಡ್ಡಸ್ತಿಕೆಯ, ಹೊಗಳಿಕೆಯ ಮಾತನಾಡದೆ ಸೌಜನ್ಯದ ಪ್ರತೀಕರಾಗಿದ್ದರೆಂಬುದನಿಲ್ಲಿ ನಿಸಾರರು ಆ ಸಂದರ್ಭವನ್ನು ವಿವರಿಸುತ್ತಾರೆ. ಅಡಿಗರ ಕಾವ್ಯದ ಬಗ್ಗೆ ವಿಮರ್ಶೆ ಮಾಡಲು ತೊಡಗಿದ ಕೆಲವರು ಅಡಿಗರನ್ನು ತಪ್ಪಾಗಿ ಅರ್ಥೈಸಿಕೊಂಡರೂ ಸಹ ನಾವು ಸೀರಿಯಸ್ಸಾಗಿ ಬರೆಯುತ್ತೇವೆಂಬ ಭ್ರಮೆಯಲ್ಲಿ ಅಡಿಗರನ್ನು ಅನುಕರಿಸದಿದ್ದರೆ ಎಲ್ಲಿ ಕುಕವಿಗಳೆನಿಸಿಬಿಡುತ್ತೇವೆಯೋ ಎಂದು ನವ್ಯಕಾವ್ಯವನ್ನು ಅರ್ಥಮಾಡಿಕೊಳ್ಳದೆ ಅಧ್ವಾನ ಮಾಡಿದರು, ಅರಗಿಸಿಕೊಳ್ಳುವಲ್ಲಿ ಅಸಮರ್ಥರಾದರು ಎಂಬುದಾಗಿ ಅರುಹುತ್ತಾರೆ. ವಿಮರ್ಶಕರಿಗೆ ಆಯಾ ಸಂದರ್ಭದ ಅರಿವಿರಬೇಕಾದದ್ದು ಅವಶ್ಯಕ. ಒಬ್ಬ ಕವಿಯೊಂದಿಗೆ ಇನ್ನೊಬ್ಬ ಕವಿಯನ್ನು ಹೋಲಿಸಿ ಬರೆಯುವಾಗ ಕೆಲವು ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾದ ಅನಿವಾರ್ಯತೆಯನ್ನು ಇಲ್ಲಿ ನಿಸಾರರು ಮನಗಾಣುತ್ತಾರೆ.

ವಿಮರ್ಶಕರ ಜವಾಬ್ದಾರಿಯನ್ನು ತಿಳಿಸುತ್ತಾ "ಬೇಂದ್ರೆ, ಕುವೆಂಪು, ಪು.ತಿ.ನ., ಗೋಕಾಕ ಇನ್ನಿತರ ನವೋದಯ ಕವಿಗಳ ಕಾವ್ಯದ ಪ್ರಸ್ತಾಪ ಬಂದಾಗ ಈ ವಿಮರ್ಶಕರು, ಅವರು ಬರೆದ ಕಾಲ ಸನ್ನಿವೇಶಗಳನ್ನೇ ಗಣನೆಗೆ ತೆಗೆದುಕೊಳ್ಳದೆ ಅವರನ್ನು ಅಡಿಗರೊಂದಿಗೆ ಹೋಲಿಸಿ, ನವೋದಯ ಕಾವ್ಯ ಕೇವಲ ಆದರ್ಶದ, ಸೋಗಿನ ಕಾವ್ಯವೆಂದು ಲೇಬಲ್ ಹಚ್ಚಿ ಆ ಕವಿಗಳನ್ನು ಗಂಭೀರವಾಗಿ ಅಭ್ಯಾಸ ಮಾಡುವ ಅವಕಾಶವನ್ನು ನವ್ಯ ಮರಿಕವಿಗಳಿಂದ ತಪ್ಪಿಸಿದರು. ಜೊತೆಗೆ ಶತಮಾನಗಳು ಕಳೆದಿದ್ದರೂ ಪಂಪ, ರನ್ನ, ಕುಮಾರವ್ಯಾಸ ನಮಗೆ ಸಮಕಾಲೀನರಾಗಿರಲು ಕಾರಣಗಳನ್ನು ಅನ್ವೇಷಿಸಿ ತನ್ಮೂಲಕ ನಮ್ಮ ಕಿರಿಯ ಕವಿಗಳಲ್ಲಿ ಪರಂಪರೆಯ ಪ್ರಜ್ಞೆಯನ್ನು ಜ್ವಲಂತಗೊಳಿಸಿ ಅವರಲ್ಲಿ ಹೆಚ್ಚಿನ ಶ್ರೀಮಂತಿಕೆ, ಮುಕ್ತ ಸಂವಹನತೆಗಳು ಮೈಗೂಡುವಂತೆ ನವ್ಯ ವಿಮರ್ಶಕರು ಪ್ರಯತ್ನಿಸಿದ್ದಲ್ಲಿ ನಮ್ಮ ನವ್ಯ ಕಾವ್ಯಕ್ಕೆ ನವ ಆಯಾಮ ಮೂಡಬಹುದಾಗಿತ್ತು." (ನಿಸಾರ್–2002–5). ಹೀಗೆ ಜಾಗರೂಕತೆಯಿಂದ ವರ್ತಿಸಬೇಕಾದ ವಿಮರ್ಶಕನು ಕಾಲ ಸಂದರ್ಭಗಳನ್ನು ಗ್ರಹಿಸದೇ ಇದ್ದಾಗ ಆಗುವಂತಹ ಪರಿಣಾಮಗಳು, ಅಭಾಸಗಳು ಅಪಾರ. ವಿಮರ್ಶಕ ದಾರಿ ತೋರುವ ಮಾರ್ಗದರ್ಶಕನಾಗಿ ಕರ್ತವ್ಯ ನಿರ್ವಹಿಸಬೇಕೇ ವಿನಹ ದಾರಿ ತಪ್ಪಿಸಬಾರದೆನ್ನುವ ಕಾಳಜಿಯು ಈ ಸಂದರ್ಭದಲ್ಲಿ ವ್ಯಕ್ತವಾಗುತ್ತದೆ.

ಹೊಸದಾಗಿ ಕಾವ್ಯಕ್ಷೇತ್ರಕ್ಕೆ ಕಾಲಿಡುವಂತಹ ಕವಿಯ ಮನೋಭಾವ, ಅವನ ಮುಗ್ಧತೆ, ಆಕಾಂಕ್ಷೆ, ತೊಳಲಾಟವನ್ನು ನಿಸಾರರು ಮನಗಾಣುತ್ತಾರೆ. ಆರಂಭದಲ್ಲಿ ಆ ಕವಿ ಬಂಡಾಯಗಾರನಂತೆ, ಪರಕೀಯನಂತೆ ತೋರುವ ರೀತಿ ವಿವರಿಸುತ್ತಾ ಜನರ ನೋವು ನಲಿವನ್ನಾಗಲಿ, ಸುತ್ತಲಿನ ಚೆಲುವನ್ನಾಗಲಿ ಅವರಿಗೆ ಗೋಚರಿಸದು. ಕುವೆಂಪು, ಬೇಂದ್ರೆಯವರನ್ನು ಇತರರನ್ನು ಬಿಟ್ಟು ವಿದೇಶೀ ಕವಿಗಳಾದ ಸಾರ್ತ್ರ, ಕಮು, ಕಾಫ್ಕಾ, ಎಲಿಯಟ್ಟರು ಅವನ ಮೇಲೆ ಬೀರಿದ ಪರಿಣಾಮದ ಬಗ್ಗೆ ಬರೆಯುವಾಗ ತಾನು ಅಪಹಾಸ್ಯಕ್ಕೊಳಗಾಗುತ್ತೇನೆಂಬ ಪ್ರಜ್ಞೆಯೂ ಸಹ ಅವರಿಗಿರುವದಿಲ್ಲವೆಂಬುದನ್ನು ಇಲ್ಲಿ ಅರುಹುತ್ತಾರೆ. ಕವಿಗಳಲ್ಲಿ ಎರಡು ಪ್ರಕಾರಗಳಾಗಿ ವಿಂಗಡಿಸುತ್ತಾರೆ. ಅವರೆಂದರೆ ಬದ್ಧಕವಿಗಳು ಹಾಗೂ ಅನಿರ್ಬದ್ಧ ಕವಿಗಳು ಇವರಿಬ್ಬರ ನಿಲುವಿನಲ್ಲಿ ಅವರ ಕಾವ್ಯ ರಚನೆಯಲ್ಲಿ ಭಿನ್ನತೆಯನ್ನು ವಿವರಿಸುತ್ತಾರೆ. ಬದ್ಧಕವಿಯ ಬಗ್ಗೆ ಹೇಳುತ್ತಾ ಅವನ ರಚನಾ ಶೈಲಿ, ಸ್ವಭಾವವು ನವ್ಯ ಕಾವ್ಯದಂತೆ ಸಾಮಾಜಿಕ ಕಾಳಜಿಯ ವೈಪರೀತ್ಯದಿಂದಾಗಿ ಸಂಕುಚಿತನಾಗುವ ಸಂಭವವಿರುತ್ತದೆಯೂ ಹಾಗೆಯೇ ಅನಿರ್ಬದ್ಧ ಕವಿಯೂ ಸಹ ಕೆಲವೊಮ್ಮೆ ಎಚ್ಚರ ತಪ್ಪುವ ಮರವಿನ ಪರಿಣಾಮವಾಗಿ ಸ್ವಾರ್ಥಿಯಾಗಿ ಮಾರ್ಪಡುವ ಅಪಾಯವನ್ನು ಅವರು ಮನವರಿಕೆ ಮಾಡಿಕೊಡುತ್ತಾರೆ.

ಪ್ರೊ: ನಿಸಾರ ಅಹಮದ್‌ರವರು ಕನ್ನಡ ಕಾವ್ಯದ ಭವಿಷ್ಯದ ಬಗೆಗಿನ ತಮ್ಮ ಕೊನೆಯ ಮಾತುಗಳಲ್ಲಿ ಕವಿ, ಸಾಹಿತಿಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮೂಡುತ್ತಿರುವ ಬಗ್ಗೆ ಹೆಮ್ಮೆಪಡುತ್ತಾರೆ. ಕವಿಗೆ ಯಾರೇ ಆಗಲಿ ನಿರ್ಭಂಧ ಹಾಕಿ ನೀನು ಹೀಗೆಯೇ ಬರೆಯಬೇಕೆಂದು ನಿರ್ಭಂಧ ಹಾಕುವ ಅಧಿಕಾರವಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಾರೆ. ಅದರೊಂದಿಗೆ ಕವಿಗೆ ಇರಬೇಕಾದ ಜವಾಬ್ದಾರಿ, ಸ್ವಾಭಿಮಾನ, ಹೊಣೆಗಾರಿಕೆಯನ್ನು ಕಾಪಾಡಿಕೊಳ್ಳಲು ಅವರು ನೀಡುವ ಸಲಹೆ ಅಪೂರ್ವವಾದದ್ದು. ಕವಿಯು ಸರ್ವರಿಗೆ ಹಿತಕಾರಿಯಾಗಿರಬೇಕೆಂಬ ಸದಾಸೆಯನ್ನು ಇಲ್ಲಿ ಅವರು ವ್ಯಕ್ತಪಡಿಸುತ್ತಾರೆ.

**ಕವಿಯಾಗಿ ನನ್ನ ಅನುಭವ:**

ನಿಸಾರ ಅಹಮದ್‌ರವರು ಸ್ವ ಅನುಭವಗಳನ್ನು ಅಪೂರ್ವವಾಗಿ ಹಂಚಿಕೊಂಡಿರುವದು ಮನಸೂರೆಗೊಳ್ಳುತ್ತದೆ. ನಿಸಾರರು ಹೇಳುವಂತೆ ಕಾವ್ಯ ರಚನೆಯ ಕ್ರಿಯೆಯು ಅಂತರಂಗಕ್ಕೆ ಸಂಬಂಧಪಟ್ಟದ್ದಾಗಿರುವುದರಿಂದ ಕವಿ

ತಾನು ಕವನಗಳನ್ನು ರಚಿಸುವಾಗ ಅವನ ಮನಸ್ಥಿತಿ ಒಂದೇ ರೀತಿ ಇರುವದೆಂದು ಹೇಳಲು ಆಗುವುದಿಲ್ಲ. ಏಕೆಂದರೆ ಮನಸ್ಸು ತುಂಬಾ ಚಂಚಲವಾದ್ದರಿಂದ ಅದನ್ನು ನಿಯಂತ್ರಿಸುವದು ಅವನಿಂದ ಮೀರಿರುತ್ತದೆ. ಹೀಗಾಗಿ ಕವಿ ಕವನ ಕಟ್ಟುವಾಗ ಹರಿದು ಹಂಚಿ ಹೋಗಿರುವಂತಹ ಚಂಚಲ ಮನಸ್ಸನ್ನು ಕಟ್ಟಿಹಾಕಿ, ಕೇಂದ್ರೀಕರಿಸಲು ಪರದಾಡುವ ಸಂದರ್ಭ ಬರುತ್ತದೆ.ಆ ಪ್ರಯತ್ನದಲ್ಲಿ ಅವನು ಸಫಲನಾಗುವನೆಂಬ ಭರವಸೆ ಕಷ್ಟದಾಯಕವಾಗಿರುತ್ತದೆ. ಕಾವ್ಯ ಕಟ್ಟುವಾಗಿನ ಕ್ಲಿಷ್ಟತೆಯಾಗಲಿ, ಪದ್ಯ ಮೂಡಿಬಂದು ಬೆಳೆದ ಬಗೆಯನ್ನು ಆ ಕವನವನ್ನು ಬರೆದ ಕವಿ ಹೇಳಬಹುದೇ ಹೊರತು ಓದುಗನಿನಗೆ ಕಾವ್ಯ ಸೃಷ್ಟಿಯ ಜಟಿಲತೆ ಅರಿಯಲು ಸಾಧ್ಯವಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಕಾವ್ಯ ರಚನೆಯಲ್ಲಿ ಅದರ ಬೇರುಗಳು ಮನೋವಿಜ್ಞಾನದೊಂದಿಗೆ ಬೆರೆತುಕೊಂಡು ಅವನ ಅಂತರಂಗದ ಆಳಕ್ಕಿಳಿಯುವಷ್ಟು ನಿಗೂಢವಾಗಿ ಈ ಪ್ರಕ್ರಿಯೆ ಸಾಗುತ್ತದೆ.

ಕವಿಯು ತನ್ನ ಮನದಾಳದಲ್ಲಿ ಸಂಗ್ರಹವಾದಂತಹ ತುಡಿತಗಳನ್ನು ಹಾಗೂ ಹೊರ ಜಗತ್ತಿನ ಅನೇಕ ಅನುಭವಗಳನ್ನು ಮಾತಿನ ರೂಪದಲ್ಲಿ ಕಟ್ಟಿ ಜನರೊಂದಿಗೆ ಹಂಚಿಕೊಳ್ಳಲು ಹಾತೊರೆಯುತ್ತಾನೆ. ನಿಸಾರರು ಇಲ್ಲಿ ಕವನದ ಕುರಿತಾಗಿ ತುಂಬಾ ಅರ್ಥವತ್ತಾದ, ಅಪ್ರತಿಮವಾದ ಶೈಲಿಯಲ್ಲಿ ಹೇಳುತ್ತಾ ಅವರ ದೃಷ್ಟಿಯಲ್ಲಿ ಕವನವೆಂದರೆ "ಭಾವಕ್ಕೆ ಅನುರೂಪವಾದ ಶರೀರ ಪ್ರಾಪ್ತವಾಗುವುದು ಕವಿ ಬಾಹ್ಯ ಜಗತ್ತಿನಿಂದ ಆಯ್ಕೆ ಮಾಡಿಕೊಳ್ಳುವ ವಸ್ತು, ಸನ್ನಿವೇಶ, ಚಿತ್ರ ಇತ್ಯಾದಿಗಳಿಂದ. ಇವೇ ವಸ್ತು ಪ್ರತಿರೂಪಗಳು ಕವಿ ಸೃಷ್ಟಿ ಕರ್ಮದ ಜೀವಾಳವೆಂದರೆ ಸ್ಫುಟವಾದ ಮನೋ ಮುದ್ರೆಗಳಿಗೆ ತಕ್ಕನಾದ ವಸ್ತು ಪ್ರತಿರೂಪಗಳನ್ನು ಶಬ್ದಗಳಲ್ಲಿ ಸೃಷ್ಟಿಸುವಿಕೆ ಮತ್ತು ಅದರ ಫಲವಾಗಿ ಬುದ್ಧಿ, ಭಾವವೇದಿಯಾದ ಪದಶಿಲ್ಪವನ್ನು ನಿರ್ಮಿಸುವಿಕೆ. ಅಂಗೋಪಾಂಗ ಸಾಮರಸ್ಯವುಳ್ಳ ಈ ಶಿಲ್ಪವೇ ಕವನ." (ನಿಸಾರ್:2002–11) ಎನ್ನುತ್ತಾರೆ. ನಿಸಾರರು ಕಾವ್ಯವನ್ನು ಕಂಡು ಗ್ರಹಿಸಿಕೊಳ್ಳುವ ರೀತಿ ವಿಭಿನ್ನ ಹಾಗೂ ವಿಶಿಷ್ಟವಾದದ್ದು. ಕಾವ್ಯದ ರಚನೆಗೆ ಅವಶ್ಯಕ ಸಾಮಗ್ರಿ ಹಾಗೂ ಆ ಸಾಮಗ್ರಿಗಳಿಂದ ಸಿದ್ಧವಾಗುವ ಕಾವ್ಯ ಶಿಲ್ಪ ರಚನೆಯ ಕ್ರಮವನ್ನು ಮಾರ್ಮಿಕವಾಗಿ ತಿಳಿಸುವ ಅವರ ಶೈಲಿ ಅಪ್ರತಿಮವಾದುದು. ಕಾವ್ಯ ರಚನೆಯಲ್ಲಿ ಅಂತರಂಗದಲ್ಲಿ ಸಂಗ್ರಹವಾಗಿರುವ ಹಾಗೂ ಜೀವನದೊಂದಿಗೆ ಬಂದಿರುವ ಅನೇಕ ನಂಬಿಕೆಗಳು, ನೋವು–ನಲಿವುಗಳು, ಸಮಕಾಲೀನತೆ

ಪ್ರಾಚೀನತೆಗಳು ಬಹುಮುಖ್ಯವಾದ ಆಕರಗಳಾಗಿ ಕಾವ್ಯಕ್ಕೆ ಮೆರಗನ್ನು ತರುವಲ್ಲಿ ಸಹಕಾರಿಯಾಗುತ್ತವೆ.

ಕಾವ್ಯ ಕಟ್ಟುವಾಗ ತಮಗಾದಂತಹ ಅನೇಕ ಅನುಭವಗಳನ್ನಿಲ್ಲಿ ನಿಸಾರರು ಮುಕ್ತವಾಗಿ ಹಂಚಿಕೊಂಡಿದ್ದಾರೆ. ಇದಕ್ಕೆ ಅವರು ರಚಿಸಿದ ಅನೇಕ ಕವನಗಳನ್ನು, ವಿನೂತನ ಸಂದರ್ಭವನ್ನು ಆ ಕ್ಷಣದ ಹೊಯ್ದಾಟವನ್ನು ನೆನಪಿಸಿಕೊಳ್ಳುವ ರೀತಿ ಅನನ್ಯವಾಗಿ ಮೂಡಿಬರುತ್ತದೆ. ಅವರೇ ಹೇಳುವಂತೆ "ಪದ್ಯರಚನೆಯ ಕೆಲವೊಂದು ಸಮಯದಲ್ಲಿ ನನ್ನ ಮನಸ್ಥಿತಿ ತೀವ್ರವಾದ ಚಡಪಡಿಕೆ, ಅಸ್ವಸ್ಥತೆಗಳಿಂದ ಕೂಡಿದೆ. ಪದ್ಯ ರಚನಾಪೂರ್ವದ ಮುಜುಗರ, ಸ್ವಾಪ್ನಿಕ ಗುಂಗು, ಪದ್ಯ ಮುಗಿಸಿದ ಅನಂತರದ ಆ ನಿರಾಳ, ಸ್ವಾಸ್ಥ್ಯಗಳು ನನ್ನ ನೆನಪಿನಲ್ಲಿ ಹಸಿರಾಗಿ ಉಳಿದಿದೆ. 'ಕುರಿಗಳು ಸಾರ್ ಕುರಿಗಳು', 'ರಾಮನ್ ಸತ್ತ ಸುದ್ದಿ', 'ನಿಮ್ಮೊಡನಿದ್ದು ನಿಮ್ಮಂತಾಗದೆ', 'ಅನಾಥರು', ಪದ್ಯಗಳನ್ನು ಬರೆಯುವಾಗ ಮೈಮೇಲೆ ಬಂದವನ ಅವಸ್ಥೆ ನನ್ನದಾಗಿತ್ತು. ಚಿತ್ತೈಕಾಗ್ರತೆಯನ್ನು ಅತ್ಯಂತ ದೊಡ್ಡ ಪ್ರಮಾಣದಲ್ಲಿ ತಂದಿತ್ತ ಇಂಥ ಅತ್ಯುದ್ವಗ್ನ ಸ್ಥಿತಿಯಲ್ಲಿ ನಾನು ರಚಿಸಿದ ಈ ನಮೂನೆಯ ಕವನಗಳು ಕವಿಮೇಳಗಳಲ್ಲಿ ಓದಿದಾಗೆಲ್ಲ ಜನಕ್ಕೆ ತಟ್ಟಿವೆ; ಕಾಲದಲ್ಲಿ ಚಲಾವಣೆ ಪಡೆಯುತ್ತಾ ಸಾಗಿವೆ." (ನಿಸಾರ್–2002–11) ಕಾವ್ಯ ಕಟ್ಟುವಾಗಿನ ತಮ್ಮ ಮನದಾಳದಲ್ಲಿನ ಹೊಯ್ದಾಟವನ್ನು ತುಡಿತಗಳನ್ನು ಅನುಭವಗಳನ್ನು, ಮುಜುಗರಗಳನ್ನು ಬಹಳ ನಿರಾಳವಾಗಿ ವ್ಯಕ್ತಪಡಿಸುವ ಅವರ ಶೈಲಿ, ಮನೋಭಾವ ಮೆಚ್ಚುವಂತಹದ್ದು.ಅವರ ನೇರ ನುಡಿಯ ನಿರಾಡಂಬರ ವ್ಯಕ್ತಿತ್ವದ ಅಭಿವ್ಯಕ್ತಿಯೇ ಅವರ ಕಾವ್ಯ ಸದಾ ಜೀವಂತಿಕೆಯಿಂದ ನಳನಳಿಸುವಲ್ಲಿ ಬಹು ಮುಖ್ಯ ಪಾತ್ರವಹಿಸುತ್ತದೆ.

**ನಾನು ಮತ್ತು ನನ್ನ ಕಾವ್ಯ:**

ನಿಸಾರರು ತಮ್ಮ ಕಾವ್ಯ ಸಾಗಿದ ಪರಿಯನ್ನು, ಎದುರಾದ ಏರು ಇಳಿವುಗಳನ್ನು ಬಿಚ್ಚಿಡುವ ರೀತಿ ವಿಶಿಷ್ಟವಾಗಿ ಮೂಡಿಸಿದ್ದಾರೆ. "ಹುಮ್ಮಸ್ಸು, ವೇಗ ಅರ್ಭಟಗಳಿಂದ ಹೊರಟ ನನ್ನ ಕಾವ್ಯ ತನು ಕ್ರಮಿಸಿರುವ ದೂರವನ್ನು, ಅನಿರೀಕ್ಷಿತವಾದ ಏರು ತಗ್ಗುಗಳ ಎದುರು ಮೂಡಿಸಿಕೊಂಡ ಹುಷಾರಿ ಸಾವಧಾನಗಳನ್ನು, ತಂಗಿದ ಹಂಗಾಮಿ ನಿಲ್ದಾಣಗಳನ್ನು, ಪುನಶ್ಚೇತನಕ್ಕಾಗಿ ಅಲ್ಲೆಲ್ಲ ಮೈ ಹಿಡಿಸಿಕೊಂಡ ಹೊಸ ಹೊಸ ಸಂವೇದನೆಗಳ ಇಂಧನವನ್ನು: ಹಾಗೆಯೇ ಮುಂದೆ ಅದು ಯಾವ ದಿಕ್ಕಿಗೆ ಹೊರಳಿಕೊಳ್ಳಬಹುದೆಂಬ

ಅಂದಾಜುಗಳಿಗೆ 'ಸ್ವಯಂ ಸೇವೆಯ ಗಿಳಿಗಳು' ಸಂಕಲನ ಕೆಲವಾದರೂ ಸೂಚ್ಯ ತಪ್ಸೀಲುಗಳನ್ನು ಒದಗಿಸಬಹುದು ಎಂದುಕೊಂಡಿದ್ದೇನೆ". ಹೀಗೆ ನಿಸಾರರು ತಮ್ಮ ಕಾವ್ಯಯಾತ್ರೆಯಲ್ಲಿನ ಅನುಭವಗಳನ್ನು ವಿಷದಪಡಿಸುವ ರೀತಿ ಅನುಪಮವಾಗಿದೆ. ತಮ್ಮ ಬದುಕು ಹಾಗೂ ತಾವು ಸೃಷ್ಟಿಸಿದ ಕಾವ್ಯದ ಬಗೆಗಿನ ಆತ್ಮವಿಮರ್ಶೆಯ, ನೇರವಾದಂತಹ ಅಭಿವ್ಯಕ್ತಿ ಬಹಳ ಅಪರೂಪವಾದದ್ದು. ಅವರು ಯಾವುದೇ ಸಂಕೋಚವಿಲ್ಲದೆ ಹೊರಹಾಕುವ ಜೀವನಾನುಭವಗಳು ಕಾವ್ಯ ರಚನೆಯೊಂದಿಗೆ ಹೇಗೆ ಮೇಳೈಸಿಕೊಂಡು ಸಾಗಿಬಂದ ಬಗೆಯನ್ನು ಮಾರ್ಮಿಕವಾಗಿ ವಿಮರ್ಶಿಸುತ್ತಾರೆ. ಈ ಅನುಭವಗಳು ಅವರ ಕಾವ್ಯ ಜೀವನದ ಪ್ರಾಯದ ಸಂದರ್ಭದ ಅನಿಸಿಕೆಗಳಾಗಿ ತೋರುತ್ತದೆ. ಸದ್ಯದ ಭಾವನೆಗಳು ಅಂದಿನ ಅನುಭವಗಳೊಂದಿಗೆ ತಳುಕು ಹಾಕಿ ನೋಡಿದಾಗ ಈಗಿನ ಪ್ರೌಢತೆ ಹಾಗೂ ಅನುಭವದಲ್ಲಿನ ಮಾಗುವಿಕೆ ಗಮನಕ್ಕೆ ಬರುವದು ಒಂದು ಕಾಲದ ಅನಿಸಿಕೆಗಳು ಮತ್ತೊಂದು ಕಾಲಕ್ಕೆ ಬದಲಾಗಲೂಬಹುದು. ಏಕೆಂದರೆ ಬದಲಾವಣೆ ಪ್ರಕೃತಿಯ ನಿಯಮ, ನಿತ್ಯನೂತನತೆ ಜೀವಂತಿಕೆಯ ಲಕ್ಷಣವಾಗಿರುತ್ತದೆ.

**ಕಾವ್ಯದ ಬಗೆಗೆ ಕೆಲವು ತಾತ್ವಿಕ ಚಿಂತನೆಗಳು:**

ಭಾರತೀಯ ಹಾಗು ವಿದೇಶೀಯ ಕವಿಗಳನ್ನು ವಿವರವಾಗಿ ಅಧ್ಯಯನ ಮಾಡಿರುವ ನಿಸಾರರು ಕಾವ್ಯದ ಆಳ ಅಗಾಧತೆಯನ್ನು ಕಂಡವರು. ಕಾವ್ಯದೊಂದಿಗಿನ ಅವರ ಅವಿನಾಭಾವ ಸಂಬಂಧದ ಫಲವಾಗಿ ತಮ್ಮ ಮಾಗಿದ ಚಿಂತನೆಗಳನ್ನು ಹೊರಹಾಕಿದ್ದಾರೆ. ಆಸಕ್ತಿ ಹಾಗೂ ಆರಾಧನೆಯಿಂದ ಕಾವ್ಯದೇವಿಯನ್ನು ಒಲಿಸಿಕೊಂಡ ಇವರು ಕಾವ್ಯದ ಬಗೆಗಿನ ಅವರ ಹೆಮ್ಮೆ ಅಭಿಮಾನಗಳು ಮಾತಿಗೆ ಮೀರಿದವು. ಸುದೀರ್ಘವಾದ ಅಧ್ಯಯನ ಹಾಗೂ ಸಾಗರದಂತಹ ಅನುಭವಗಳಿಂದ ಅನೇಕ ಉಪಯುಕ್ತ ವಿಚಾರಗಳನ್ನು ಮಾಹಿತಿಗಳನ್ನು, ಧ್ಯೇಯ–ಧೋರಣೆಗಳನ್ನು ಮುಕ್ತವಾಗಿ ಚರ್ಚಿಸುತ್ತಾರೆ. 'ಈ ಕಾವ್ಯದ ಬಗೆಗೆ ಕೆಲವು ತಾತ್ವಿಕ ಚಿಂತನೆಗಳು' ಶೀರ್ಷಿಕೆಯಡಿಯಲ್ಲಿ ಅನುಭವಗಮ್ಯ ವಿಚಾರಗಳಿಂದ ಅಮೂಲ್ಯವಾದ ಆಲೋಚನೆಗಳನ್ನು ಮುಕ್ತಭಾವದಿಂದ ವ್ಯಕ್ತವಾಗಿವೆ. ಕವಿಯ, ಕಾವ್ಯದ, ಸಮಾಜದ ಅಸ್ತಿತ್ವದ ಮೇಲೆ ಬೆಳಕು ಚೆಲ್ಲುತ್ತಾ ಅವರ ವಿಮರ್ಶೆ ಸಾಗುವ ರೀತಿ ವಿಶಿಷ್ಟವಾದದ್ದು.

ಕಾವ್ಯ ಕ್ಷೇತ್ರದಲ್ಲಿ ನುರಿತ ನಿಸಾರರು ಕಾವ್ಯವನ್ನು ಕರತಲಾಮಲಕ ಮಾಡಿಕೊಂಡು ಅರಗಿಸಿಕೊಂಡವರು.ಈ ಕ್ಷೇತ್ರದಲ್ಲಿ ಅವರ ಅನುಭವ ಅಪಾರವಾದದ್ದು. ಕಾವ್ಯ ರಚನೆಯ ಬಗೆಗಿನ ಅವರ ಅರ್ಥವತ್ತಾದ ವಿಚಾರಗಳು ಮಹತ್ವದ್ದಾಗಿವೆ. ಅವರು ಕಾವ್ಯದ ಬಗೆಗೆ ಅದರ ಒಲಿಯುವಿಕೆಯ ಕುರಿತಾದ ಹೇಳಿಕೆ ಅಪೂರ್ವವಾಗಿ ಮೂಡಿಬಂದಿದೆ. "ಬದುಕು ಮನುಷ್ಯರಲ್ಲಿ ಅನೇಕರಿಗೆ ರಖಂವಾರು ಅನುಭವಗಳನ್ನು ನಿಚ್ಚಳವಾಗಿ ಹಂಚಿದರೂ, ತೀವ್ರಪಡುವ ಶಕ್ತಿಯನ್ನು ದಯಪಾಲಿಸಿದರೂ, ಅವರೆಲ್ಲ ಕಾವ್ಯ ರಚಿಸುವುದು ಸಾಧ್ಯವಾಗಿಲ್ಲವೆಂಬುದು ಸರ್ವವೇದ್ಯ.ಅದಕ್ಕೆ ವಿಶಿಷ್ಟ ತರಂಗಾಂತರ, ದ್ಯುತಿಗ್ರಾಹಿ ಸಾಮರ್ಥ್ಯ ಅವಶ್ಯ. ಈ ಗುಣಗಳು ಅಪರೂಪವಾದ್ದರಿಂದ ಅವನ್ನು ಹೊಂದಿದವರ ಜವಾಬ್ದಾರಿ, ಎಚ್ಚರ ಯಾವ ಮಟ್ಟದ್ದಿರಬೇಕು; ಸಮಾಜಕ್ಕೆ ಅವರ ಮಾದರಿ ಎಂಥದ್ದಿರಬೇಕು ಎನ್ನುವುದು ಮನನಯೋಗ್ಯ." (ನಿಸಾರ್:2002, 28) ಹೀಗೆ ಹಲವಾರು ವ್ಯಕ್ತಿಗಳಿಗೆ ಅನುಭವಗಳ ಸಂಗ್ರಹವಿದ್ದರೂ ಅವರೆಲ್ಲರೂ ಕವನ ರಚಿಸಲು ಅಸಾಧ್ಯ.ಏಕೆಂದರೆ ಕವಿಯಾದವನಿಗೆ ತನ್ನದೇ ಆದಂತಹ ಪ್ರತಿಭೆ ಸಾಮರ್ಥ್ಯ ಅವಶ್ಯವೆಂಬುದನ್ನು ಇಲ್ಲಿ ವ್ಯಕ್ತಪಡಿಸುವ ರೀತಿ ಅರ್ಥವತ್ತಾಗಿದೆ.

ಹೀಗೆ ಕಾವ್ಯದ ಬಗೆಗೆ ಆಳವಾದ ಅನುಭವ ಹೊಂದಿದಂತಹ ನಿಸಾರರು, ಕನ್ನಡ ಕಾವ್ಯದ ಭವಿಷ್ಯ, ಕವಿಯಾಗಿ ನನ್ನ ಅನುಭವ, ನಾನು ಮತ್ತು ನನ್ನ ಕಾವ್ಯ ಹಾಗೂ ಕಾವ್ಯದ ಬಗೆಗೆ ಕೆಲವು ತಾತ್ವಿಕ ಚಿಂತನೆಗಳ ಕುರಿತಾಗಿ ಮಾಡಿದ ವಿಮರ್ಶೆ ತುಂಬಾ ಸೂಕ್ಷ್ಮ ಶೈಲಿಯಿಂದ ಮೂಡಿಬಂದಿವೆ. ತಮ್ಮ ಸ್ವಂತ ವಿಚಾರಗಳೊಂದಿಗೆ ಕಾವ್ಯದ ಆಗುಹೋಗುಗಳನ್ನು ತೂಕಬದ್ಧ ವಿಚಾರಗಳೊಂದಿಗೆ ಅರ್ಥವತ್ತಾಗಿ ಚರ್ಚಿಸಿರುವ ನಿಸಾರರ ಪ್ರತಿಭೆ, ಅರ್ಥವಂತಿಕೆ ಹೊರಸೂಸುತ್ತದೆ. ಇಲ್ಲಿಯವರೆಗೆ ಚರ್ಚಿಸಿದ ವಿಷಯಗಳೆಲ್ಲವೂ ಅವರ 'ಸ್ವಕೀಯ' ಶೀರ್ಷಿಕೆಯಡಿಯಲ್ಲಿ ಒಂದುಗೂಡಿಸಿದ ಲೇಖನಗಳ ಸಂಗ್ರಹದಿಂದ ಸೂಕ್ತವಾಗಿ ವಿಂಗಡಿಸಿ ಓದುಗರಿಗೆ, ಸಾಹಿತ್ಯಾಸಕ್ತರಿಗೆ ಹೆಚ್ಚಿನ ಅನುಕೂಲ ಮಾಡಿಕೊಟ್ಟಿದ್ದಾರೆ. ಮುಂದಿನ ಹಂತದ 'ಮಂಥನ'ವೆಂಬ ಶೀರ್ಷಿಕೆಯಲ್ಲಿ ಕನ್ನಡದ ಖ್ಯಾತ ಕವಿಗಳಾದ ಕುವೆಂಪು, ಬೇಂದ್ರೆ, ಪಂಜೆ, ಜಿ.ಪಿ.ರಾಜರತ್ನಂರವರ ಕಾವ್ಯದ ಕುರಿತು ಬೆಳಕು ಚೆಲ್ಲುತ್ತಾರೆ.

**ಕುವೆಂಪು ಕಾವ್ಯದಲ್ಲಿ ವೈಚಾರಿಕತೆ:**

ರಸಋಷಿ ಕುವೆಂಪುರವರಂತಹ ವ್ಯಕ್ತಿತ್ವದ, ಕಾವ್ಯದ ಕುರಿತಾಗಿ ಪರಾಮರ್ಶೆಗೆ ತೊಡಗುವ ನಿಸಾರ್ ಅಹಮದ್‌ರವರು ತುಂಬಾ ಸೂಕ್ಷ್ಮವಾಗಿ ಕುವೆಂಪುರವರ ಕಾವ್ಯದ ಶಕ್ತಿಯನ್ನು ಓದುಗರಿಗೆ ಮುಟ್ಟಿಸಲು ಪಡುವ ಪ್ರಯತ್ನ ಮನೋಜ್ಞವಾಗಿದೆ. ಒಂದು ವಿಷಯದ ವಿವೇಚನೆಗೆ ಸಿದ್ಧವಾದಾಗ ಅವರು ಅಧ್ಯಯನದ ಸ್ವರೂಪವನ್ನು ಓದುಗರ ಮುಂದು ಕನ್ನಡಿಯಂತೆ ನಿಲ್ಲಿಸುತ್ತಾರೆ. ತಲಸ್ಪರ್ಷಿಯಾದ ಅಧ್ಯಯನದ ಪರಿಣಾಮದಿಂದಾಗಿ ನಿಸಾರರ ಗದ್ಯಸಾಹಿತ್ಯ ಓದುಗರನ್ನು ಆಯಸ್ಕಾಂತದಂತೆ ಸೆಳೆಯುವಲ್ಲಿ ಯಶಸ್ವಿಯಾಗುತ್ತದೆ. ಅವರ ಬರವಣಿಗೆಯಲ್ಲಿನ ತಂತ್ರಗಾರಿಕೆ, ನಿರೂಪಣಾ ಶೈಲಿ, ವಿಮರ್ಶಾ ಸ್ವರೂಪ ಓದುಗರನ್ನು ಚಿಂತನೆಗೆ ಹಚ್ಚುತ್ತದೆ. **'ಕುವೆಂಪು ಕಾವ್ಯದಲ್ಲಿ ವೈಚಾರಿಕತೆ'** ಎಂಬ ವಿಷಯದ ಕುರಿತಾಗಿ ಅರ್ಥಪೂರ್ಣವಾಗಿ ವಿಚಾರಗಳನ್ನು ವ್ಯಕ್ತಪಡಿಸುವಲ್ಲಿ ನಿಸಾರ್ ಅಹಮದ್‌ರವರು ಪ್ರತಿಭಾವಂತಕೆಯನ್ನು ಮೆರೆದಿದ್ದಾರೆ. ಆರಂಭದಲ್ಲಿ **'ವೈಚಾರಿಕತೆ'** ಎನ್ನುವ ಪದದ ಕುರಿತಾಗಿ ವಿವರಿಸುತ್ತಾ ಅದರ ಅವಶ್ಯಕತೆ ನವೋದಯ ಸಂದರ್ಭದಲ್ಲಿ ನಿಂತು ಅವಲೋಕಿಸಿದ್ದಾರೆ. ಒಬ್ಬ ಕವಿಯ ಕಾವ್ಯದ ಮೌಲ್ಯಮಾಪನ ಮಾಡುವಂತಹ ಸಂದರ್ಭದಲ್ಲಿ ಆ ಕಾವ್ಯದಲ್ಲಿ ಮೂಡಿಬಂದಿರುವ ವೈಚಾರಿಕ ಪ್ರಜ್ಞೆಯ ಕಡೆಗೂ ಗಮನ ಹರಿಸುವ ಅಗತ್ಯತೆಯನ್ನು ಅರುಹುತ್ತಾರೆ.

## ನಿಸಾರ್ ಅಹಮದ್‌ರವರ ವೈಚಾರಿಕ ಸಾಹಿತ್ಯ

1. ಸಾಹಿತ್ಯ ಸಂಬಂಧಿ ಬರಹಗಳು
2. ಸಾಮಾಜಿಕ, ರಾಜಕೀಯ, ಆಡಳಿತ, ಇತಿಹಾಸ ಸಂಗತಿಗಳ ವಿವೇಚನೆ
3. ತಾತ್ವಿಕ ಚಿಂತನೆ
4. ಧಾರ್ಮಿಕ, ಪೌರಾಣಿಕ ಸಂಬಂಧಿ ವಿಷಯಗಳ ಚಿಂತನೆ
5. ಪ್ರಕೃತಿ ಸಂಬಂಧಿ ಚಿಂತನೆ
6. ಪರಿಸರ ಸಂಬಂಧಿ ಚಿಂತನೆ
7. ವಿಜ್ಞಾನ ಸಂಬಂಧಿ ಚಿಂತನೆ
8. ಶಿಕ್ಷಣಕ್ಕೆ ಸಂಬಂಧಿಸಿದ ಚಿಂತನೆ
9. ಸ್ವಂತ ಜೀವನಕ್ಕೆ ಸಂಬಂಧಿಸಿದ ಚಿಂತನೆ
10. ಇತರೆ ಚಿಂತನೆ

ಕನ್ನಡ ಸಾಹಿತ್ಯದಲ್ಲಿ ವೈಶಿಷ್ಟ್ಯಪೂರ್ಣ ಹಾಗೂ ವೈವಿಧ್ಯಮಯವಾಗಿ ತಮ್ಮನ್ನು ದುಡಿಸಿಕೊಂಡವರು ನಿಸಾರರು. ಕ್ರಿಯಾತ್ಮಕ ವ್ಯಕ್ತಿತ್ವದ ನಿಸಾರರು ಕನ್ನಡಕ್ಕೆ ಅಪ್ರತಿಮ ಕೃತಿಗಳನ್ನು ಧಾರೆಯೆರೆದಿದ್ದಾರೆ. ಕಾವ್ಯ ಪ್ರಕಾರದಲ್ಲಿ ಅದ್ಭುತ ಪ್ರಾವೀಣ್ಯತೆ ಹೊಂದಿರುವಂತೆ ಗದ್ಯ ಬರಹದಲ್ಲೂ ಸಹ ಅಷ್ಟೇ ಶಕ್ತಿಶಾಲಿಯಾಗಿ ಬೆಳೆದ ಬರಹಗಾರರು ಇದಕ್ಕೆ ಅವರ ಗದ್ಯ ಕೃತಿಗಳಾದ 'ಇದು ಬರಿ ಬೆಡಗಲ್ಲೋ ಅಣ್ಣ', 'ಮನದೊಂದಿಗೆ ಮಾತುಕತೆ', 'ಹಿರಿಯರು ಹರಸಿದ ಹೆಚ್ಚಾರಿ', 'ಅಚ್ಚುಮೆಚ್ಚು' ಮುಂತಾದ ಕೃತಿಗಳೇ ಜೀವಂತ ಸಾಕ್ಷಿಯಾಗಿವೆ. ನಿಸಾರ ಅವರ ಅನುಭವದ ಆಳದಿಂದ ಧುಮ್ಮಿಕ್ಕಿ ಬಂದಂತಹ ವಿಚಾರ ಸಾಹಿತ್ಯಕ್ಕೆ ನಿಸಾರ್ ಅವರಿಗೆ ನಿಸಾರ್ ಅವರೇ ಸಾಟಿ ಎಂಬಂತೆ ಅವರ ವೈಚಾರಿಕ ಸಾಹಿತ್ಯ ಮೂಡಿಬಂದಿದೆ. ಅವರು ಜೀವನದಲ್ಲಿ ಕಂಡುಂಡ, ಅನುಭವಿಸಿದ, ಗ್ರಹಿಸಿದ, ಅನೇಕ ಆಕರಗಳ ಹೊನ್ನಿನ ಗಣಿಯಾಗಿ ಅವರ ವಿಚಾರ ಸಾಹಿತ್ಯ ಜ್ಞಾನದಾಹವನ್ನು ಹೆಚ್ಚಿಸುವ ಅಪ್ರತಿಮ ಸೆಲೆಯಾಗಿ ಪ್ರತಿಯೊಬ್ಬರನ್ನು ವಿಚಾರಕ್ಕೆ ಹಚ್ಚುತ್ತದೆ. ನಿಸಾರ್ ಅಹಮದ್‌ರವರ ಗದ್ಯ ಸಾಹಿತ್ಯ ಅರಗಿಸಿಕೊಳ್ಳುವದು ಸುಲಭದ ತುತ್ತಲ್ಲ. ಗದ್ಯ ಕೃತಿಗಳಲ್ಲಿಯ ವಿಷಯಗಳನ್ನಾಧರಿಸಿ ಅದು ವೈಚಾರಿಕ

ಕೃತಿಯೋ ಅಥವಾ ವಿಮರ್ಶಾ ಕೃತಿಯೋ ಎಂದು ವಿಂಗಡಿಸುವದು ತುಂಬಾ ಜಟಿಲವಾದ ಕೆಲಸ. ಗದ್ಯ ಕೃತಿಗಳಲ್ಲಿ ತಮ್ಮ ಅನುಭವಕ್ಕೆ ನಿಲುಕಿದ ಸಮಸ್ತ ವಿಷಯವನ್ನು ಕಲೆಹಾಕಿದ್ದಾರೆ. ಅವರು ಮಾಡಿರುವ ಭಾಷಣಗಳು, ವ್ಯಕ್ತಿಚಿತ್ರಣಗಳು, ಮಹಾನ್ ಕವಿಗಳ ಕಾವ್ಯದ ವಿಮರ್ಶೆ, ಅನುವಾದಗಳು, ವೈಚಾರಿಕ ಲೇಖನಗಳು, ತನ್ನ ಹಾಗೂ ಬೇರೆಯವರ ಕೃತಿಗಳ ಬಗೆಗಿನ ಅನಿಸಿಕೆಗಳು ಹೀಗೆ ಹಲವಾರು ವಿಷಯ ಸಂಗ್ರಹಗಳಿಂದ ಕೂಡಿದ ಅವರ ಗದ್ಯ ಸಾಹಿತ್ಯ ಓದುಗರ ಜ್ಞಾನದ ದಿಗಂತವನ್ನು ಹೆಚ್ಚಿಸುತ್ತದೆ.ಆದರೆ ಅಲ್ಲಿ ವಿಷಯಗಳನ್ನು ವಿವಿಧ ವಿಭಾಗಗಳಲ್ಲಿ ವಿಂಗಡಿಸುವುದು ಅವರ ಕಾವ್ಯದಷ್ಟು ಸರಳವಲ್ಲ.

## ಸಾಹಿತ್ಯ ಸಂಬಂಧಿ ಬರಹಗಳು

ನಿಸಾರ್ ಅಹಮದ್‌ರವರ ಸಾಹಿತ್ಯ ಸಂಬಂಧಿ ಬರಹಗಳಲ್ಲಿ 1.ವೈಯಕ್ತಿಕ ಚಿಂತನೆ 2.ಸಾಮಾನ್ಯ ಚಿಂತನೆ ಹಾಗೂ 3.ವ್ಯಕ್ತಿ ಕೃತಿ ಸಂಬಂಧಿ ಚಿಂತನೆ ಎಂದು ಮೂರು ವಿಧಗಳಲ್ಲಿ ವಿಂಗಡಿಸಲಾಗಿದೆ. ಬರಹಗಳಲ್ಲಿನ ವಸ್ತು ವಿಷಯಕ್ಕೆ ಸಂಬಂಧಪಟ್ಟಂತೆ ಈ ಮೇಲಿನ ಕ್ರಮದಂತೆ ವಿಂಗಡಿಸಿರುವುದು ಕಂಡುಬರುತ್ತದೆ. ಈಗ ಒಂದೊಂದಾಗಿ ಇವರ ಬರಹಗಳನ್ನು ವಿಮರ್ಶಾತ್ಮಕ ಹಾಗೂ ವಿಶ್ಲೇಷಣಾತ್ಮಕ ದೃಷ್ಟಿಕೋನದಿಂದ ಅವಲೋಕಿಸಿದಾಗ ನಿಸಾರರ ಭಾಷೆ, ಬರವಣಿಗೆಯ ಶೈಲಿಯಿಂದ ಓದಿಸಿಕೊಂಡು ಹೋಗುವ ಆಕರ್ಷಾತ್ಮಕ ಸೆಳೆತದಿಂದ ಮೂಡಿಬಂದಿರುವುದು ಕಂಡುಬರುತ್ತದೆ. ಭಾಷೆಯ ದೃಷ್ಟಿಯಿಂದ ಪ್ರೌಢ ಶೈಲಿಯ ವಿಶಿಷ್ಟ ಪದಬಂಧಗಳು ಒಮ್ಮೊಮ್ಮೆ ಜಟಿಲವೆನಿಸಿದರೂ ಸಹ ಅಲ್ಲಿ ನಿಸಾರರ ಉದ್ದೇಶವನ್ನು ಅರಿಯುವಲ್ಲಿ ಓದುಗನು ಸಫಲವಾಗುವಂತೆ ಅವರ ಬರವಣಿಗೆ ತುಂಬಾ ಸೊಗಸಾಗಿ ಮೂಡಿಬಂದಿದೆ. ತಮ್ಮದೇ ಆದಂತಹ ವಿವರಣಾತ್ಮಕವಾಗಿ ಸರಳವಾಗಿ ಸಾಗುವ ಗದ್ಯ ಬರಹ ತುಂಬಾ ವಿಶಿಷ್ಟ ಅನುಭವದಿಂದ ಓದುಗರನ್ನು ತನ್ನೆಡೆ ಸೆಳೆಯುವಲ್ಲಿ ಯಶಸ್ವಿಯಾಗುತ್ತದೆ.

## ವೈಯಕ್ತಿಕ ಚಿಂತನೆ:

ಇಲ್ಲಿ ತಮ್ಮ ವೈಯಕ್ತಿಕ ಬರಹಗಳ ಬಗ್ಗೆ ತಾವು ಗ್ರಹಿಸಿದಂತೆ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ನನ್ನ ಗದ್ಯದ ಒಲವು ಒಲುಮೆಗಳು' ಎಂಬ ಲೇಖನವನ್ನು ಅವಲೋಕಿಸಿದಾಗ ಅದು ಅತ್ಯಂತ ಅರ್ಥಗರ್ಭಿತವಾಗಿ ಮೂಡಿಬಂದಿರುವದು ಕಂಡುಬರುತ್ತದೆ. ತಮ್ಮ ಮನಸ್ಸಿನ ಅಭಿರುಚಿ, ಅಭಿಮತ,

ತವಕ, ಕನಸುಗಳನ್ನು ಈ ಲೇಖನದಲ್ಲಿ ಹಿಡಿದಿಟ್ಟಿರುವರು. ತಾವು ಬರೆಯುವಾಗಿನ ಭಾವತೀವ್ರತೆ, ಆಲೋಚನಾ ಪ್ರವಾಹ, ಅಂತರಂಗದ ತೀವ್ರತರ ಭಾವತರಂಗಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಸೃಜನಶೀಲ ಪ್ರಕ್ರಿಯೆಯಲ್ಲಿನ ಜಟಿಲತೆ, ಪ್ರಯಾಸಗಳನ್ನು ತಮ್ಮ ಬರವಣಿಗೆಯಲ್ಲಿ ತೋಡಿಕೊಂಡಿದ್ದಾರೆ. ತಮ್ಮ ಬರವಣಿಗೆಯಿಂದ ಅವರ ಹಿಂದಿನ ತಲೆಮಾರಿನ ಹಿರಿಯರ ಬರವಣಿಗೆ ಹಾಗೂ ಅವರ ಬರವಣಿಗೆಯಿಂದ ದೊರೆತ ಸ್ಫೂರ್ತಿಯನ್ನು ಸಹ ನಿಸಾರ್ ಅಹಮದ್‌ರವರು ಸ್ಮರಿಸುತ್ತಾ ತಮ್ಮ ಚಿಂತನೆಗೆ ಹೆಚ್ಚಿನ ಗಂಭೀರತೆಯನ್ನು ನೀಡುತ್ತಾರೆ. "ನಮ್ಮ ಹಿರಿಯ ತಲೆಮಾರಿನ ಗದ್ಯಕರ್ತರಲ್ಲಿ ಅಪ್ರತಿಮರೆನ್ನಿಸಿರುವ ಡಿ.ವಿ.ಜಿ., ಮಾಸ್ತಿ, ಎ.ಆರ್.ಕೃ., ವಿ.ಸೀ., ಎಸ್.ವಿ. ರಂಗಣ್ಣ., ಕುವೆಂಪು., ಪುತಿನ., ದೇ.ಜ.ಗೌ., ಅವರ ಬರಹಗಳಲ್ಲಿನ ಭಾವ–ವಿಚಾರಗಳ ಏರುಪೇರಿಲ್ಲದ ಏಕಾತ್ಮಕ ಸಮನ್ವಯ ನಮಗೆ ತೋರುಗಂಬವಾಗಬೇಕು. ಇವರ ಗದ್ಯದ ಸ್ವವಿಶೇಷತೆಯನ್ನು ಗುರುತಿಸುವ ಸಲುವಾಗಿ ಆಸ್ಥೆಯಿಂದ ದೀರ್ಘಾವಧಿಯ ತನಕ ಪ್ರಯತ್ನಿಸಿರುವ ನನಗೆ ಆಗಿರುವ ಉಪಕಾರ ಅಮಿತ.ಇದಲ್ಲದೆ ಭಾಷೆಯ ಬಿಗಿ, ಬನಿ, ಅಡಕತೆ, ಗಾಂಭೀರ್ಯ, ಲವಲವಿಕೆ, ಪ್ರಯೋಗಶೀಲತೆ, ಉಪಮೆ ರೂಪಕದೃಷ್ಟಾಂತಾದಿ ಅಲಂಕಾರಗಳ ಬಳಕೆಯಲ್ಲಿನ ಔಚಿತ್ಯ ಮತ್ತು ಹೃದಯಂಗಮತೆ, ವಾಕ್ಯಗಳ ಸೂತ್ರಪ್ರಾಯತೆ ಮೊದಲಾದ ಅಂಶಗಳನ್ನು ಕಲಿಯಲು ಸಹ ಈ ಗದ್ಯಕಾರರ ರಚನೆಗಳು ಸಹಕಾರಿಯಾಗಿವೆ." (ನಿಸಾರ್.2002:535) ಹೀಗೆ ಹಿರಿಯ ಬರಹಗಾರರು ತಮ್ಮ ಬರವಣಿಗೆಗೆ ಹೇಗೆ ಪ್ರೇರಣೆ, ಸ್ಫೂರ್ತಿಯಾದರು, ಅವರ ಸ್ಫೂರ್ತಿ ಹೇಗೆ ಬರವಣೆಗೆಗೆ ಸಹಾಯಕವಾಯಿತೆಂಬುದನ್ನು ಸ್ಮರಿಸುತ್ತಾರೆ.

**ಸಾಮಾನ್ಯ ಚಿಂತನೆ:**

ವಿಸ್ತಾರವಾದ ನಿಸಾರ್ ಅಹಮದ್‌ರವರ ಗದ್ಯ ಸಾಹಿತ್ಯ ಅಮೂಲ್ಯವಾದುದು. ಜೀವನಾನುಭವದಲ್ಲಿ ತಮ್ಮ ಅನುಭವಕ್ಕೆ ನಿಲುಕಿದ ಅನೇಕ ಅನುಭವಗಳನ್ನು, ಅಂತರಾಳದ ಆಕಾಂಕ್ಷೆಗಳನ್ನು ಅನೇಕ ಬರಹಗಳಲ್ಲಿ ಮೂಡಿಸಿದ್ದಾರೆ. ಅತ್ಯಂತ ನೇರ ಸರಳ ವಿಚಾರಗಳಿಂದ ನಿಸಾರ್‌ರ ಗದ್ಯ ಬರವಣಿಗೆಗಳು ಓದುಗರನ್ನು ಚಿಂತನೆಗೀಡುಮಾಡುವಂತಹ ಅದ್ಭುತವಾದಂತಹ ಸಾಮರ್ಥ್ಯವನ್ನು ಹೊಂದಿವೆ. ಜೀವನದ ಅನೇಕ ನೈಜ ಸಂಗತಿಗಳನ್ನು ಮುಲಾಜಿಲ್ಲದೆ ನಿಷ್ಪಕ್ಷಪಾತವಾಗಿ ಹೊರಹಾಕುವ ಅವರ ನಿಸ್ವಾರ್ಥ ಹಾಗೂ ದಿಟ್ಟತನ ಅವರ ಬರವಣಿಗೆಗಳಲ್ಲಿ ಕಾಣಬಹುದು. ಸಾಹಿತ್ಯಕ್ಕೆ ಸಂಬಂಧಿಸಿದ

ಅನೇಕ ವಿಚಾರಗಳನ್ನು ಅತ್ಯಂತ ಎಚ್ಚರಿಕೆಯಿಂದ ಸೂಕ್ಷ್ಮತೆಯಿಂದ ಹಲವಾರು ವಿಷಯಗಳನ್ನು ವಿಮರ್ಶಿಸುವ ಅವರ ಧಾಟಿ ತೀರಾ ವಿಶಿಷ್ಟವಾಗಿದೆ.ಒಂದು ಕಾಲದಲ್ಲಿ ರಚನೆಯಾದ ಕೃತಿಯ ಬಗೆಗೆ ಅದು ಒಳಗೊಳ್ಳುವ ವಿಷಯಗಳಿಂದ ಆ ಪರಿಸರಕ್ಕೆ ಹೇಗೆ ಹೊಂದಾಣಿಕೆ ಮಾಡಿಕೊಂಡಿರುತ್ತದೆ.ಎಂಬುದನ್ನು ಅರ್ಥಪೂರ್ಣವಾಗಿ ವಿವರಿಸುತ್ತಾರೆ. "ಸಾಹಿತ್ಯ ಕೃತಿ ತಾನು ರೂಪುಗೊಂಡ ಕಾಲ ಮತ್ತು ಪರಿಸರಗಳ ವಿದ್ಯಮಾನಗಳಿಗೆ ವಿಧೇಯವಾಗಿರಬೇಕಾದದ್ದು ಅದರ ಸಹ ಧರ್ಮ. ಆಲ ಕೆಲ ಚದರಡಿಯಷ್ಟು ಜಾಗದ ನೆಲದಲ್ಲಿ ತನ್ನ ಕಾಂಡವನ್ನು ಬೇರೂರಿ ಇಡೀ ಆ ಪ್ರದೇಶದಿಂದ ಮೇಲಕ್ಕೇರಿ ಬೆಳೆಯುತ್ತ ಸುತ್ತೆಲ್ಲ ದಿಕ್ಕುಗಳಿಗೆ ಪಸರಿಸಿಕೊಳ್ಳುವುದಲ್ಲದೆ, ಬೇರು ಕಾಂಡಗಳಿಂದ ದೂರದ ನೆಲೆಯಲ್ಲಿ ಬಿಳಲುಗಳನ್ನು ಹಬ್ಬಿಸುತ್ತದಷ್ಟೇ ಇದೇ ರೀತಿ ಸಾಹಿತ್ಯ ಕೃತಿಯೂ ಸಹ ಸ್ವಕಾಲದ ಪರಿಮಿತಾವಧಿಯಲ್ಲಿ ಮೆಳೆತಿದ್ದರೂ, ಆ ಕಾಲದ ಆವರಣದ ಆಗು–ಹೋಗು ಘಟನೆಗಳ ಪ್ರತಿಫಲಿತವೆನ್ನಿಸಿದ್ದರೂ, ಅವುಗಳನ್ನು ಕೊಡಹಿ ಮುಂದುವರಿಯಬೇಕು ಅಂತಹ ಸತ್ಪೋತ್ಕರ್ಷ, ಗುಣಾಧಿಕ್ಯ ಅದಕ್ಕಿರಬೇಕು. ಅಂದರೆ ಸಾಹಿತ್ಯದಲ್ಲಿ ಸ್ಥಳೀಯತೆ ಸಕಾಲಿಕತೆಗಳ ಜೊತೆಯಲ್ಲೇ ಸಾರ್ವದೇಶೀಯತೆ, ಸಾರ್ವಕಾಲಿಕತೆಗಳು ಸಂಯೋಗಗೊಂಡಿರಬೇಕು. ಸಾಹಿತ್ಯ ಕೃತಿ ಒಂದು ನಿರ್ದಿಷ್ಟ ಸಮಾಜ, ಜನಾಂಗ, ಸಂಸ್ಕೃತಿ, ಮತದ ಪ್ರಭಾವಕ್ಕೆ ಒಳಪಟ್ಟಿದ್ದರೂ ಅವುಗಳ ವಿದ್ಯಮಾನಗಳ ಫಲವಾಗಿ ಹರಳಿದ್ದರೂ, ಅದರ ಮಿರುಗಿನ ಶೋಭಾಯಮಾನತೆ ಅಷ್ಟಕ್ಕೇ ಸೀಮಿತವಾಗಿದೆ. ದೂರಗಾಮೀಯದ್ದಾಗಿರಬೇಕು, ಸದ್ಯದ್ದನ್ನು ಸರಸಿ ಭವಿಷ್ಯವರ್ತಿಯಾಗಬೇಕು." (ನಿಸಾರ್.ವಿ.ವಿ.1999:95) ಹೀಗೆ ನಿಸಾರ್‌ರವರು ಸಾಹಿತ್ಯದ ಕುರಿತಾಗಿ, ಕೃತಿಯ ನೆಲೆ, ಆಶಯದ ಕುರಿತಾಗಿ ಅತ್ಯಂತ ಸೂಕ್ಷ್ಮದೃಷ್ಟಿಯ ಸಾಹಿತ್ಯಾವಲೋಕನ ಅರ್ಥಪೂರ್ಣವಾಗಿ ಮಾಡಿರುವದು ಅವರ ಬರವಣಿಗೆಯಲ್ಲಿ ಕಾಣಬಹುದು.ಸಾಹಿತ್ಯವೆಂಬುದು ಹೇಗಿರಬೇಕು, ಭವಿಷ್ಯದಲ್ಲಿ ಆ ಸಾಹಿತ್ಯದ ಪಾತ್ರದ ಬಗ್ಗೆ ತುಂಬಾ ಮಾರ್ಮಿಕವಾಗಿ ಸಾಹಿತ್ಯ ಸಂಬಂಧಿ ಲೇಖನಗಳಲ್ಲಿ ತಮ್ಮ ವಿಚಾರಗಳನ್ನು ಹೊರಹಾಕಿದ್ದಾರೆ.

### ವ್ಯಕ್ತಿ–ಕೃತಿ ಸಂಬಂಧಿ ಚಿಂತನೆ:

ನಿಸಾರ್ ಅಹಮದ್‌ರವರ ಬರವಣಿಗೆಗೆ ವಿಶಿಷ್ಟ ರೀತಿಯ ಮೆರಗು, ಸೌಂದರ್ಯ ಬಂದಿರುವದು ಸಾಹಿತ್ಯಲೋಕದ ಅಪ್ರತಿಮ ದಿಗ್ಗಜರನ್ನು ತಮ್ಮ ಲೇಖನಿಯಲ್ಲಿ ಸೆರೆ ಹಿಡಿದದ್ದು.ತಮಗೆ ಸ್ಫೂರ್ತಿ ಪ್ರೇರಣೆ ನೀಡಿದ ಆದರ್ಶ

ಮಹನೀಯರನ್ನು ಹಾಗೂ ಅವರ ಕೃತಿಗಳ ಕುರಿತಾಗಿ ತಮ್ಮ ಕಾವ್ಯ ಹಾಗೂ ಲೇಖನಗಳಲ್ಲಿ ಅವರ ಬಗೆಗೆ ಹೃದಯತುಂಬಿ ಬೆಳಕು ಚೆಲ್ಲಿರುವದು ಕಂಡುಬರುತ್ತದೆ. ಅವರು ಚಿತ್ರಿಸಿದ ವ್ಯಕ್ತಿ-ಕೃತಿ ಸಂಬಂಧಿ ಚಿಂತನೆಗಳು ಲೇಖನಗಳಲ್ಲಿ ವಿನಯವಂತ ವಿ.ಸೀ. ಸರಳ ಸದಭಿರುಚಿಯ ಸಾಹಿತ್ಯಕಾರ ಮಾಸ್ತಿ, ಸರಸತೆ ಸಂಶೋಧನೆಗಳ ಸಂಗಮ ಎಂ.ಆರ್.ಶ್ರೀ, ಪೂರ್ಣ ಸಂಕೀರ್ಣತೆಯ ಉಪಾಸಕ ಡಾ.ವಿ.ಕೃ.ಗೋಕಾಕ್, ಮಾನವ ಮನೋಗತಿಯ ಮಹಾ ದಾಖಲೆಗಾರ ಷೇಕ್ಸಪೀಯರ್, ಕುವೆಂಪು: ವ್ಯಕ್ತಿ-ಕೃತಿ ಅವಲೋಕನ, ಕಾವ್ಯರೂಪಿ ಅಡಿಗರಿಗೆ ಅಳಿವಿಲ್ಲ, ರವೀಂದ್ರರ ಕಾವ್ಯ ವಿಚಾರಗಳು, ಗದ್ಯ ರೂವಾರಿ ಎ.ಆರ್.ಕೃಷ್ಣಶಾಸ್ತ್ರಿ, ಮಾಸ್ತಿಯವರನ್ನು ನೆನೆದು, ಮಹಾಕವಿಗೆ ನೆನಪಿನ ನಮನ, ಲಾರ್ಕನ ಅತೃಪ್ತ ಹೆಣ್ಣುಗಳು, ಬದುಕು ಸಾಹಿತ್ಯವನ್ನು ಕುರಿತಂತೆ ಡಾ.ಪುತಿನ ಅವರ ವಿಚಾರಗಳು, ಡಿ.ವಿ.ಜಿ. ಚಿತ್ರಿಸಿದ ಹಾಸ್ಯ ಪ್ರಸಂಗಗಳು ಮುಂತಾದವು ಮಹತ್ವದ ಅವರ ವ್ಯಕ್ತಿ ಹಾಗು ಕೃತಿ ಸಂಬಂಧಿಸಿರುವ ಅಪ್ರತಿಮ ಬರಹಗಳಾಗಿ ಓದುಗರ ವೈಚಾರಿಕ ಪರಿಧಿ, ಜ್ಞಾನದ ದಿಗಂತವನ್ನು ವಿಸ್ತರಿಸುವಂತಹ ಅದ್ಭುತ ಬರಹಗಳಾಗಿ ಮೂಡಿಬಂದಿವೆ. ನಿಸಾರ್ ಅಹಮದ್‌ರವರಿಗೆ ಬರವಣಿಗೆಯ ಪರಿಪಕ್ವತೆ, ಸಿದ್ಧಿ ದೊರಕಿರುವದನ್ನು ಅವರ ಬರಹಗಳಲ್ಲಿ ಕಾಣಬಹುದು. ಅವರ ಬರಹದಲ್ಲಿ ಅಂತಹ ಅದ್ಭುತ ಶಕ್ತಿಯಿರುವದನ್ನು ಮನಗಾಣಬಹುದು.

**ಕುವೆಂಪು:**

ರಸಋಷಿ ಮಹಾಕವಿ ಕುವೆಂಪುರವರು ನಿಸಾರ್ ಅಹಮದ್‌ರವರ ಜೀವನ ಹಾಗೂ ಬರಹದಲ್ಲಿ ಸಾಕಷ್ಟು ಪ್ರಭಾವ ಬೀರಿದ್ದನ್ನು ಅವರ ಬರಹದ ಮೂಲಕ ಕಂಡುಬರುತ್ತದೆ. ಆರಂಭದಿಂದಲೂ ಶಾಲೆಯಲ್ಲಿಯ ಪಠ್ಯದಲ್ಲಿರುವ ಕುವೆಂಪುರವರ ಪದ್ಯಗಳ ಸ್ಫೂರ್ತಿ ಹಾಗೂ ನಂತರದ ದಿನಗಳಲ್ಲಿ ಅವರೊಂದಿಗೆ ದೊರೆತ ಅವರ ಒಡನಾಟದಿಂದ ನಿಸಾರರು ತುಂಬಾ ಸ್ಫೂರ್ತಿ ಪಡೆದದ್ದು ಕಂಡುಬರುತ್ತದೆ. ಇದಕ್ಕೆ ಅವರು ಮಹಾಕವಿ ಕುವೆಂಪುರವರಂತೆಯೇ ಬರವಣಿಗೆಯಲ್ಲಿ ತೊಡಗಿರುವ ಅವರ ಬರವಣಿಗೆಗಳೇ ಸಾಕ್ಷಿಯಾಗಿವೆ. ನಿಸಾರ್ ಅಹಮದ್‌ರವರು ತುಂಬಾ ಆದರ್ಶ ವ್ಯಕ್ತಿ ಬರಹಗಾರರಾದಂತಹ ರಸಋಷಿ ಕುವೆಂಪುರವರ ಕುರಿತಾಗಿ ತಮ್ಮ ಬರಹದಲ್ಲಿ ಹೆಮ್ಮೆಯ ಅಭಿಮಾನದ ಅಕ್ಷರಗಳಿಂದ ಗೌರವವನ್ನು ಸಲ್ಲಿಸಿರುವದು ಕಂಡುಬರುತ್ತದೆ. ಕುವೆಂಪುರವರ ಕುರಿತಾಗಿ ಹಾಗೂ ಅವರ ಕೃತಿಗಳ ಕುರಿತಾಗಿ ನಿಸಾರರು ಕಂಡಂತೆ

ವಿದ್ವತ್ಪೂರ್ಣವಾಗಿ ತಮ್ಮ ಭಾವವನ್ನು ಹೊರಹಾಕಿದ್ದಾರೆ. ಕುವೆಂಪುರವರ ಅನೇಕ ಕೃತಿಗಳನ್ನು ಚಿಕ್ಕಂದಿನಿಂದಲೇ ಅಧ್ಯಯನ ಮಾಡುತ್ತ ಅವರ ಬರಹಗಳಿಂದ ಆಕರ್ಷಿತರಾದಂತಹ ನಿಸಾರರು ಅವರನ್ನು ತೀರಾ ಹತ್ತಿರದಿಂದ ಕಂಡವರು. ಹಾಗೆಯೇ ಅವರ ಅನೇಕ ಕೃತಿಗಳನ್ನು ಅಧ್ಯಯನ ಮಾಡಿದುದರ ಫಲವಾಗಿ ತಮ್ಮ ಮೇಲಾದ ಪ್ರಭಾವವನ್ನು ಮನೋಜ್ಞವಾಗಿ ಬರಹದಲ್ಲಿ ಮೂಡಿಸಿದ್ದಾರೆ. ನಿಸಾರ್ ಅಹಮದ್‌ರವರು ಕುವೆಂಪುರವರ ಬಗ್ಗೆ ಹೇಳುತ್ತಾ ಅವರು ಎಷ್ಟರ ಮಟ್ಟಿಗೆ ಪ್ರಭಾವ ಬೀರಿದ್ದರೆಂದರೆ ಕುವೆಂಪುರವರ ಅದ್ಭುತ ಕಲ್ಪನಾ ಲೋಕದಿಂದ ಬಿಡಿಸಿಕೊಂಡು ಬರಲು ನಿಸಾರ್ ಅವರಿಂದ ಸಾಧ್ಯವಾಗದಷ್ಟು ದಟ್ಟವಾದ ಆಕರ್ಷಣೆಯಿಂದ ಅವರ ಮನ ಸೂರೆಗೊಂಡಿದ್ದರು.ಚಿಕ್ಕ ವಯಸ್ಸಿನಲ್ಲಿ ಶಾಲೆ ಕಲಿಯುವಾಗಲೇ ನಿಸಾರರು ಕುವೆಂಪುರವರ ಪ್ರಭಾವಕ್ಕೆ ಒಳಗಾದದ್ದು ಕಂಡುಬರುತ್ತದೆ. "ಮಾಧ್ಯಮಿಕ ಶಾಲೆಯಲ್ಲಿ ಕುವೆಂಪು ಅವರ ಬೊಮ್ಮನಹಳ್ಳಿಯ ಕಿಂದರಜೋಗಿ ಫ್ಯಾಂಟಸಿಯ ಕಲ್ಪನಾದ್ಭುತ ಲೋಕಕ್ಕೆ ನನ್ನ ಮನಸ್ಸನ್ನು ಕದ್ದೊಯ್ದು, ಅಲ್ಲಿಂದ ಬಚಾವಾಗಿ ಗಟ್ಟಿ ನೆಲೆಗೆ ಬರಲು ನಾನು ಆಗಾಗ ಪಡುತ್ತಿದ್ದ ಕಷ್ಟ ಅಷ್ಟಿಷ್ಟಲ್ಲ. ಆಮೇಲೆ ನಾನು ಹೈಸ್ಕೂಲಿಗೆ ಬಂದಾಗ ಅವರ ಕೆಲವು ಸಂಕಲನಗಳ ಪದ್ಯಗಳು ನನ್ನನ್ನು ಮೋಹಿಸಿಬಿಟ್ಟವು. ಆ ಕವನಗಳ ತನ್ಮಯಕರ ಸಂಗೀತಕ್ಕೆ ಕಚಗುಳಿಯಿಡುವಂಥ ನಾಟ್ಯಶೀಲ ಛಂದೋವೈಭವ, ಚಿತ್ತಸ್ಪರ್ಶಿ ಪ್ರಾಸ ವೈವಿಧ್ಯ ಆ ವಯಸ್ಸಿನ ತರುಣನನ್ನು ತಟಕ್ಕನೆ ಮೋಡಿ ಹಾಕಿ ಗೆದ್ದು ಬಿಡುವಂಥವು.ಮುಂದೆ ಕಾಲೇಜಿನಲ್ಲಿ ಓದುವಾಗಲೂ ಆ ಸಮ್ಮೋಹನದ ಗುಂಗು ಕೊಂಚಕಾಲ ನನ್ನನ್ನು ಆವರಿಸಿತ್ತು. ತರುವಾಯ ಅವರ ಗದ್ಯ ಕೃತಿಗಳು ನನ್ನ ಸಂಗಾತಿಯಾದವು. ನನ್ನ ಕಲ್ಪನೆಯನ್ನು ನಾನು ಆ ತನಕ ಕಾಣದಿದ್ದ ಅಪೂರ್ವ ಜಗತ್ತಿಗೆ ಆಹ್ವಾನಿಸಿ, ಅಲ್ಲಿ ಮೈಮರೆಯೆ ವಿಹರಿಸುವಂತೆ ಪ್ರಚೋದಿಸಿದವು, ನನ್ನ ಸಂವೇದನೆಯನ್ನು ಭಾವದೀಪ್ತಗೊಳಿಸಿದವರು" (ನಿಸಾರ್.ಸ.ಗ.2002:569). ಹೀಗೆ ನಿಸಾರ್ ಅಹಮದ್‌ರವರ ಜೀವನದಲ್ಲಿ ವರಕವಿ ಕುವೆಂಪುರವರು ಅಚ್ಚಳಿಯದ ಪ್ರಭಾವ ಬೀರಿದುದರ ಪರಿಣಾಮವಾಗಿ ನಿಸಾರ್ ಅಹಮದ್‌ರವರು ಪ್ರಬುದ್ಧ ಬರಹಗಾರರಾಗಿ ಜನಮನ ಸೂರೆಗೊಳ್ಳುವಂತಹ ಅಪ್ರತಿಮ ಬರಹಗಾರರಾಗಿ ಕಂಡುಬರುತ್ತಾರೆ.

## ಮಾಸ್ತಿ

'ಕನ್ನಡದ ಆಸ್ತಿ' ಎಂದೇ ಪ್ರಖ್ಯಾತರಾದಂತಹ ಮಾಸ್ತಿ ವೆಂಕಟೇಶ ಅಯ್ಯಂಗಾರರವರೂ ಸಹ ನಿಸಾರ ಅವರ ವ್ಯಕ್ತಿಚಿತ್ರಣಗಳಲ್ಲಿ ಮೂಡಿಬಂದಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಮಾಸ್ತಿಯವರ ಕೊಡುಗೆ ಅಪಾರವಾದುದು. ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೃಷಿ ಮಾಡಿರುವ ಮಾಸ್ತಿಯವರು ಕನ್ನಡದ ಆಸ್ತಿಯಾಗಿದ್ದಾರೆ. ಇಂತಹ ಸಾಹಿತ್ಯದ ಅದ್ಭುತ ವ್ಯಕ್ತಿತ್ವದ ಮಾಸ್ತಿಯವರ ಸಾಧನೆ, ಅವರ ಸರಳ ಜೀವನದ ಕುರಿತಾಗಿ ತಾವು ಕಂಡಂತೆ ನಿಸಾರರು ಅವರ ಜೀವನ ವೃತ್ತಾಂತವನ್ನು ದಾಖಲಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಮಾಸ್ತಿಯವರು ಸರಳ ಹೃದಯದ ಶುದ್ಧ ಜೀವನದಿಂದಾಗಿ ಇಂದಿಗೂ ಜನಮನದಲ್ಲಿ ಅಜರಾಮರರಾಗಿದ್ದಾರೆ.

ಮಾಸ್ತಿಯವರ ಬಗೆಗೆ ನಿಸಾರ್ ಅಹಮದ್‌ರವರು ತೀರಾ ಹತ್ತಿರದಿಂದ ಕಂಡ ಅವರ ಬದುಕು ಹಾಗೂ ಬರಹದ ಮೇಲೆ ಬೆಳಕು ಚೆಲ್ಲುತ್ತಾ ತಮ್ಮ ಅಪಾರವಾದ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. "ನಮ್ಮ ಸಾಹಿತ್ಯಕ್ಕೆ ಮಾಸ್ತಿ ಅವರ ಕಾಣಿಕೆ ವೈವಿಧ್ಯ ರಮಣೀಯ ಮಾತ್ರವಲ್ಲದೆ ಸ್ವಂತಿಕೆಯ ಸೊಗಡಿನಿಂದ ಸೊಗಸುವಂಥದು. ಅವರ ಶುಚಿನಿಷ್ಠ ಪ್ರತಿಭೆ, ಪರಂಪರೆಯ ಕಟ್ಟುನಿಟ್ಟಿನ ಚೌಕಟ್ಟನ್ನು ದಾಟುವ ಸಾಹಸವನ್ನು ಮಾಡದಿದ್ದರೂ, ಅದರ ಬೆಳಕು ತಿಳಿಮೆಗಳಲ್ಲಿ ಎಚ್ಚರಗೊಂಡು ಸಾರ್ವತ್ರಿಕ ತಥ್ಯಗಳನ್ನು, ಮೌಲ್ಯಗುಣ ಪೂರ್ಣವೆನಿಸಿದ್ದನ್ನು ಧಾರಾಳವಾಗಿ ಪ್ರತಿಬಿಂಬಿಸಿದೆ. ಗದ್ಯ ಪದ್ಯಗಳೆರಡನ್ನೂ ಮಾಸ್ತಿಯವರು ಮಜಬೂತುಗೊಳಿಸಿದ್ದಾರೆ ನಿಜ. ಅದರ ಅಗ್ಗಳಿಕೆಯನ್ನು ಮೊದಲ ಪರಿಚಯದಲ್ಲೇ ಅರಿವು ಮಾಡಿಕೊಡುವುದು, ಹೆಚ್ಚು ಅಕ್ಕರೆ ಓದುಗರಿಗೆ ಪಾತ್ರವಾಗುವುದು ಅವರ ಗದ್ಯವೇ. 1910ರ ಸುಮಾರಿಗೆ ಅವರು ಸಣ್ಣ ಕತೆಗಳನ್ನು ಬರೆಯತೊಡಗಿ ಆ ಪ್ರಕಾರದ ಕೋಲಂಬಸ್ ಆಗಿದ್ದಾರೆ. ಇದರೊಂದಿಗೆ ಕಾದಂಬರಿ, ನಾಟಕ, ಬಾನುಲಿ ನಾಟಕ, ಜೀವನ ಚರಿತ್ರೆ, ಆತ್ಮವೃತ್ತಾಂತ, ವಿಮರ್ಶೆ, ನಾಡು ನುಡಿ, ಸಂಸ್ಕೃತಿ ಧರ್ಮ ವಿಷಯಕ ಬರಹ ಮತ್ತು ಇಂಗ್ಲೀಷಿನಲ್ಲಿ ಕೃತಿ ರಚನೆ ಹೀಗೆ 118 ಪುಸ್ತಕಗಳನ್ನು ಪ್ರಕಟಿಸಿದ್ದಾರೆ." 5(ನಿಸಾರ್.ಸ.ಗ.2002:227) ಈ ರೀತಿ ಮಾಸ್ತಿಯವರ ಸಾಧನೆಯ ಕುರಿತಾಗಿ ಅತ್ಯಂತ ಮನೋಜ್ಞವಾಗಿ ನಿಸಾರರು ವಿವರಿಸುತ್ತಾರೆ. ಕನ್ನಡಕ್ಕೆ ಮಾಸ್ತಿಯವರು ನೀಡಿದ ಕೊಡುಗೆಯನ್ನು, ಅವರ ಜೀವನವನ್ನು ತುಂಬಾ ಅರ್ಥವಂತಿಕೆಯಿಂದ

ತಮ್ಮ ಬರವಣಿಗೆಯಲ್ಲಿ ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.ಮಾಸ್ತಿಯವರ ಮಹತ್ವದ ಕೃತಿಗಳ ವಸ್ತು, ಆಶಯ, ವೈವಿಧ್ಯತೆಯ ಕುರಿತಾಗಿ ವಿಮರ್ಶಿಸುತ್ತಾ ಮಾಸ್ತಿಯವರ ಸಾಹಿತ್ಯಕ್ಕೆ ಇನ್ನಷ್ಟು ಮೆರಗನ್ನು ನೀಡುವಲ್ಲಿ ನಿಸಾರರು ಪ್ರಯತ್ನಿಸಿದ್ದಾರೆ.

**ಷೇಕ್ಸಪಿಯರ್:**

ಜಗತ್ತಿನ ಶ್ರೇಷ್ಠ ಕವಿ, ನಾಟಕಕಾರರಲ್ಲಿ ಓರ್ವನಾದಂತಹ ಷೇಕ್ಸಿಪಿಯರ್ ಮಹಾಕವಿಯ ಕುರಿತಂತೆ ಅವರ ಜೀವನ ಸಾಧನೆಯ ಬಗೆಗೆ ಕಣ್ಣಮುಂದೆ ಕಟ್ಟುವಂತೆ ತಮ್ಮ ಗದ್ಯ ಬರಹದಲ್ಲಿ ಚಿತ್ರಿಸಿದ್ದಾರೆ. ಷೇಕ್ಸ್‌ಪಿಯರ್ ಅದ್ಭುತವಾದ ಬರಹಗಾರನಾಗಿ ಇಡೀ ಜಗತ್ತಿಗೆ ಚಿರಪರಿಚಿತನಾದಂತಹ ವ್ಯಕ್ತಿಯಾಗಿದ್ದಾನೆ. ಹೀಗಾಗಿ ಷೇಕ್ಸಪಿಯರನ ನಾಟಕಗಳು ಜಗತ್ತಿನ ಹಲವಾರು ಭಾಷೆಗಳಲ್ಲಿ ಅನುವಾದಗೊಂಡಂತೆ ಕನ್ನಡದಲ್ಲೂ ಸಹ ಕುವೆಂಪು, ನಿಸಾರ್ ಅಹಮದ್‌ರಂತಹ ಮಹಾನುಭಾವರು ಅನುವಾದಿಸಿದ್ದಾರೆ. ನಿಸಾರ್ ಅಹಮದ್‌ರವರು ಷೇಕ್ಸ್‌ಪಿಯರ್ ಮಹಾಕವಿಯ ಹರ್ಷನಾಟಕ ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ ಹಾಗೂ ಒಥೆಲೊ ಎಂಬ ದುರಂತ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅತ್ಯಂತ ಸೂಕ್ಷ್ಮ ದೃಷ್ಟಿಯ ಆಳವಾದ ಪ್ರತಿಭೆಯಿಂದ ಮೂಲ ಅರ್ಥಕ್ಕೆ ಧಕ್ಕೆ ಬಾರದಂತೆ ನಿಸಾರರು ಈ ನಾಟಕಗಳನ್ನು ಅನುವಾದಿಸಿ ಕೀರ್ತಿಗೆ ಪಾತ್ರರಾಗಿದ್ದಾರೆ. ಈ ನಾಟಕಗಳು ರಂಗಭೂಮಿಯ ಮೇಲೆ ಹಲವಾರು ಯಶಸ್ವೀ ಪ್ರಯೋಗಗಳನ್ನು ಸಹ ಕಂಡಿವೆ. ಜನರು ಅನುವಾದಗೊಂಡ ನಾಟಕಗಳ ಪ್ರಯೋಗವನ್ನು ಆನಂದಿಸಿದ್ದಾರೆ. ಷೇಕ್ಸ್‌ಪಿಯರ್ ಮಹಾಕವಿಯಂತಹ ಅದ್ಭುತವಾದಂತಹ ನಾಟಕಗಳನ್ನು ಅನುವಾದಗೊಳಿಸಿರುವಂತಹ ನಿಸಾರರು ಅಂತಹ ಮಹಾಕವಿಯನ್ನು, ಕೃತಿಗಳ ಅಧ್ಯಯನದಿಂದ ಆ ನಾಟಕಕಾರನ ಸಾಧನೆಯ ಮೇಲೆ ಮಹತ್ವದ ಬೆಳಕು ಚೆಲ್ಲಿದ್ದಾರೆ. ಷೇಕ್ಸ್‌ಪಿಯರ್ ಮಹಾಕವಿಯನ್ನು 'ಮಾನವ ಮನೋಗತಿಯ ಮಹಾದಾಖಲೆಗಾರ'ನಾಗಿ ತಮ್ಮ ಪ್ರತಿಭಾಪೂರ್ಣ ಬರವಣಿಗೆಯಲ್ಲಿ ನಿಸಾರರು ಚಿತ್ರಿಸಿದ್ದಾರೆ.

ಷೇಕ್ಸ್‌ಪಿಯರ್ ಕವಿಯ ಸಾಧನೆಯನ್ನು ಅತ್ಯಂತ ಹೆಮ್ಮೆಯಿಂದ, ಅಭಿಮಾನದಿಂದ ಚಿತ್ರಿಸಿದ ನಿಸಾರರು ಆ ಕವಿಯ ಮೇಲೆ ಪ್ರಭಾವ ಬೀರಿದ ಅನೇಕ ಮಹನೀಯರನ್ನೂ ಸಹ ಈ ಸಂದರ್ಭದಲ್ಲಿ ಸ್ಮರಿಸಲು

ಮರೆಯುವುದಿಲ್ಲ. ಷೇಕ್ಸ್‌ಪಿಯರ್‌ನ ನಾಟಕಗಳಲ್ಲಿನ ವಸ್ತು ವೈವಿಧ್ಯತೆಯನ್ನು, ಪಾತ್ರಗಳ ವಿವಿಧ ಸ್ವಭಾವವನ್ನು ಕವಿಯ ನಾಟಕ ರಚನಾ ಕೌಶಲವನ್ನು ಹೇಳುತ್ತಾ "ಮಾನವನ ಮನಸ್ಸಿನ ಮಹಾ ದಾಖಲೆಗಳು ಅವನ ನಾಟಕಗಳು. ಅದರ ಅತಿ ಕೋಮಲ ಕಂಪನ ಒಲೆತಗಳನ್ನು, ಬಾಗು ಬಳಕುಗಳನ್ನು, ಹಾವಭಾವಗಳನ್ನು ಹುತ್ತ ಗುಹೆಗಳನ್ನು, ಕಗ್ಗತ್ತಲ ಕೂಪಗಳ ಮೂಲೆ ಮೊಸಕುಗಳನ್ನು ಪತ್ತೆ ಹಚ್ಚಿ, ಸಂದರ್ಭಗಳೊಂದಿಗೆ ಅವು ಗಳಿಸಿರುವ ಸಂಬಂಧ, ಅರ್ಥವಂತಿಕೆಯನ್ನು ಧ್ವನಿಸುವುದರಲ್ಲಿ ಮಿಕ್ಕೆಲ್ಲ ಕವಿಗಳಿಗಿಂತ ಅವನು ಹೆಚ್ಚು ಜಾಣ. ಅವನ ಸಾರಸ್ವತ ಸೀಮೆ ಇತರೆ ಮಹಾಕವಿಗಳಿಗಿಂತ ವಿಸ್ತೀರ್ಣ, ಪ್ರತ್ಯೇಕ ಅದೊಂದು ವಿಶಿಷ್ಟ ಭೌಗೋಳಿಕ ಎಲ್ಲೆ: ಷೇಕ್ಸ್‌ಪಿಯರಲ್ಯಾಂಡ್. ಆ ಪ್ರದೇಶದ ಪೌರರ ವೈವಿಧ್ಯಕ್ಕೆ ಪಾರವೇ ಇಲ್ಲ; ಬೆಪ್ಪು ತಕ್ಕಡಿ, ಖದೀಮ ಅರಸ, ಸಾಮಾಜಿಕ, ಸಂಸಾರಿ, ಯೋಧ, ಪ್ರೇಮಿ, ಸಮಯಸಾಧಕ, ಕಾಮುಕ, ಧೇಭ, ಮುತ್ಸದ್ದಿ, ನಕಲಿ, ಯಕ್ಷಿಣಿ, ಮಾಟಗಾತಿ, ಸಿನಿಕ, ಸ್ವಮೋಹಿ, ಹುಚ್ಚ, ಸಾತ್ವಿಕ, ವಿಶ್ವಾಸಿ, ಸ್ವಾಮಿನಿಷ್ಠ, ದ್ರೋಹಿ, ಜುಗ್ಗ, ಚಾಣಾಕ್ಷ ಪುತ್ರಿಯರು, ಭೋಳೆತಂದೆ, ಗಂಡೆದೆಯ ಗಡಾಣಿಯರು, ಹೆಣ್ಣೆದೆಯ ಪುಕ್ಕಲು ಪ್ರಾಣಿಗಳು, ಸಂಭಾವಿತ ಹುಂಬರು, ಹುಂಬ ಸಂಭಾವಿತರು ಈ ಹನುಮಂತನ ಬಾ ತುದಿ ಕಾಣದ್ದು. ಒಬ್ಬರ ಸ್ವಭಾವದಲ್ಲಿ ಮತ್ತೊಬ್ಬರು ಕಲಸಿ ಹೋಗದೆ. ಒಂದು ಸನ್ನಿವೇಶಕ್ಕೆ ಮತ್ತೊಂದು ನಕಲಾಗದೆ, ತಮ್ಮತನವನ್ನು ಅಚ್ಚಳಿಯದೆ ಸಾಧಿಸಿಕೊಂಡು ಬಂದ, ಕಣ್ಣಿಗೆ ಬಡಿಯುವ ವೈವಿಧ್ಯ ಅದು. ಶತಮಾನಗಳ ಸಾಹಿತ್ಯ ಪ್ರೇಮಿಗಳ ಪುಷ್ಟಿ ಆತ್ಮಸಂವರ್ಧನೆ ಸಂತೋಷಕ್ಕಾಗಿ ಬದುಕಿನ ಅರ್ಕವನ್ನೇ ತೆಗೆದಿಟ್ಟು ಹೋಗಿದ್ದಾನೆ ಷೇಕ್ಸ್‌ಪಿಯರ್ "6(ನಿಸಾರ್ ಸ.ಗ.2002:516) ಹೀಗೆ ಷೇಕ್ಸ್‌ಪಿಯರ್ ಮಹಾಕವಿಯ ಸಾಧನೆಯಲ್ಲಿನ, ನಾಟಕಗಳೂ ಒಳಗೊಂಡಂತಹ ಮಹತ್ವದ ಸ್ವಭಾವಗಳನ್ನು ನಿಸಾರ್ ಅಹಮದ್‌ರವರು ಅರ್ಥಪೂರ್ಣವಾಗಿ ಬಿಂಬಿಸಿದ್ದಾರೆ.

**ಸಾಮಾಜಿಕ, ರಾಜಕೀಯ, ಆಡಳಿತ, ಇತಿಹಾಸ ಸಂಗತಿಗಳ ವಿವೇಚನೆ:**

ಪ್ರೊ: ನಿಸಾರ್ ಅಹಮದ್‌ರವರು ಅಪಾರವಾದ ಅನುಭವಗಳನ್ನು ಗಳಿಸಿದವರು. ತಮ್ಮ ಅನೇಕ ಅನುಭವಗಳನ್ನು ಗ್ರಹಿಸಿದ ಸತ್ಯಗಳನ್ನು ಸಮಾಜದಲ್ಲಿನ ಘಟನೆಗಳ ಕುರಿತಾಗಿ ಅನೇಕ ಲೇಖನಗಳನ್ನು ಬರೆದಿದ್ದಾರೆ. ಸಾಮಾಜಿಕ, ರಾಜಕೀಯ, ಆಡಳಿತ, ಇತಿಹಾಸ ಮುಂತಾದ ಸಂಗತಿಗಳ ಕುರಿತಾಗಿ ವೈವಿಧ್ಯಮಯ ಅನುಭವಗಳನ್ನು ಅವರ ಬರಹಗಳಲ್ಲಿ ಕಾಣಬಹುದು. ಅವರು ರಚಿಸಿರುವಂತಹ ದೀರ್ಘವಾದ ಗದ್ಯ ಸಾಹಿತ್ಯದಲ್ಲಿ ಈ ವಿಷಯಗಳ

ಕುರಿತಾಗಿ ಹಲವಾರು ಮೌಲಿಕ ಬರಹಗಳಾಗಿ ಮೂಡಿಬಂದಿವೆ. ಅವುಗಳನ್ನು ವ್ಯಕ್ತಿ ಸಂಬಂಧಿ ಚಿಂತನೆಗಳು ಹಾಗೂ ನೀತಿ ನಡಾವಳಿಕೆ ಶಿಷ್ಟಾಚಾರ ಜೀವನ ಸಾರ್ಥಕ್ಯ ಇತ್ಯಾದಿಗಳ ಚಿಂತನೆಗಳೆಂದು ವಿಂಗಡಿಸಲಾಗಿದೆ. ಅವರು ಬರೆದಿರುವ ವ್ಯಕ್ತಿ–ಸಂಬಂಧಿ ಚಿಂತನೆಗಳಲ್ಲಿ ಮೂಡಿಬಂದಿರುವ ವಿಷಯಗಳಲ್ಲಿ ನೆಹರು ಅಲ್ಲದಿದ್ದರೆ ಯಾರು ಪ್ರಸ್ತುತ? ತಪಕೊಲ್ಲದುದು ತಾಯ್ತನಕೆ ಸಾಧ್ಯವೆನ್ನಿಸಿದ ಮದರ್ ತೆರೆಸ, ಮಹನೀಯ ಸರ್ ಮಿರ್ಜಾ, ಸರ್ವಗುಣ ಸಂಪನ್ನ ಏಕಗುಣಹೀನ, ಸತ್ಯಾಗ್ರಹಿ ಸೇವಕನಿಗೆ ಸವಿನಯ ಸಲಾಂ! ಸ್ವದೇಶಿ ಆಂಗ್ಲನ ಅಸದೃಸ ಭಾರತ ಪ್ರೇಮ, ಸಂಗೀತಜ್ಞ ಸ್ನೇಹಿತನಿಗೆ ಶುಭಹಾರೈಕೆ, ಸುಗಮ ಸಂಗೀತದ ಸಮ್ಮೋಹನಕಾರ ಮುಂತಾದ ಅದ್ಭುತ ಬರಹಗಳಾಗಿ ಮೂಡಿಬಂದಿವೆ.

ನಿಸಾರ್ ಅಹಮದ್‌ರವರು ನೀತಿ ನಡಾವಳಿಕೆ ಶಿಷ್ಟಾಚಾರ ಜೀವನ ಸಾರ್ಥಕ್ಯ ಇತ್ಯಾದಿಗಳ ಚಿಂತನೆ ಕುರಿತ ಬರಹಗಳಲ್ಲಿ ಸಾರೊಳಗಿನ ಸೌಟು, ನೀನಾರಿಗಾದೆಯೋ ಎಲೆ ಮಾನವ? ಪನ್ನೀರಿನ ಕೊಳ ಮತ್ತು ನಾಯಿ, ಮೀನು ಕೊಳೆಯುವುದು ಇತ್ಯಾದಿ, ನಾಯಿಯನ್ನು ಹಿಂದೆ ಹಾಕುವ ಬಾಲ, ಕರುಬಿನ ಕಡಲಿನ ನಡುವೆ ನೇಹದ ನಡುಗಡ್ಡೆಗಳು, ಅನುಷ್ಠಾನಕ್ಕೆ ಅವಸರಿಸುವ ಅಭ್ಯಾಸಗಳು, ಡ್ಯಾಮಿಡ್! ವಾಟ್ ಫೈನ್ ಷಾಟ್!, ನಯವಂತ ನಡವಳಿಕೆ: ಸುಸಂಸ್ಕೃತಿಯ ಹೆಗ್ಗಳಿಕೆ, ಪ್ರಜಾಪ್ರಭುತ್ವದ ಸುತ್ತಮುತ್ತ, ಮಹಿಳೆ ಊದಿದ್ದಾಳೆ ಮುಕ್ತಿ ಕಹಳೆ, ತಿಳಿವಿಲ್ಲದೆ ಉಳಿವಿಲ್ಲ, ಇಂತಹ ಅನೇಕ ಮಹತ್ವದ ವಿಷಯಗಳ ಕುರಿತಾಗಿ ವೈವಿಧ್ಯಮಯ ವಿಚಾರಗಳಿಂದ ಕೂಡಿದ ಬರಹಗಳು ವಿದ್ವತ್ತಿನ ಆಶಯದಿಂದ ಮೂಡಿಬಂದಿವೆ. ಕನ್ನಡ ಸಾಹಿತ್ಯಕ್ಕೆ ನಿಸಾರರ ಬರವಣಿಗೆಗಳು, ಲೇಖನಗಳು ಅಪೂರ್ವ ನಿಧಿಗಳಾಗಿ ಅಪೂರ್ವ ಕಾಣಿಕೆ ನೀಡಿವೆ. ವೈಚಾರಿಕ ಲೋಕಕ್ಕೆ ನಿಸಾರ್ ಅಹಮದ್‌ರವರ ಕೊಡುಗೆ ಅದ್ಭುತವಾದದ್ದು. ಅವರ ಪ್ರತಿಯೊಂದು ಲೇಖನಗಳೂ ಓದುಗರನ್ನು ಬೆರಗುಗೊಳಿಸುತ್ತಾ, ಜ್ಞಾನದ ವ್ಯಾಪ್ತಿ ವಿಸ್ತರಿಸುತ್ತಾ ಚಿಂತನೆಗೀಡು ಮಾಡುವಂತಹ ಸಾಮರ್ಥ್ಯವನ್ನು ಹೊಂದಿವೆ.

**ವ್ಯಕ್ತಿ ಸಂಬಂಧಿ ಚಿಂತನೆ:**

ಮಹಾನ್ ಆದರ್ಶ ವ್ಯಕ್ತಿಗಳ ಬಗೆಗಿನ ಇವರ ಆಲೋಚನೆ ತುಂಬಾ ವಿಶಿಷ್ಟ ವಾಗಿದೆ. ಮಹಾನ್ ಮನಸ್ಸುಗಳು ಹಾಗೂ ಅವರ ಆಶಯಗಳೊಂದಿಗೆ ಈ ಜಗತ್ತಿಗೆ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿದಂತಹ ಜೀವಪರ

ಹಾಗೂ ಜನಪರ ಕಾಳಜಿಯನ್ನು ಹೊಂದಿದ ಮೇರು ವ್ಯಕ್ತಿತ್ವದ ವಿಚಾರಗಳನ್ನು ತುಂಬಾ ಅಭಿಮಾನ ಪೂರ್ವಕವಾಗಿ ವ್ಯಕ್ತಪಡಿಸಿದ್ದಾರೆ. ನಾಡಿಗೆ, ದೇಶಕ್ಕೆ ಸಾಮಾಜಿಕವಾಗಿ, ರಾಜಕೀಯವಾಗಿ, ಆಡಳಿತಾತ್ಮಕವಾಗಿ ಅನುಪಮ ಸೇವೆ ಸಲ್ಲಿಸಿರುವಂತಹ ಆದರ್ಶ ವ್ಯಕ್ತಿಗಳನ್ನು, ಮಹನೀಯರನ್ನು ಅತ್ಯಂತ ಹೆಮ್ಮೆಯಿಂದ ನಿಸಾರರು ತಮ್ಮ ಬರಹದಲ್ಲಿ ಬಿಂಬಿಸಿದ್ದಾರೆ, ಮಹಾನ್ ವ್ಯಕ್ತಿಗಳ ಕೊಡುಗೆಯನ್ನು ತಮ್ಮ ಮುಕ್ತ ಕಂಠದಿಂದ ಹೊಗಳಿದ್ದಾರೆ. ಅಂತಹ ಮಹಾನ್ ವ್ಯಕ್ತಿಗಳಲ್ಲಿ ನೆಹರು, ಮದರ ತೆರೆಸ, ಮಿರ್ಜಾ ಇಸ್ಮಾಯಿಲ್ ಹಾಗೂ ವೈವಿಧ್ಯಮಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ದೇಶದ ಒಳಿತಿಗಾಗಿ, ಕೀರ್ತಿಗಾಗಿ ಶ್ರಮಿಸಿದ ಮಹನೀಯರ ಕುರಿತಾಗಿ ಹಲವಾರು ಲೇಖನಗಳನ್ನು ಬರೆದಿದ್ದಾರೆ.

**ಮದರ್ ಥೆರೆಸಾ:**

ಮಾನವತೆಯ ಮಹಾತಾಯಿ, ದೀನರ ಕಂಬನಿ ಒರಸಿದ ಮಹಾತಾಯಿ, ಕರುಣಾಮಯಿಯಾಗಿ ಅಮರಳಾಗಿರುವಂತಹ ಮದರ್ ತೆರೆಸ ಜಗತ್ತಿನ ಅಪ್ರತಿಮ ಮಹಿಳೆ. ಬೇರೆಯವರ ಕಷ್ಟಗಳಲ್ಲಿ ಭಾಗಿಯಾಗಿ ಅನುಕಂಪ ತೋರಿದ ತ್ಯಾಗಮಯಿ. ಅವರ ಅಂತರಂಗದ ನಿಸ್ವಾರ್ಥ ಸೇವೆ ಉದಾತ್ತವಾದುದು. ಜಗತ್ತಿನಲ್ಲಿ ಅಂತಹ ಮಹಾಮಹಿಮ ಮಹಿಳೆ ದೊರೆಯುವುದು ವಿರಳ. ಬೇರೆಯವರ ಬಾಳಿಗಾಗಿ ತಮ್ಮ ಜೀವನವನ್ನೇ ಸವೆಸಿ ಶ್ರೀಗಂಧದಂತೆ ಕಂಪು ಬೀರಿದ ಮದರ್ ತೆರೆಸ ಅಗ್ರಮಾನ್ಯ ಮಹಿಳೆಯಾಗಿದ್ದಾರೆ. ತಮ್ಮ ಲೇಖನದಲ್ಲಿ ಮದರ್ ತೆರೆಸರ ಕುರಿತಾಗಿ ನಿಸಾರ್ ಅಹಮದ್‌ರವರು ಅತ್ಯಂತ ಉಪಯುಕ್ತವಾದ ಮಾಹಿತಿಯನ್ನು ನೀಡುತ್ತಾರೆ.

ಮದರ್ ತೆರೆಸರವರು ಯುಗೋಸ್ಲೋವಿಯಾದ ಸ್ಕೋಪ್ಜೆ ಎಂಬ ಊರಲ್ಲಿ ಜನಿಸಿದರು. ಅವರ ಹುಟ್ಟು ಹೆಸರು ಅಗ್ನೆಸ್ ಗೊಂಖ್ಯಾ ಬಿಜಾಕ್ಸು. ಅವರಿಗೆ ಚಿಕ್ಕಂದಿನಿಂದಲೇ ಸನ್ಯಾಸಿನಿಯಾಗಿ ಜನರ ಸೇವೆ ಮಾಡಬೇಕೆಂಬ ಹೆಬ್ಬಯಕೆ ಹೀಗಾಗಿ ದೀನರ ದರಿದ್ರರ, ನಿರ್ಗತಿಕರನ್ನು ಸಾಂತ್ವನಗೊಳಿಸುವ ಅದರೊಂದಿಗೆ ಏಸು ಸ್ವಾಮಿಯ ದಿವ್ಯ ಸಂದೇಶಗಳಿಗೆ ಗರಿ ಮೂಡಿಸುವ ಮತ್ತು ತನ್ನ ಜೀವಿತಕ್ಕೆ ಕೃತಾರ್ಥತೆಯನ್ನು ಕೂಡಿಸುವ ಕಾಯಕದ ಹೊಂಗನಸನ್ನು ಹೊತ್ತವಳು. ಅವರ ದೇಶಕ್ಕೆ ಆಗಾಗ ಭಾರತದಿಂದ ಕ್ರೈಸ್ತಧರ್ಮ ಸಂಸ್ಥೆಯ ಸದಸ್ಯರು ಹೋಗುತ್ತಿದ್ದರು. ಆ ಸದಸ್ಯರಿಂದ ಭಾರತದಲ್ಲಿ 'ಲೊರೆಟ್ಟೊ ಸನ್ಯಾಸಿನಿ ಸಂಘ'ವು ಬಂಗಾಳ ಹಾಗೂ ಮತ್ತಿತರ ಭಾಗಗಳಲ್ಲಿ ದೀನರ, ದರಿದ್ರರ

ಸೇವೆಯಲ್ಲಿ ತೊಡಗಿರುವ ಸಂಗತಿಯನ್ನು ತಿಳಿದ ಅಗ್ನೆಸ್ ಆ ಸಂಘಕ್ಕೆ ಸೇರಿದರು. ತಮ್ಮ ಹತ್ತೊಂಬತ್ತನೇ ವಯಸ್ಸಿನಲ್ಲಿ 1929ರಲ್ಲಿ ಭಾರತಕ್ಕೆ ಬಂದರು. ಎರಡು ವರ್ಷಗಳ ಶಿಕ್ಷಣದ ನಂತರ 1931ರಲ್ಲಿ ಸನ್ಯಾಸಿ ಜೀವನದ ಬ್ರಹ್ಮಚರ್ಯಪಾಲನೆಯ ದೀಕ್ಷೆಯನ್ನು ಅಗ್ನೆಸ್ ಪಡೆದರು. 'ತೆರೆಸ' ಎಂಬ ಕ್ರೈಸ್ತ ಸನ್ಯಾಸಿಯ ನವ ನಾಮಧೇಯವನ್ನು ಧರಿಸಿದರು. ಹದಿನೇಳು ವರ್ಷಗಳ ಕಾಲ ಕಲ್ಕತ್ತದ ಸೈಂಟ್ ಮೇರಿ ಹೈಸ್ಕೂಲಿನಲ್ಲಿ ಭೂಗೋಳದ ಶಿಕ್ಷಕಿಯಾಗಿ, ಮುಖ್ಯಸ್ಥೆಯಾಗಿ ಸೇವೆ ಸಲ್ಲಿಸಿದ್ದಾರೆ. ಮುಂದೆ 1937ರಲ್ಲಿ ಸನ್ಯಾಸಿನಿ ಜೀವನದ ಶಾಶ್ವತ ದೀಕ್ಷಾ ಸ್ವೀಕಾರಕ್ಕೆ ತೆರೆಸ ಅರ್ಹರಾದರು. ಸನ್ಯಾಸಿನಿಯಾಗಿ ತೆರೆಸರವರು ಹಲವಾರು ಪ್ರದೇಶಗಳಲ್ಲಿ ಸಂಚರಿಸಿ, ದೀನರ, ಬಡವರ, ರೋಗಿಗಳನ್ನು ಹತ್ತಿರಕ್ಕೆ ಕರೆದು ಸಾಂತ್ವನ ನೀಡಿದ ಮಹಾಮೂರ್ತಿ. ಈ ರೀತಿ ವೈವಿಧ್ಯಮಯ ಸಾಮಾಜಿಕ, ರಾಜಕೀಯ, ಆಡಳಿತಕ್ಕೆ ಸೇವೆ ಸಲ್ಲಿಸಿದ ಹಲವಾರು ವ್ಯಕ್ತಿಗಳನ್ನು ನಿಸಾರರು ತಮ್ಮ ಬರವಣಿಗೆಯಿಂದ ಪರಿಚಯಿಸಿದ್ದಾರೆ.

**ನೀತಿ ನಡುವಳಿಕೆ ಶಿಷ್ಟಾಚಾರ ಜೀವನ ಸಾರ್ಥಕ್ಯ ಇತ್ಯಾದಿಗಳ ಚಿಂತನೆ:**

ಮಾನವ ಜೀವನದಲ್ಲಿ ಘಟಿಸುವಂತಹ ಅನೇಕ ಸಂದರ್ಭಗಳು ಹಾಗೂ ಜೀವನ ಸಾರ್ಥಕ್ಯ ಮಾಡಿಕೊಳ್ಳಲು ಮಾನವ ಸಾಗಬೇಕಾದ ಸನ್ಮಾರ್ಗದ ಬಗೆಗೆ, ರೀತಿ–ನೀತಿ ಶಿಷ್ಟಾಚಾರಗಳ ಕುರಿತಾಗಿಯೂ ಹಲವಾರು ವೈಚಾರಿಕ ಲೇಖನಗಳನ್ನು ನಿಸಾರರು ರಚಿಸಿದ್ದಾರೆ. ಅವರ ಅನುಭವದಾಳದಿಂದ ಹೊರಹೊಮ್ಮುವ ಆಲೋಚನೆಗಳು ಜೀವನದ ಅತ್ಯುಪಯುಕ್ತವಾದ ಸಾರವನ್ನು ತಿಳಿಸುವುದರೊಂದಿಗೆ, ಸನ್ಮಾರ್ಗದೆಡೆ ಸಾಗಲು ಸುಲಭವಾದ ಮಾರ್ಗಗಳಾಗಿ ನಿಸಾರ್‌ರ ಬರಹಗಳು ಅರ್ಥಗರ್ಭಿತವಾಗಿ ಮೂಡಿಬಂದಿವೆ. ಅತ್ಯಂತ ಎಚ್ಚರ ಹಾಗೂ ನೈಜತೆಯಿಂದ ಅಂತರಾಳದ ಕಾಳಜಿಯಿಂದ ಉದ್ಭವಿಸುವ ಅವರ ಬರವಣಿಗೆ ಅತ್ಯಂತ ಆದರ್ಶಪ್ರಾಯವಾಗಿದೆ. ಜೀವನದ ಒಳ ಹೊರಗುಗಳನ್ನು, ದಿನನಿತ್ಯದ ಜಂಜಾಟಗಳು ಡಾಂಭಿಕತೆ, ಆಡಂಬರತೆಗಳು, ಜೀವನದ ವಿವಿಧ ವ್ಯಾಪಾರಗಳು, ಬಹಳ ಸೊಗಸಾಗಿ ಅವರ ಬರವಣಿಗೆಯಲ್ಲಿ ಮೂಡಿಬಂದಿವೆ.

ಇಂದಿನ ಆಧುನಿಕ ಯುಗದ ವಿದ್ಯಮಾನಗಳ ಸಂದರ್ಭದಲ್ಲಿ ಹಲವಾರು ವಿಲಾಸಿ ಜನರ ಆಡಂಬರ ಪದ್ಧತಿಗಳ ಬಗ್ಗೆ ಅವರ ಕೃತಕ ನಡಾವಳಿಕೆಯ ಕುರಿತಾಗಿ ಹೇಳುತ್ತಾ ಪ್ರಾಣಿ, ಪಕ್ಷಿ, ಕ್ರಿಮಿ–ಕೀಟಗಳನ್ನು ಪ್ರೀತಿಸುವಷ್ಟು ತನ್ನ ಜನಾಂಗದವರೇ ಆದಂತಹ ಮಾನವರನ್ನು ಹತ್ತಿರಕ್ಕೂ ಸೇರಿಸಿಕೊಳ್ಳದ ಜನರ

ಮನೋಭಾವವನ್ನು ಸಹ ನಿಸಾರರು ತುಂಬಾ ಮೊನಚಾಗಿ ತಮ್ಮ ಬರಹದಲ್ಲಿ ಹಿಡಿದಿಟ್ಟಿದ್ದಾರೆ. "ಕೆಲವು ಶ್ರೀಮಂತರು ಬೆಳಗಿನ ಗಾಳಿ ಸೇವನೆಗೆ ಹೊರಡುವಾಗ ಕೈಯಲ್ಲಿ ಸಕ್ಕರೆಯ ಪೊಟ್ಟಣ ಇಲ್ಲವೇ ಚೀಲ ಹಿಡಿದಿರುತ್ತಾರೆ.ಬೆಂಗಳೂರಿನ ಕೆಲವು ಪಾರ್ಕು, ಉದ್ಯಾನವನಗಳಲ್ಲಿ ಇದು ಸರ್ವೇ ಸಾಮಾನ್ಯ ದೃಶ್ಯ.ಇರುವೆಗಳ (ಅದರಲ್ಲೂ ಕಪ್ಪು ಇರುವೆಗಳ) ಬಿಲಗಳನ್ನು ಕಂಡಾಗ ಚೂರು ಸಕ್ಕರೆ ಹಾಕಿ ಮುಂದುವರಿಯುತ್ತಾರೆ. ಇವರಲ್ಲಿ ಸಾಮಾನ್ಯವಾಗಿ ಮಯೋವೃದ್ಧರೇ ಹೆಚ್ಚು.ಈ ಹಿಂದೆ ತಮ್ಮ ಕಾರುಗಳಲ್ಲಿ ಮನುಷ್ಯನಿಗೆ ಮೀಸಲಾದ ಸ್ಥಾನವನ್ನು ನಾಯಿಗಳಿಗೆ ನೀಡಿ, ಮನುಷ್ಯನನ್ನು ನಾಯಿಗಿಂತ ಕಡೆಯಾಗಿ ನಡೆಸಿಕೊಂಡ ಮಹಾನುಭಾವರೂ ಇವರಲ್ಲಿರುವುದನ್ನು ನಾನು ಬಲ್ಲೆ!" (ನಿಸಾರ್:2002:170) ಹೀಗೆ ಮಾನವರು ಮಾನವರನ್ನು ಸಹಿಸದೆ ಇರುವೆ, ನಾಯಿಗಳಿಗಿಂತಲೂ ಕೀಳಾಗಿ ಮನುಷ್ಯನನ್ನು ಕಾಣುವ ಪರಿಯನ್ನು ನಿಸಾರ್ ಅಹಮದ್‌ರವರು ಅತ್ಯಂತ ಮಾರ್ಮಿಕವಾಗಿ ಚಿತ್ರಿಸುತ್ತಾರೆ. ಹೀಗೆ ಮಾನವರ ಜೀವನದ ನೀತಿ ನಡಾವಳಿಕೆಗಳನ್ನು ಅತ್ಯಂತ ವ್ಯಂಗ್ಯ–ವಿಡಂಬನೆಯಿಂದ ಮನುಷ್ಯತ್ವದೆಡೆಗೆ ಹಾತೊರೆಯಲು ಅವರು ಚಡಪಡಿಸುವ ಆಂತರಿಕ ಕಾಳಜಿ ಆದರಣೀಯವಾದದ್ದು.

### ಪನ್ನೀರಿನ ಕೊಳ ಮತ್ತು ನಾಯಿ

ನಿಸಾರ್ ಅಹಮದ್‌ರವರು ಇಲ್ಲಿ ಸಮಾಜದಲ್ಲಿನ ವಿಚ್ಛಿದ್ರಕಾರಿಕ ಕ್ರಿಯೆಯಲ್ಲಿ ತೊಡಗುವಂತಹವರನ್ನು, ದೇಶದ ಐಕ್ಯತೆಗೆ, ಸಮಗ್ರತೆಗೆ ಭಂಗ ತರುವವರನ್ನು ಖಂಡಿಸಿದ್ದಾರೆ.ದೇಶದ ಸಮಗ್ರತೆಯನ್ನು ಭಂಗಗೊಳಿಸುವ ಯಾರೇ ಆಗಲಿ ಶಿಕ್ಷಾರ್ಹರು, ದಂಡನೆಗೆ ಅರ್ಹರು.ಅವರು ಸುಂದರವಾದ ಪನ್ನೀರಿನ ಕೊಳದಲ್ಲಿ ಬಿದ್ದಂತಹ ನಾಯಿಯಂತೆ.ಅಂತಹ ದುಷ್ಟರಿಂದ ಇಡೀ ಪರಿಸರಕ್ಕೆ ಕೆಟ್ಟ ಹೆಸರು ಬರುವದಲ್ಲದೆ ಸಮಾಜದ ಸ್ವಾಸ್ಥ್ಯ ಕೆಡುವದರಲ್ಲಿ ಸಂದೇಹವೇ ಇಲ್ಲ. ಇಂತಹವರ ಬಗ್ಗೆ ಪ್ರತಿಯೊಬ್ಬ ನಾಗರೀಕರು ಎಚ್ಚರದಿಂದಿರಬೇಕು ಹಾಗು ಅವರನ್ನು ಸಮಾಜವಾಗಲಿ, ಸರ್ಕಾರಗಳಾಗಲಿ ಕ್ಷಮಿಸಬಾರದು ಎನ್ನುತ್ತಾ ಅವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ." ದೇಶದ ಸಮಗ್ರತೆಯನ್ನು ಭಂಗಗೊಳಿಸುವ ಯಾರೇ ಆಗಲಿ ಅತ್ಯುಗ್ರ ದಂಡನೆಗೆ ಅರ್ಹರು.ಅತ್ಯಲ್ಪ ಸಂಖ್ಯೆಯ ಈ ಐಕ್ಯಭಂಜಕರನ್ನು ಯಾವುದೇ ಕಾರಣದಿಂದ ಸಮಾಜ, ಸರಕಾರಗಳು ಮನ್ನಿಸಬಾರದು. ಪಾಪಿಗೆ ತೋರಿದ ಮರುಕ ಪಾಪಕ್ಕೆ

ನೀಡಿದ ಮುಕ್ತ ಪರವಾನಿಗೆ. ಪರ್ಷಿಯಾದ ಸೂಫಿ ಕವಿ ಸಾದಿ ರಚಿಸಿದ ವಚನವೊಂದರ ಆಂಗ್ಲಾನುವಾದ ಹೀಗಿದೆ:

**"For one unshaped in the community,**

**The hearts of the wise suffer pain;**

**As if a pool is filled with rose water**

**And a dog fell in, polluting it"**

ಸಮಾಜದಲ್ಲಿ ಸರಿಯಾಗಿ ರೂಪಿತವಾಗದ ತಿಳಿಗೇಡಿಗಾಗಿ ಪ್ರಾಜ್ಞರ, ಜ್ಞಾನಿಗಳ ಹೃದಯ ನೋವಿನಿಂದ ಚಡಪಡಿಸುತ್ತದಂತೆ. ದುಷ್ಟ ಮನುಷ್ಯನು ಪನ್ನೀರು ತುಂಬಿದ ಕೊಳಕ್ಕೆ ಬಿದ್ದ ನಾಯಿಯಂತೆ ಅವನು. ನಮ್ಮಲ್ಲಿ ಪಾಯಸಕ್ಕೆ ಬಿದ್ದ ನೊಣ, ಹಂಡೆ ಹಾಲಿಗೆ ಹನಿಯಷ್ಟು ಹುಳಿ ಹಿಂಡಿದ ಹಾಗೆ ಅನ್ನುತ್ತೇವಲ್ಲ. ಆಗೋ ಹಾಗೆ ಅವನಿಂದ ಇಡೀ ಸಮಾಜ, ದೇಶಕ್ಕೆ ಗಬ್ಬುನಾತ ಹರಡುತ್ತದೆ; ಪರಿಸರ ಹದಗೆಡುತ್ತದೆ**"** (ನಿಸಾರ್:2002:179) ಹೀಗೆ ದೇಶದ ಸಮಗ್ರತೆಯನ್ನು ಹಾಳುಗೆಡಹುವಂತಹ ದುಷ್ಟರ ಬಗೆಗೆ ಅತ್ಯಂತ ಜಾಗರೂಕರಾಗಿರುವಂತೆ ನಿಸಾರರು ಎಚ್ಚರಿಸುವ ಮನೋಭಾವ ಅನುಕರಣೀಯವಾದದ್ದು. ಇದಕ್ಕೆ ಅವರು ಪಂಜಾಬ್, ಕಾಶ್ಮೀರ್, ಆಸ್ಸಾಂ ಮುಂತಾದ ಭಾಗಗಳಲ್ಲಿ ನಡೆದಂತಹ ಹತ್ಯಾಕಾಂಡಕ್ಕೆ, ವಿಧ್ವಂಸಕ ಕೃತ್ಯಗಳೆಂದು ಸಮುದಾಯವನ್ನು ದೂರುವಂತಿಲ್ಲ. ಅದರಲ್ಲಿನ ಕೆಲವು ಕೀಳು ಮನದ ಜನರು ಪರಿಸರವನ್ನು ಹಾಳು ಮಾಡುತ್ತಾರೆ. ಅಂಥವರು ಪನ್ನೀರಿನ ಕೊಳಕ್ಕೆ ಬಿದ್ದ ನಾಯಿಗಳಂತೆ ನಿಸಾರರು ಹೇಳುವಂತೆ **'**ರಕ್ತದಿಂದ ರಕ್ತವನ್ನು ತೊಳೆಯಲಾಗದು **–'Blood cannot be washed with blood'–** ಅದು ಇನ್ನಷ್ಟು ರಕ್ತಪಾತಕ್ಕೆ ಹಾದಿ ರಚಿಸುತ್ತದೆ. ಹೀಗೆ ನಿಸಾರರು ಅತ್ಯಂತ ಮಹತ್ವದ ವಿಚಾರಗಳನ್ನು ತಮ್ಮ ಬರಹಗಳಲ್ಲಿ ಬಿಂಬಿಸಿದ್ದಾರೆ.

### 5.3. ತಾತ್ವಿಕ ಚಿಂತನೆ

ಪ್ರೊ.ನಿಸಾರ್ ಅಹಮದ್‌ರವರ ಬರವಣಿಗೆಯ ವ್ಯಾಪ್ತಿ ತುಂಬಾ ವಿಸ್ತಾರವಾದದ್ದು. ಅವರ ಬರವಣಿಗೆಯ ತೆಕ್ಕೆಗೆ ಸಿಗಲಾರದಂತಹ ವಿಷಯಗಳು ವಿರಳ. ಜೀವನಾನುಭವದ ಅನೇಕ ವಸ್ತು, ವಿಷಯಗಳು ಅವರ ಬರವಣಿಗೆಯ ವ್ಯಾಪ್ತಿಯಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿವೆ. ಅತ್ಯಂತ ತಾರ್ಕಿಕ,

ಗಂಭೀರ, ವೈಚಾರಿಕ ಸನ್ನಿವೇಶಗಳನ್ನು ಅನುಭವಗಮ್ಯತೆಯಿಂದ ಮಾರ್ಮಿಕವಾಗಿ ಬರೆಯುವ ಕಲೆ ಅವರಿಗೆ ಸಿದ್ಧಿಸಿದೆಯೆಂದು ಹೇಳಬಹುದು. ಅವರ ಪದಬಂಧಗಳ ಜೋಡಣೆ ಹಾಗೂ ವಿಶ್ಲೇಷಣಾ ಕ್ರಮ ಅತ್ಯಂತ ವಿಡಂಬನಾತ್ಮಕ ಶೈಲಿಯಿಂದ ಕೂಡಿದೆ. ಅವರ ಸಮಗ್ರ ಗದ್ಯದಲ್ಲಿ ತಾತ್ವಿಕ ಚಿಂತನೆಗಳಿಂದ ಕೂಡಿದ ಬರಹಗಳು ಮನೋಜ್ಞವಾಗಿ ಮೂಡಿಬಂದಿವೆ. ಅಂತಹ ಲೇಖನಗಳಲ್ಲಿ ದೇವರು, ದೀಪ, ಸಿಗರೇಟ್ ಸಿನಿಮಾ, ಫಿರಂಗಿ ಬಾಯಿಯ ಗುಬ್ಬಚ್ಚಿಗೂಡು, ನಾಗರಿಕ ನರಪ್ರಾಣಿಯ ನಿಷ್ಕರುಣ ಕಥನ, ಬದುಕನ್ನು ಪ್ರೀತಿಸುವ ಲೈಮಲೈಟ್, ಆಸೆ ಸಂಕಲ್ಪಗಳ ಅನ್ಯೋನ್ಯತೆ, ಅನಿತ್ಯತೆಯ ಚಿತ್ರಕ್ಕೆ ಅಮರತ್ವದ ಚೌಕಟ್ಟು, ಬದುಕಿನ ಇಬ್ಬದಿಗಳು, ದಾರಿ ಗುರಿ ಸಾಫಲ್ಯ, ಮಾನವರ ಮಥನಿಸಬೇಕೋ ದಿನನಿತ್ಯ, ತಾರತಮ್ಯ ವಿವೇಕದ ಅಗತ್ಯ, ಯೋವೈ ಭೂಮಾ ತತ್ಸುಖಂ, ಮೊದಲಾದವರಲ್ಲಿ ಮೊದಲಿಗರು, ಅಮಾನವೀಯ ಮಾನವರು, ಕಿಡಿ:ಕಾಳ್ಗಿಚ್ಚಿಗೆ ಮುನ್ನುಡಿ, ಮನಸಾಕ್ಷಿಯ ಮಾರ್ಗಸ್ಥರು, ಹುದ್ದೆ ಮುದ್ದೆ ನಿದ್ದೆ: ಬದುಕು ಇಷ್ಟೇನೇ ಪೆದ್ದೆ? ಇಂತಹ ಹಲವಾರು ವೈವಿಧ್ಯಮಯ ವಿಷಯಗಳ ಬಗೆಗೆ ತಮ್ಮ ಮಾಂತ್ರಿಕ ಶಕ್ತಿಯ ಬರವಣಿಗೆಯಿಂದ ಓದುಗರನ್ನು ಮಂತ್ರಮುಗ್ಧರನ್ನಾಗಿಸುತ್ತಾರೆ.

ಜೀವನದ ಅನೇಕ ಆಗುಹೋಗುಗಳನ್ನು ಸನ್ನಿವೇಶ ಸಂದರ್ಭಗಳನ್ನು ಮನೋಜ್ಞವಾಗಿ ಹಿಡಿದು ಅದಕ್ಕೆ ವ್ಯವಸ್ಥಿತ ರೂಪದ ಚೌಕಟ್ಟನ್ನು ಒದಗಿಸುತ್ತಾರೆ. ತೂಕಬದ್ಧವಾದ ನಿಸಾರರ ಬರವಣಿಗೆಯು ತಾವು ಕಂಡುಂಡ ಅನೇಕ ಅನುಭವ ಸಂಗತಿಗಳನ್ನು ಬಚ್ಚಿಡುತ್ತಾ ಅವರು ಸಾಗಿದರೂ ಸಹ ಆ ಸಂದರ್ಭಗಳು ಎಲ್ಲರ ಜೀವನದಲ್ಲಿ ಬರುವಂತಹವೇ ಆಗಿರುತ್ತವೆ. ಹೀಗಾಗಿ ಒಬ್ಬ ಬರಹಗಾರ ಸಾರ್ವತ್ರಿಕ ಹಾಗೂ ಸಾರ್ವಕಾಲಿಕ ಸತ್ಯ ವಿಚಾರಗಳೆಡೆಗೆ ತನ್ನ ಒಲವನ್ನು ತೋರಿದಾಗ ಅತ್ಯಂತ ಪ್ರಭಾವಶಾಲಿಯಾಗಿ ಅವನ ಬರಹಗಳು ಓದುಗರ ಮೇಲೆ ಅಚ್ಚಳಿಯದ ಮುದ್ರೆಯನ್ನು, ಛಾಪನ್ನು ಮೂಡಿಸುತ್ತವೆ.

**ಅನುಭವ**

ಮನುಷ್ಯನ ಜೀವನದಲ್ಲಿ ಅನೇಕ ಅನುಭವಗಳು ತಮಗೆ ಅರಿವಿಲ್ಲದೆ ಆಕಸ್ಮಿಕವಾಗಿಯೇ ಘಟಿಸಿ ಆ ವ್ಯಕ್ತಿಯ ಕಣ್ತೆರೆಸುವ ಸನ್ನಿವೇಶಗಳಾಗಿಯೂ ಸಹ ರೂಪುಗೊಳ್ಳಬಹುದು. ಆಗ ಅವರಿಗೆ ಸತ್ಯದ ಅರಿವಾಗುತ್ತದೆ. ಈ ಸಂದರ್ಭದ

ಕುರಿತಾಗಿಯೇ ದೇವರು ಹಾಗೂ ಸೃಷ್ಟಿಯ ಸಂಬಂಧದ ಬಗೆಗಿನ ಚಿಕ್ಕ ತಮಾಷೆಯ ಕಥೆಯನ್ನು ನಿಸಾರರು ಇಲ್ಲಿ ಹೇಳಿದ್ದಾರೆ. ಆ ಚಿಕ್ಕ ಕಥೆ ಹೀಗಿದೆ.

ಒಮ್ಮೆ ದೇವರ ಬಗೆಗೆ, ಈ ಸೃಷ್ಟಿ ನಿಯಮದ ಬಗೆಗೆ ವಿಶ್ವಾಸವಿರದ ವ್ಯಕ್ತಿಯೊಬ್ಬ ಆಸ್ತಿಕರನ್ನು ಟೀಕಿಸುತ್ತಾ ಕೀಟಲೆ ಮಾಡಿ ಗೋಳಾಡಿಸುತ್ತಿದ್ದ.ಈ ಪ್ರಪಂಚವನ್ನು ಕೆಲವು ನಿಯಮಗಳಿಗೆ ಅನುಸಾರವಾಗಿ ನಿಮ್ಮ ದೇವರು ಸೃಷ್ಟಿಸಿದ್ದಾನೆ, ಮಾಡಿದ್ದಾನೆ ಎನ್ನುತ್ತೀರಿ ಆದರೆ ಈ ಸೃಷ್ಟಿಯಲ್ಲಿ ಒಂದು ವ್ಯವಸ್ಥಿತ ಕ್ರಮ, ಔಚಿತ್ಯ, ಅನೌಚಿತ್ಯ ಪ್ರಜ್ಞೆ, ಅರ್ಥವಂತಿಕೆ ಇದೆಯೇ? ಎಂದು ದಬಾಯಿಸುತ್ತಾ, ಕೋಮಲವಾದ ಕುಂಬಳದ ಬಳ್ಳಿಗೆ ಪ್ರಮಾಣ ಮೀರಿದ ದೊಡ್ಡ ಗಾತ್ರದ ಕಾಯಿಗಳನ್ನು, ಅದೇ ಹತ್ತು ಕಡೆ ಬಿಳಲುಗಳನ್ನು ಬಿಟ್ಟು ವಿಸ್ತಾರವಾಗಿ ಹಬ್ಬಿ ಎತ್ತರಕ್ಕೆ ಬೆಳೆದ ಬಲಿಷ್ಟ ಆಲದ ಮರಕ್ಕೆ ಗಜ್ಜುಗಕ್ಕಿಂತ ಕಿರಿಯ ಕಾಯಿಗಳನ್ನು ನಿಮ್ಮ ದೇವರು ನೀಡಿರುವುದು ಅಸಂಬದ್ಧವಲ್ಲವೇ? ಎಂದು ತನ್ನ ತರ್ಕದ ಆಧಾರದಿಂದ ಲೇವಡಿ ಮಾಡಿದ. ಆಗ ಆಸ್ತಿಕನು ಧೈರ್ಯಗೆಡದೆ ಹೀಗೆ ಉತ್ತರಿಸಿದ: 'ಸತ್ಯ, ನಿನ್ನ ಸ್ವಂತ ಅನುಭವಕ್ಕೆ ಗೋಚರಿಸಿ ಒಂದಲ್ಲ ಒಂದು ದಿನ ನಿನಗೆ ಜ್ಞಾನೋದಯವಾಗುತ್ತದೆ' ಎನ್ನುತ್ತಿದ್ದ. ಹೀಗೇ ಕೆಲವು ದಿನಗಳು ಸಾಗಿದವು.

ಮುಂದೊಂದು ದಿನ ಆ ನಾಸ್ತಿಕನು ತನ್ನ ಕೆಲಸದ ನಿಮಿತ್ತವಾಗಿ ದೂರದ ಊರಿಗೆ ಹೋಗಬೇಕಾದಂತಹ ಸಂದರ್ಭ ಬಂತು. ಊರಿಗೆ ಪ್ರಯಾಣ ನಸುಕಿನಲ್ಲಿಯೇ ಆರಂಭಿಸಿದ ಅವನು ಸೂರ್ಯ ನೆತ್ತಿಗೇರಿ ಬಿಸಿಲಾಗುವವರೆಗೂ ಎಡೆಬಿಡದೆ ನಡೆದನು. ಬಿಸಿಲಿನ ತಾಪ ಹೆಚ್ಚಾದ್ದರಿಂದ ಅವನಿಗೆ ದಣಿವಾಗಿ, ಮಂಪರು ಬಂದಂತಾಯ್ತು.ಜೊತೆಗೆ ತಂದಿದ್ದ ಬುತ್ತಿಯನ್ನು ಉಂಡು ದಾರಿಯಲ್ಲಿದ್ದ ಆಲದ ಮರದ ನೆರಳಿನಲ್ಲಿ ಮಲಗಿದ. ಜೊಂಪು ಹತ್ತಿತ್ತು, ಆಗ ಸ್ವಲ್ಪ ಸಮಯದಲ್ಲಿಯೇ ಅವನ ಮುಖದ ಮೇಲೆ ಏನೋ ಬಿದ್ದಂತಾಗಿ, ರಪ್ಪೆಂದು ಬಡಿದು ಅವನಿಗೆ ಎಚ್ಚರವಾಯಿತು. ಆಗ ಆ ನಾಸ್ತಿಕನಿಗೆ ತೀರಾ ಪೆಟ್ಟಾಗದಿದ್ದರೂ ಅದರ ಭಾರ ಹಾಗೂ ನೋವಿನ ಅನುಭವವಾಗಿತ್ತು.ಆಗ ಬಡಿದದ್ದು ಏನೆಂದು ನೋಡಿದಾಗ ಮೇಲಿನಿಂದ ಆಲದ ಮರದ ಚಿಕ್ಕ ಕಾಯಿಯೊಂದು ಬಿದ್ದಿದ್ದು ಗೊತ್ತಾಯಿತು. ಆಗ ಆ ವ್ಯಕ್ತಿಗೆ ಜ್ಞಾನೋದಯವಾದಂತಾಗಿ ಏನೋ ಹೊಳೆದಂತಾಗಿ ಮೊದಲು ಗೇಲಿ ಮಾಡಿದ ಹಿರಿಯರಲ್ಲಿಗೆ ಹೋದನು.ಆ ಹಿರಿಯರಲ್ಲಿಗೆ ಹೋಗಿ ತಾನು ಆಡಿದ ಮಾತುಗಳಿಗೆ ಕ್ಷಮೆಯನ್ನು ಕೇಳಿದನು. ಸ್ವಾಮಿ ದೇವರನ್ನು ನಿಂದಿಸಿ, ನಿಮ್ಮನ್ನು

ಗೋಳಾಡಿಸಿ ನಾನು ಪ್ರಮಾದವೆಸಗಿದೆ.ದೈವದೃಷ್ಟಿ ಅಪಾರ ಹಾಗೂ ಅದ್ಭುತವೆನ್ನುತ್ತಾ ಸೃಷ್ಟಿಯಲ್ಲಿ ಒಂದು ಕ್ರಮ, ವ್ಯವಸ್ಥೆ ಇಲ್ಲವೆಂದು ಭಾವಿಸಿದೆ. ಆದರೆ ಅದು ಇರುವದಷ್ಟೆ ಅಲ್ಲ ಎಷ್ಟು ಔಚಿತ್ಯಪೂರ್ಣ ಎನ್ನುವ ಸತ್ಯ ಇವೊತ್ತು ನನ್ನ ಸ್ವಂತ ಅನುಭವಕ್ಕೆ ಬಂತು" ಎನ್ನುತ್ತಾನೆ.

ಆ ನಾಸ್ತಿಕ ತನಗಾದ ಅನುಭವವನ್ನು ವಿವರಿಸುತ್ತಾ 'ಆ ಆಲದಮರದ ಎತ್ತರ, ಗಾತ್ರಗಳಿಗೆ ತಕ್ಕ ಕಾಯಿಗಳನ್ನು ಆ ಭಗವಂತ ನೀಡಿದ್ದರೆ, ನನ್ನ ಕಥೆ ಅಲ್ಲಿಯೇ ಮುಗಿದು ಹೋಗುತ್ತಿತ್ತು. ನಿಮ್ಮಲ್ಲಿ ಹೀಗೆ ಬಂದು ಹೇಳುವದೂ ಸಹ ನನ್ನಿಂದ ಸಾಧ್ಯವಾಗುತ್ತಿರಲಿಲ್ಲ ದೇವರು ದಯಾಮಯ, ಅವನ ವಿಧಿ ವಿಧಾನಗಳೂ ನಿಗೂಢ!ಎನ್ನುತ್ತಾನೆ.

ಹೀಗೆ ಅನುಭವವು ಕೆಲವೊಮ್ಮೆ ತೀವ್ರವಾಗಿ ಘಟಿಸಿದಾಗಲೇ ಅನುಭವಕ್ಕೆ ಬರುವಂತಹ ಹಲವಾರು ಸಂದರ್ಭಗಳು ಜೀವನದಲ್ಲಿ ಆಗುತ್ತಲೇ ಇರುತ್ತದೆ.ಈ ಅನುಭವಗಳಿಗೆ ಕೊನೆ ಎಂಬುದೇ ಇಲ್ಲ. ಜೀವನವೇ ಅನುಭವಗಳ ಆಗರ.ಇಂತಹ ಅನೇಕ ತಾತ್ವಿಕ ವಿಚಾರಗಳಿಗೆ ನಿಸಾರ್‌ರ ಬರಹದಲ್ಲಿ ಕೊರತೆಯಿಲ್ಲ. ಇಲ್ಲಿ ಪ್ರಾತಿನಿಧಿಕವಾಗಿ ಅವರ ಒಂದು ತಾತ್ವಿಕ ಸಂದರ್ಭವನ್ನಷ್ಟೇ ವಿವರಿಸಲಾಗಿದೆ. ಅವರ ಬರವಣಿಗೆಯ ಸಾಮರ್ಥ್ಯ ಅಸಾಮಾನ್ಯವಾದದ್ದು, ಅಪ್ರತಿಮವಾದದ್ದು. ಅವರ ನಿರೂಪಣಾ ತಂತ್ರ, ಅತ್ಯಂತ ಮನೋಹರ ಹಾಗೂ ಆಕರ್ಷಕ ಶೈಲಿಯಿಂದ ಕೂಡಿದ್ದಾಗಿದೆ.

### 5.4 ಧಾರ್ಮಿಕ, ಪೌರಾಣಿಕ ಸಂಬಂಧಿ ವಿಷಯಗಳ ಚಿಂತನೆ

ಒಬ್ಬ ಭೂವಿಜ್ಞಾನದ ಉಪನ್ಯಾಸಕರಾಗಿ ಕನ್ನಡ ಸಾಹಿತ್ಯದಲ್ಲಿ ಇಂತಹ ವೈವಿಧ್ಯಮಯ ವಿಷಯಗಳ ಕುರಿತಾಗಿ ಬರೆದಂತಹ ಅಪ್ರತಿಮ ಬರಹಗಾರರು ದೊರೆಯುವುದು ತೀರಾ ವಿರಳವೆಂದೇ ಹೇಳಬಹುದು.ಮನಸ್ಸಿದ್ದಲ್ಲಿ ಮಾರ್ಗವೆಂಬಂತೆ ನಿಸಾರ್‌ರವರು ಆದರದಿಂದ, ಆಸಕ್ತಿಯಿಂದ, ಭಕ್ತಿಯಿಂದ ಸರಸ್ವತಿ ದೇವಿಯನ್ನು ಒಲಿಸಿಕೊಂಡಂತಹ ಮಹಾನ್ ಸಾಧಕರು. ಹೀಗಾಗಿ ಅವರು ಬರೆಯುವಲ್ಲಿ, ಮಾತನಾಡುವಲ್ಲಿ ಯಾವುದೇ ಅನರ್ಥಕ್ಕೆಡೆಗೊಡದೆ ಅತ್ಯಂತ ಮಾರ್ಮಿಕವಾದ ಮಾತುಗಾರಿಕೆ ಹಾಗೂ ಬರಹದಲ್ಲಂತೂ ಎಂತಹವರನ್ನೂ ಸಹ ಅವರ ಲೇಖನಿ ಮೋಡಿ ಮಾಡುವಂತಹದ್ದು. ಅಂತಹ ಅದ್ಭುತವಾದ ಸಾಮರ್ಥ್ಯ ನಿಸಾರ್ ಅಹಮದ್‌ರವರ ಬರವಣಿಗೆಯಲ್ಲಡಗಿದೆ.

ಬರಹದ ಹಿಡಿತ ಯಾರೂ ಊಹಿಸಲೂ ಸಾಧ್ಯವಿರದಷ್ಟು ಸಮರ್ಥವಾದ ಬರವಣಿಗೆ ಅವರದಾಗಿದೆ.

ತಮ್ಮ ಬರವಣಿಗೆಯ ವ್ಯಾಪ್ತಿಯಲ್ಲಿ ಧಾರ್ಮಿಕ ಪೌರಾಣಿಕ, ಸಂಸ್ಕೃತಿ ಸಂಪ್ರದಾಯದಂತಹ ಕ್ಲಿಷ್ಟಮಯ ವಿಷಯಗಳ ಕುರಿತಾಗಿಯೂ ಸಹ ಬರೆಯುವಂತಹ ಅವರ ದಿಟ್ಟತನ ಮೆಚ್ಚಬಹುದು. ಅವರು ಬರೆದಿರುವಂತಹ ಧಾರ್ಮಿಕ, ಪೌರಾಣಿಕ ಸಂಬಂಧಿ ಚಿಂತನೆಗಳಲ್ಲಿ ಸಾತ್ವಿಕ ದೈವೀ ಸ್ವರೂಪಿ ಸರಸ್ವತಿ, ಮಠಾಧೀಶರ ಮನೋಗತಗಳಿಗೆ ಸ್ವಾನುಭವದ ಸಿಂಧುತ್ವ, ಕನ್ನಡದ ನುಡಿ ಮುಡಿಗೆ ಕುರ್‌ಆನ್‌ನ ಸಿರಿ ಕೊಡುಗೆ, ಇಸ್ಲಾಮೀ ಆಧ್ಯಾತ್ಮದ ಸೀಮಾ ಸಾಧಕರು: ಸೂಫಿಗಳು, ಮುಳ್ಳಿನ ಮಕುಟದ ಮಸೀಹ, ಜೀವನ ಚರಿತ್ರೆಗಳಲ್ಲಿ ಕಳಶಪ್ರಾಯ, ಪ್ರವಾದಿವರ್ಯರ ಪ್ರವಚನದ ಪ್ರಜ್ವಲ ವಜ್ರಗಳು: ಹದೀಸ್ ಹೀಗೆ ವೈವಿಧ್ಯಮಯವಾದ ವಿಷಯಗಳ ಕುರಿತಾಗಿ ಪ್ರತಿಭಾವಂತಿಕೆಯಿಂದ ಬೆಳಕು ಚೆಲ್ಲಿರುವದು ಅವರ ಬರಹಗಳಲ್ಲಿ ಕಾಣಬಹುದು. ಅವರ ಬರವಣಿಗೆಯ ಹಿಡಿತ ಓದುಗರನ್ನು ಬೆರಗುಗೊಳಿಸುವಂಥದ್ದು.

**ಸಾತ್ವಿಕ ದೈವೀಸ್ವರೂಪಿ ಸರಸ್ವತಿ**

ವಿದ್ಯಾಧಿದೇವತೆ, ಜ್ಞಾನದ ಆರಾಧ್ಯದೇವಿಯಾದಂತಹ ಸರಸ್ವತಿ ದೇವಿಯ ಕುರಿತಾಗಿ ಅತ್ಯಂತ ಭಕ್ತಿಯಿಂದ, ಪೂಜ್ಯತೆಯಿಂದ ಕಂಡಂತಹ ನಿಸಾರ್ ಅಹಮದ್‌ರವರು ತುಂಬಾ ಮನೋಜ್ಞವಾಗಿ ಆರಾಧಿಸಿದ್ದಾರೆ. ವಾಗ್ದೇವಿಯ ಬಗೆಗೆ ತಮ್ಮ ಭಕ್ತಿ ಆದರಗಳಿಂದ ಸ್ತುತಿಸಿದ, ನೆನೆದಂತಹ ಹಲವಾರು ಮಹಾನ್ ಕವಿಗಳು, ಲಾಕ್ಷಣಿಕರು ಆರಾಧಿಸಿದಂತಹ, ಕಂಡಂತಹ ಬಗೆಯನ್ನು ನಿಸಾರ್‌ರವರು ಅತ್ಯಂತ ಅನುಪಮವಾಗಿ ತಮ್ಮ ಬರಹದಲ್ಲಿ ವಿವರಿಸಿದ್ದಾರೆ.

ಜ್ಞಾನ, ವಿದ್ಯೆ, ಸಕಲ ಕಲೆಗಳ ದಿವ್ಯಸ್ಫೂರ್ತಿ ಶಕ್ತಿಯಾದಂತಹ ಸರಸ್ವತಿ ದೇವಿಯ ಬಗೆಗೆ ಬರೆದಂತಹ ಸ್ತುತಿ ವಾಕ್ಯಗಳು. ಕೃತಿಗಳು ಹಾಗೂ ವಿವಿಧ ಧರ್ಮದಲ್ಲಿ ಸರಸ್ವತಿ ದೇವಿಯನ್ನು ಕಂಡ ಬಗೆಯನ್ನು ಅರ್ಥಗರ್ಭಿತವಾಗಿ ವಿವರಿಸಿದ್ದಾರೆ.ವೇದಗಳ ಕಾಲದಿಂದ ಆ ದೇವಿಯ ಇರುವಿಕೆ ಹಾಗೂ ನದಿಗಳಿಗೆ ಅವರ ಹೆಸರು ಬಂದ ಬಗೆಯನ್ನು ತೂಕಬದ್ಧವಾಗಿ ನಿಸಾರರು ಪರಿಚಯಿಸುತ್ತಾರೆ. ವೇದ, ಪುರಾಣಗಳಲ್ಲಿ ಸರಸ್ವತಿ ದೇವಿಯ ಸ್ಥಾನ ಹಾಗೂ ಅವತಾರಗಳ ಕುರಿತಾಗಿ ತುಂಬಾ ಮನೋಜ್ಞವಾಗಿ ವೈವಿಧ್ಯಮಯ ಆಧಾರಗಳೊಂದಿಗೆ ನಿಸಾರರು ಸಾದರಪಡಿಸುತ್ತಾ ವಿನೂತನ ಮಾಹಿತಿಗಳನ್ನು,

ಅನೇಕ ಉಪಯುಕ್ತ ವಿವರಗಳನ್ನು ನೀಡುತ್ತಾರೆ.ಸರಸ್ವತಿ ದೇವಿ ಕಾಲ ಕಾಲಕ್ಕೆ ತಳೆದ ರೂಪಗಳು, ನೀಡಿದ ಅಭಯಗಳು ಹಲವಾರು.ಅಂತಹ ಅನೇಕ ಮಹತ್ವದ ಘಟನೆಗಳನ್ನು ತಮ್ಮ ಸಾಮರ್ಥ್ಯಕ್ಕೂ ಮೀರಿ ತಿಳಿಸುವ ನಿಸಾರರು ದೈತ್ಯ ಪ್ರತಿಭೆ ಎಂತಹವರನ್ನೂ ಆಶ್ಚರ್ಯಚಕಿತರನ್ನಾಗಿ ಮಾಡುತ್ತದೆ.ಸರಸ್ವತಿ ದೇವಿಯ ಕುರಿತಾಗಿ ಅವರು ಸಂಗ್ರಹಿಸಿದ ಮಾಹಿತಿಗಳು, ನೀಡಿದ ಆಧಾರಗಳು, ವಿಷಯದ ನಿರೂಪಣೆ ಅದ್ಭುತ ರೀತಿಯಿಂದ ಮೂಡಿಬಂದು ಮಂತ್ರಮುಗ್ಧರನ್ನಾಗಿಸುತ್ತದೆ.

ವಾಗ್ದೇವಿ, ವೀಣಾಪಾಣಿ, ಶಾರದೆ, ಬ್ರಹ್ಮನರಾಣಿ, ಭಾವಗಂಗಾವೇಣಿಯಾದಂತಹ ಸರಸ್ವತಿ ದೇವಿಯ ಕುರಿತಾಗಿ ಅನೇಕ ಕವಿಗಳು ಅತ್ಯಂತ ಭಕ್ತಿಯಿಂದ ಆರಾಧಿಸಿದ್ದಾರೆ, ಸ್ತುತಿಸಿದ್ದಾರೆ.ಅವಳ ಮಹಿಮೆಯ ಅಗಾಧತೆಯ ಬಗ್ಗೆ ಕೊಂಡಾಡಿದ್ದಾರೆ. ಅವರಲ್ಲಿ ರನ್ನ, ನಾಗವರ್ಮ, ಕೇಶಿರಾಜ, ಕುವೆಂಪು, ಬೇಂದ್ರೆ, ಡಿ.ವಿ.ಜಿ., ಜಿ.ಪಿ.ರಾಜರತ್ನಂ, ಪು.ತಿ.ನರಸಿಂಹಾಚಾರ್ ಮುಂತಾದವರು. ಇಂತಹ ಮಹಾ ಕವಿಗಳು ಸರಸ್ವತಿ ದೇವಿಯ ಬಗೆಗೆ ಸ್ತುತಿಸಿರುವ ರೀತಿಯನ್ನು ನಿಸಾರರು ತಮ್ಮ ಬರಹದಲ್ಲಿ ಅತ್ಯಂತ ಸಮರ್ಪಕವಾಗಿ ಉದಾಹರಿಸಿದ್ದಾರೆ. ಈ ಕವಿಗಳ ವಾಕ್ಯಗಳ ಬಳಕೆಯಿಂದ ನಿಸಾರರ ಬರಹಕ್ಕೆ ಸಮರ್ಥವಾದ ಪದಬಂಧಗಳ ಜೋಡಣೆಯಿಂದ ಬರಹಕ್ಕೆ ಹೆಚ್ಚಿನ ಗಟ್ಟಿತನ ಮೂಡಿಬಂದಿದೆ. ಸರಸ್ವತಿ ದೇವಿಯ ಬಗೆಗಿನ ಹಲವಾರು ಅಭಿಪ್ರಾಯಗಳನ್ನು ಇಲ್ಲಿ ಉಲ್ಲೇಖಿಸಿ ಬರೆದಿದ್ದಾರೆ.

ನಿಸಾರ್ ಅಹಮದ್‌ರವರು ಸರಸ್ವತಿ ದೇವಿಯ ಕುರತಾಗಿ ವಿಸ್ತಾರವಾದ ಮಾಹಿತಿಗಳನ್ನು ನೀಡುತ್ತಾರೆ. ಅವುಗಳಲ್ಲಿ ನದಿಗಳಿಗೆ ಸರಸ್ವತ ಎಂಬ ಹೆಸರು ಬಂದುದರ ಪ್ರಾಚೀನತೆ ಹಾಗೂ ಅದರ ಹಿಂದಿನ ಕಥೆ ಉದಾಹರಿಸುತ್ತಾರೆ. ವೇದಗಳಲ್ಲಿ ಸರಸ್ತತಿಯ ಇರುವಿಕೆ ಹಾಗೂ ತೈತ್ತರೀಯ ಬ್ರಾಹ್ಮಣದಲ್ಲಿ ಸರಸ್ವತಿಯ ಉಲ್ಲೇಖ, ಪುರಾಣಗಳಲ್ಲಿ ಬರುವಂತಹ ಸಂದರ್ಭಗಳು, ಜೈನಧರ್ಮದಲ್ಲಿ ಬರುವಂತಹ ಸರಸ್ವತಿಯ ವಿಶಿಷ್ಟ ರೂಪಗಳನ್ನು ಉದಾಹರಿಸಿದ್ದಾರೆ. ಸರಸ್ವತಿ ದೇವಿಯು ವಿವಿಧ ರೂಪಗಳಲ್ಲಿ ತೋರುವ ರೀತಿಯನ್ನು ಅವಳ ಮಹಿಮೆಯನ್ನು ಈ ರೀತಿಯಾಗಿ ಉದಾಹರಿಸಿದ್ದಾರೆ– "ಸೃಷ್ಟಿಕರ್ತ ಬ್ರಹ್ಮ ವೇದಗಳನ್ನು ಪ್ರತಿನಧಿಸಿದರೆ, ಸರಸ್ವತಿ ಅವುಗಳ ಅರ್ಥ ಹಾಗೂ ಅಂತಸ್ಸತ್ವವನ್ನು ಸಂಕೇತಿಸುತ್ತಾಳೆ. ಸಾಕ್ಷಾತ್ ವೇದಮಾತೆಯೆಂದೂ ಸ್ತುತಿಸಲ್ಪಟ್ಟಿದ್ದಾಳೆ. ಅಷ್ಟೇ ಏಕೆ, ಸೃಷ್ಟಿಮಾತೆಯೆಂದೂ ಪರಿಗಣಿಸಲ್ಪಟ್ಟಿದ್ದಾಳೆ.

ಲೌಕಿಕ, ಆಧ್ಯಾತ್ಮಿಕ, ಆಮುಷ್ಮಿಕ ಮೊದಲಾದ ಸಕಲ ಜ್ಞಾನಗಳೂ ಅವರ ಬಳುವಳಿಯೇ ತ್ರಿಮೂರ್ತಿಗಳಲ್ಲಿ ಶಿವನ ಶಕ್ತಿ ಸ್ವರೂಪವಾಗಿ ಪಾರ್ವತಿಯನ್ನು, ವಿಷ್ಣುವಿನ ಶಕ್ತಿಯಾಗಿ ಲಕ್ಷ್ಮಿಯನ್ನು ಮತ್ತು ಬ್ರಹ್ಮನ ಶಕ್ತಿ ಸ್ವರೂಪವಾಗಿ ಸರಸ್ವತಿಯನ್ನು ಗುರುತಿಸಲಾಯಿತು.ಇದು ಕ್ರಮೇಣ ಕಲ್ಪನೆ; ತಾಂತ್ರಿಕ ಪದ್ಧತಿಯ ದೇಣಿಗೆ. ಫಲವತ್ತತೆ ಮತ್ತು ಅಂತ:ಸಿದ್ಧಿಯನ್ನು ನೆರವೇರಿಸುವ ದೇವತೆಯಾಗಿ ಸಹ ಸರಸ್ವತಿಯ ಕೀರ್ತಿಯುಂಟು.." (ನಿಸಾರ್:2002:276) ನಿಸಾರ್‌ರವರಿಗೆ ಹೀಗೆ ಸರಸ್ವತಿ ದೇವಿಯ ಮಹಿಮೆಯ ಕುರಿತಾಗಿ ಹಲವಾರು ಆಧಾರಗಳನ್ನು, ಉದಾಹರಣೆಗಳನ್ನು ನೀಡುತ್ತಾ ಉಪಯುಕ್ತ ಮಾಹಿತಿಯನ್ನು ನೀಡಿದ್ದಾರೆ.

ಸರಸ್ವತಿ ದೇವಿಯ ಕುರಿತಾದ ನಿಸಾರ್ ಅಹಮದ್‌ರವರ ಲೇಖನವು ಅಪಾರವಾದ ಮಾಹಿತಿಗಳನ್ನು ನೀಡುವ ಸಂಶೋಧನ ಲೇಖನವಾಗಿ ಮೂಡಿಬಂದಿದೆ. ಈ ಬರಹದ ಹಿಂದಿನ ಶ್ರಮ ಹಾಗೂ ಲೇಖಕರ ಪ್ರತಿಭೆ, ಹೃದಯ ವೈಶಾಲ್ಯತೆ, ವಿದ್ವತ್ತು ಅಮೋಘವಾದದ್ದು. ಹೀಗಾಗಿ ಇಂತಹ ಹಲವಾರು ಲೇಖನಗಳ ಮೂಲಕ ನಿಸಾರರು ಉಪಯುಕ್ತ ಮಾಹಿತಿಗಳನ್ನು ನೀಡುತ್ತಾ ಶ್ಲಾಘನೀಯರಾಗಿದ್ದಾರೆ.

**ಕನ್ನಡದ ನುಡಿ ಮುಡಿಗೆ ಕುರ್‌ಆನ್‌ನ ಸಿರಿ ಕೊಡುಗೆ**

ಪ್ರೊ. ಕೆ.ಎಸ್.ನಿಸಾರ್ ಅಹಮದ್‌ರವರ ವೈಚಾರಿಕ ಬರಹದ ಲೋಕ ಅದ್ಭುತವಾದದ್ದು. ಅವರ ವಿಶಾಲ ಮನೋಭಾವದ, ನಿಸ್ವಾರ್ಥ ಹೃದಯವಂತಿಕೆಯಿಂದ ಹೊರಹೊಮ್ಮುವ ಅವರ ಲೇಖನಗಳು ಅಪೂರ್ವವಾದವು. ಇಲ್ಲಿ ಇಸ್ಲಾಂ ಧರ್ಮದ ಪವಿತ್ರ ಗ್ರಂಥವಾದ 'ಕುರ್‌ಆನ್' ಎಂಬ ದೈವವಾಣಿ ಗ್ರಂಥವು ಕನ್ನಡಕ್ಕೆ ಅನುವಾದಗೊಂಡು ಕನ್ನಡ ನುಡಿಯ ಮುಡಿಗೆ ಸಿರಿಯಾಗಿ ಶೋಭಿಸಿರುವ ಸಂಗತಿ ಪ್ರಸ್ತುತ ಲೇಖನದಲ್ಲಿ ವಿವರಿಸಿದ್ದಾರೆ. ಇಸ್ಲಾಂ ಧರ್ಮ ಸಂದೇಶಗಳ ಉದಾತ್ತ ಗ್ರಂಥವಾದ 'ಕುರ್‌ಆನ್' ಎಂಬ ಪವಿತ್ರ ಗಂಥ ಕನ್ನಡಕ್ಕೆ ಅನುವಾದಗೊಂಡು ಅನ್ಯ ಧರ್ಮೀಯರಿಗೆ ಪವಿತ್ರ ಸಂದೇಶಗಳನ್ನು ಅರಿತುಕೊಳ್ಳಲು ಮಹತ್ವದ ಸಾಧನೆಗೈದಿದೆ.ಇಂತಹ ಅಪೂರ್ವ ಸ್ತುತ್ಯಾರ್ಹ ಕಾರ್ಯದಿಂದ ಪವಿತ್ರ ಸಂದೇಶಗಳ ಸಾರವನ್ನು ಕನ್ನಡ ಭಾಷೆಯಲ್ಲಿ ಓದಿ ತಿಳಿದುಕೊಳ್ಳಲು ಮಹತ್ವದ ಮೈಲಿಗಲ್ಲಾಗಿ ಬಂದ ಕನ್ನಡದ ಅನುವಾದ ಕೃತಿಯ ಬಗೆಗೆ ಅತ್ಯಂತ ಹೆಮ್ಮೆಯಿಂದ ವಿಶಾಲ ಭಾವದಿಂದ ನಿಸಾರರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಕನ್ನಡಕ್ಕೆ ಅನುವಾದಗೊಂಡು ವಿಭಿನ್ನ ಧರ್ಮೀಯರಿಗೆ ಇಸ್ಲಾಂ ಧರ್ಮದ ದಿವ್ಯ ಸಂದೇಶಗಳನ್ನು ಅರಿತುಕೊಳ್ಳಲು ಸಹಾಯಕವಾದ ಕನ್ನಡಾನುವಾದ ಕೃತಿಯ ಹೆಸರು 'ಕುರ್ ಆನ್ ವ್ಯಾಖ್ಯಾನ'.ಈ ಅಪೂರ್ವ ಕೃತಿ ಸಿರಿಗನ್ನಡದ ಗಣಿಗೆ ಸೇರ್ಪಡೆಯಾದ ಮಹತ್ವದ ಕೃತಿ. ಈ ಕೃತಿಯ ಬಿಡುಗಡೆಯಾದದ್ದು 1991ರ ಎಪ್ರೀಲ್ 21ರಂದು ಭಾನುವಾರ. ಬೆಂಗಳೂರಿನ ವುಡಲ್ಯಾಂಡ ಹೋಟೆಲಿನಲ್ಲಿ. ಈ ಕೃತಿ ಬಿಡುಗಡೆಯ ಮಹತ್ವದ ವೈಶಿಷ್ಟ್ಯವೆಂದರೆ ಆ ಸಮಾರಂಭಕ್ಕೆ ಅತಿಥಿಗಳಾಗಿದ್ದವರು ಡಾ.ಹಾ.ಮಾ.ನಾಯಕ, ಡಾ.ಸಿದ್ಧಯ್ಯ ಪುರಾಣಿಕ, ಡಾ.ಪು.ತಿ.ನ., ಬರಹದ ಲೇಖಕ, ಅಧ್ಯಕ್ಷತೆ ವಹಿಸಿಕೊಂಡಿದ್ದವರು ಅಖಿಲ ಭಾರತ ಜಮಾತೆ ಇಸ್ಲಾಮೀ ಅಧ್ಯಕ್ಷ ಮೌಲಾನಾ ಮಹಮ್ಮದ ಸಿರಾಜುಲ್ ಹಸನ್‌ರವರು ಕನ್ನಡಕ್ಕೆ ಅನುವಾದಗೊಂಡ 'ಕುರ್‌ಆನ್' ವ್ಯಾಖ್ಯಾನ ಮೂಲ ಕೃತಿಯ ಬಗೆಗೆ ನಿಸಾರ್‌ರವರು ವಿವರವಾದ ಮಾಹಿತಿಯನ್ನು ನೀಡಿದ್ದಾರೆ. ಅದರ ವಿವರ ಹೀಗಿದೆ.ಲೋಕ ವಿಖ್ಯಾತ ಇಸ್ಲಾಮೀ ತಾತ್ವಿಕರಾದಂತಹ ದಿವಂಗತ ಮೌಲಾನಾ ಸಯ್ಯದ್ ಅಬ್ದುಲ್ ಮೌದೂದಿಯವರು ಉರ್ದು ಭಾಷೆಯಲ್ಲಿ ಆರು ಸಂಪುಟಗಳಲ್ಲಿ ಕುರ್‌ಆನ್ ವ್ಯಾಖ್ಯಾನ ಮಾಡಿದವರು.ಆ ಕೃತಿಯ ಹೆಸರು 'ತಫ್‌ಹೀಮುಲ್ ಕುರ್ ಆನ್' ಇಂತಹ ಆರು ಸಂಪುಟದ ಕೃತಿಯನ್ನು 1991ರಲ್ಲಿ ಒಂದು ಸಂಪುಟವಾಗಿ ಸಂಕ್ಷೇಪ ಮಾಡಿದವರು ಮೌಲಾನಾ ಸದುದ್ದೀನ ಇಸ್ಲಾಹೀ ಎಂಬುವವರು ಅದನ್ನು 'ತಲ್‌ಖೀಸ್ ತಫ್ ಹೀಮುಲ್ ಕುರ್ ಆನ್' ಎಂದು ಕರೆದಿರುವರು.ಆ ಸಂಕ್ಷೇಪಿಕೆಯ ಪ್ರಥಮ ಭಾಗವೇ ಈ ಕನ್ನಡಕ್ಕೆ ಅನುವಾದವಾಗಿರುವ ಗ್ರಂಥ. ಅದನ್ನು ಕನ್ನಡ ಭಾಷೆಗೆ ಅನುವಾದಿಸಿದ ಮಹನೀಯರೆಂದರೆ ಉರ್ದು ಹಾಗೂ ಕನ್ನಡ ಭಾಷಾ ವಿಶಾರದರಾದಂತಹ ಸುಳ್ಯದ ಎಸ್.ಅಬ್ಬುಲ್ ಗಫಾರ್ ಸಾಹೇಬರು. ಇಂತಹ ಕೃತಿ ಕನ್ನಡಕ್ಕೆ ಅನುವಾದಗೊಂಡದ್ದು ಹೆಮ್ಮೆಯ ಸಂಗತಿಯಾಗಿದೆ. ಇದರ ಬಗೆಗೆ ನಿಸಾರ್ ಅಹಮದ್‌ರವರು ಉದಾತ್ತ ವಿಚಾರಗಳಿಂದ ಪವಿತ್ರ ಖುರಾನ್ ಬಗ್ಗೆ ಅಪೂರ್ವ ವಿಚಾರಗಳನ್ನು ತಿಳಿಸುತ್ತಾ ಶ್ಲಾಘನೀಯ ಕಾರ್ಯ ಮಾಡಿದ್ದಾರೆ.

ಪವಿತ್ರವಾದ ಕುರ್‌ಆನ್ ಕುರಿತಾಗಿ ಬರೆದು ನಿಸಾರ್ ಅಹಮದ್‌ರವರು ಆ ಗ್ರಂಥವು ಒಳಗೊಂಡ ಅಧ್ಯಾಯಗಳ ಸಾರ, ಉದ್ದೇಶಗಳನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾ ಕನ್ನಡದಲ್ಲಿ ರಚನೆಯಾದ ಆ ಕೃತಿಯ ಬಗೆಗೆ ಮಾಹಿತಿ ನೀಡಿ ಅತ್ಯಂತ ಅಭಿನಂದನಾರ್ಹ ಸಾಧನೆ ಮಾಡಿದ್ದಾರೆ. ನಿಸಾರರು ಉರ್ದುವಿನ

ಮೂಲ ಕೃತಿಯನ್ನು ಅನುವಾದಿಸಿದ ಮಹನೀಯರಷ್ಟೇ ಮಹತ್ಕಾರ್ಯವನ್ನು ಆ ಗ್ರಂಥದ ಸಾರವನ್ನು ಸಂಕ್ಷಿಪ್ತವಾಗಿ ವಿವರಿಸಿ ಶ್ಲಾಘನೀಯ ಕಾರ್ಯ ಮಾಡಿದ್ದಾರೆ. ಅವರ ಈ ಲೇಖನ ವೈಚಾರಿಕ ಲೋಕದ ಹೊಸ ದಿಕ್ಕನ್ನು ಓದುಗರಿಗೆ ತೋರಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಇಪ್ಪತ್ತು ಬೃಹತ್ ಅಧ್ಯಾಯಗಳ 'ಕುರ್‌ಆನ್' ಗ್ರಂಥವನ್ನು ಕರಿಯನ್ನು ಕನ್ನಡಿಯಲ್ಲಿ ಹಿಡಿಸಿದಂತೆ ತಮ್ಮ ಲೇಖನದಲ್ಲಿ ವಿದ್ವತ್ಪೂರ್ಣವಾಗಿ ನಿರೂಪಿಸಿದ್ದಾರೆ. ಕನ್ನಡ ಭಾಷೆಗೆ ತರ್ಜುಮೆಗೊಂಡ ಇಸ್ಲಾಂ ಧರ್ಮಗ್ರಂಥ ಪವಿತ್ರ 'ಕುರ್‌ಆನ್' ಕುರಿತಾಗಿ ಆ ಗ್ರಂಥದ ಸಾರವನ್ನು ಸಂಕ್ಷಿಪ್ತವಾಗಿ ತಮ್ಮ ಬರಹದಲ್ಲಿ ನಿರೂಪಿಸಿದ ಪ್ರೊ.ನಿಸಾರರು ಅಗ್ರಗಣ್ಯರು. ಆ ಗ್ರಂಥ ಕನ್ನಡಕ್ಕೆ ಅನುವಾದಗೊಂಡು ಕನ್ನಡದ ಮುಡಿಗೆ ಸಿರಿಯಾಗಿ ಕಂಗೊಳಿಸಿದ ಬಗೆಯನ್ನು ಮನೋಜ್ಞವಾಗಿ ವಿವರಿಸಿದ ಅವರ ರೀತಿ ಅದ್ಭುತವಾಗಿ ಮೂಡಿಬಂದಿದೆ.

## 5.5. ಪ್ರಕೃತಿ ಸಂಬಂಧಿ ಚಿಂತನೆ

ಕುವೆಂಪು, ಬೇಂದ್ರೆ, ವರ್ಡ್ಸ್‌ವರ್ತ, ಷೆಲ್ಲಿಯವರಂತೆ ನಿಸರ್ಗ ಪ್ರಿಯರಾದ ಪ್ರೊ.ನಿಸಾರ್ ಅಹಮದ್‌ರವರು ಪ್ರಕೃತಿಯ ಸೊಬಗನ್ನು ವಿಶಿಷ್ಟವಾಗಿ ವರ್ಣಿಸಿದವರು, ಆರಾಧಿಸಿದವರು. ನಿಸಾರರು ಪ್ರಕೃತಿಯಲ್ಲಿ ಕಾಣುವ ಬಗೆ ವಿಶಿಷ್ಟವಾದದ್ದು. ನಿಸರ್ಗದ ಸೊಬಗು ಸೌಂದರ್ಯ, ಅಗಾಧತೆ, ಸೃಷ್ಟಿಯ ಶಕ್ತಿ ಊಹೆಗೆ ಮೀರಿದ್ದು. ಆ ನಿಸರ್ಗದಲ್ಲಿ ಭಗವಂತನ ಸಾಕ್ಷಾತ್ಕಾರವನ್ನು ಕಾಣಬಹುದು. ಆ ಪ್ರಕೃತಿಯ ಸೊಬಗನ್ನು ಸವಿಯುವಂತಹ ಉದಾರ ಮನಸ್ಸಿನವರಿಗೆ ಮಾತ್ರ ಸಾಧ್ಯ. ಇಂದಿನ ಆಧುನಿಕ ಯುಗದಲ್ಲಿ ನಿಸರ್ಗಪ್ರೇಮ ಕಡಿಮೆಯಾಗುತ್ತಿರುವ ಬಗ್ಗೆ ಕವಿ ನಿಸಾರ್ ಅಹಮದ್‌ರವರು ಕಳವಳವನ್ನು ವ್ಯಕ್ತಪಡಿಸುತ್ತಾರೆ. ಕೃತಕ ಜೀವನದಿಂದಾಗಿ, ವಿಲಾಸಿ ವೈಭವ ಮನೋರಂಜನೆಯ ಗದ್ದಲಗಳಲ್ಲಿ ಪ್ರಕೃತಿಯ ಬಗೆಗೆ ನೆನಪು ಸಹ ಮಾಡದಷ್ಟು ಇಂದಿನ ಆಧುನಿಕ ಯುಗ ಸಾಗುತ್ತಿದೆ. ನಿಸಾರ್ ಅಹಮದರವರು ತಮ್ಮ ಅನೇಕ ಕವನಗಳಲ್ಲಿ ಪ್ರಕೃತಿಯ ಸೊಬಗನ್ನು ಅದರ ಶಕ್ತಿಯನ್ನು ಮನತುಂಬಿ ವರ್ಣಿಸಿದ್ದಾರೆ. ಮನುಷ್ಯನ ಜೀವನದಲ್ಲಿ ನಿಸರ್ಗದ ಪಾತ್ರ ಅತಿ ಮುಖ್ಯವಾಗಿದೆ. ಅವನ ಸ್ವಾಸ್ಥ್ಯ ಪ್ರಾಪ್ತಿಗೆ, ಮಾನಸಿಕ ಆರೋಗ್ಯಕ್ಕೆ ಶಾಂತಿಯ ನೆಮ್ಮದಿಗೆ ಹೂ ಗಿಡ ಮರ ಪಕ್ಷಿಗಳು ಸಂಜೀವಿನಿಯಾಗಿ ಕಾರ್ಯನಿರ್ವಹಿಸುತ್ತವೆ.

ನಿಸರ್ಗದ ನಂಟನ್ನು ಬೆಳೆಸಿಕೊಳ್ಳುವದರಿಂದ ಆಗುವ ಲಾಭಗಳು ಅಪಾರ ಜೀವನದ ಅನೇಕ ಲೋಕವ್ಯವಹಾರದಿಂದ ಜಂಜಾಟಗಳಿಂದ ದಿಗ್ಗೇಡಿಯಾಗಿ ಹೊಯ್ದಾಡುವ ಮನಸ್ಸನ್ನು ಕೇಂದ್ರೀಕರಿಸುವ ಶಕ್ತಿ ಈ ನಿಸರ್ಗದಲ್ಲಿದೆ. ಆರೋಗ್ಯಕ್ಕೆ ಆಹ್ಲಾದಕರ ಉಲ್ಲಾಸ ತರುತ್ತಾ ಜೀವನದಲ್ಲಿ ಉತ್ಸಾಹ, ಉಲ್ಲಾಸಗಳನ್ನು ತರುತ್ತದೆ. ಮಾನಸಿಕ ಶಾಂತಿ, ನೆಮ್ಮದಿ ಮೂಡಿಸುವಲ್ಲಿ ಸಹಕಾರಿಯಾಗಿರುತ್ತದೆ. ಈ ನಿಸರ್ಗಪ್ರಿಯತೆ, ಏಕಾಂತ ಪ್ರವೃತ್ತಿ ಕೇವಲ ಕವಿಗಳಿಗೆ, ಕಲಾವಿದರಿಗಷ್ಟೇ ಸೇರಿದ ಕೆಲಸವಲ್ಲ ಅಥವಾ ಕೆಲಸವಿಲ್ಲದೇ ಕಾಲಹರಣ ಮಾಡುವುದಕ್ಕಲ್ಲ. ಆ ಪ್ರಕೃತಿಯಿಂದ ಕಲಿಯುದಿದೆ.ಇಂದಿಗೂ ಸಹ ವಿದೇಶಗಳ್ಲಿ ವಾರವೆಲ್ಲಾ ದುಡಿದು ವಾರಾಂತ್ಯದಲ್ಲಿ ತಮ್ಮ ಹೆಂಡತಿ ಮಕ್ಕಳು, ಕುಟುಂಬದೊಂದಿಗೆ ಯಾವುದಾದರೊಂದು ಓಳ್ಳೆಯ ನಿಸರ್ಗತಾಣಕ್ಕೆ ಹೋಗಿ ಬರುವ ತಮ್ಮ ಮನಸ್ಸನ್ನು ಆ ತಾಣದಲ್ಲಿ ವಿಲೀನಗೊಳಿಸಿ ಹೊಸ ಉತ್ಸಾಹದಿಂದ ವಾಪಸಾಗುವ ಪದ್ಧತಿ ಇದೆ. ವಿನೂತನ ಉಲ್ಲಾಸವನ್ನು ಹುರುಪನ್ನು ತುಂಬಿಕೊಂಡು ಮತ್ತೆ ತಮ್ಮ ಕೆಲಸ ಕಾರ್ಯಗಳಲ್ಲಿ ತನ್ಮಯರಾಗುವರು. ಆದ್ದರಿಂದ ಪ್ರಕೃತಿ ಪ್ರೇಮ ಬೆಳೆಸಿಕೊಂಡು ಜೀವನಪೂರ್ಣ ಉಲ್ಲಾಸದಿಂದ ಇರುವಂತೆ ಸೂಚಿಸುತ್ತಾರೆ. ಮಾನವ ನಿಸರ್ಗದಿಂದ ಕಲಿಯುವಂತಹದ್ದು ಬಹಳಷ್ಟಿದೆ, ಪ್ರಕೃತಿಯೇ ದೇವರು, ಅದು ನಿತ್ಯ ನೂತನ, ನಿಸರ್ಗದ ಶಕ್ತಿ ಅದ್ಭುತ ಹಾಗೂ ಅಗಾಧ ರಮಣೀಯವಾದದ್ದು. ಅದರ ಸೊಬಗನ್ನು ಪ್ರತಿಯೊಬ್ಬರು ಸವಿಯುವ ಅಗತ್ಯತೆ ಮನಮುಟ್ಟುವಂತೆ ಲೇಖಕರು ಸೂಚಿಸಿರುವದು ಮನೋಜ್ಞಾವಾಗಿ ಮೂಡಿಬಂದಿದೆ.

## 5.6. ಪರಿಸರ ಸಂಬಂಧಿ ಚಿಂತನೆ

ಈ ಜಗತ್ತಿನಲ್ಲಿ ವಾಸಿಸುವ ಸಕಲ ಜೀವರಾಶಿಗಳಿಗೂ ಹಾಗೂ ಪರಿಸರಕ್ಕೂ ಇರುವ ಸಂಬಂಧ ಬಿಡಿಸಲಾರದ ಸಂಬಂಧ.ಮಾನವನೇ ಆಗಲಿ, ಉಳಿದ ಜೀವರಾಶಿಗಳೇ ಆಗಲಿ ಈ ಪರಿಸರ ಬಿಟ್ಟು ಬದುಕಲು, ಉಸಿರಾಡಲು ಸಾಧ್ಯವಿಲ್ಲ. ಸುತ್ತಲಿನ ಪರಿಸರವನ್ನು ಉತ್ತಮವಾಗಿಡುವದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ನಾವು ಪರಿಸರವನ್ನು ರಕ್ಷಿಸಿದರೆ ಪರಿಸರ ನಮ್ಮನ್ನು ರಕ್ಷಿಸುತ್ತದೆ. ಪರಿಸರ ಸಂರಕ್ಷಣೆ, ಅದರ ಇಂದಿನ ಸ್ಥಿತಿ ಕುರಿತು ಚರ್ಚಿಸಬೇಕಾದರೆ ಎದೆ ಝಿಲ್ಲೆನ್ನುತ್ತದೆ. ಅದಕ್ಕೆ ಕಾರಣ ಇಂದಿನ ಕಲುಷಿತಗೊಳ್ಳುತ್ತಿರುವ ಪರಿಸರ ವಿಕೋಪದತ್ತ ಸಾಗುತ್ತಿದೆ. ಆ ಪರಿಸರ ಮಾಲಿನ್ಯಕ್ಕೆ ಕಾರಣ ಪರಿಸರದಲ್ಲಿ ವಾಸಿಸುವ ಮಾನವರೇ. ಇಂತಹ ಪರಿಸರದ ಕುರಿತಾಗಿ ಅಪಾರ

ಅನುಭವದಾಳದಿಂದ ನಿಸಾರ್ ಅಹಮದ್‌ರವರು ಬಿಡಿ ಬಿಡಿಯಾಗಿ ತಮ್ಮ ವಿದ್ವತ್ಪೂರ್ಣ ಅನುಭವಗಳನ್ನು ಮಾಹಿತಿಗಳನ್ನು ಅರ್ಥಪೂರ್ಣವಾಗಿ ತಮ್ಮ ಬರಹದಲ್ಲಿ ನಿರೂಪಿಸಿದ್ದಾರೆ. ದಿನನಿತ್ಯ ಪರಿಸರ ಕಲುಷಿತಗೊಳ್ಳುತ್ತಾ ಯಾವ ದಿಕ್ಕಿಗೆ ಸಾಗಿದೆ, ಸಾಗುತ್ತಿದೆ ಎಂಬುದರ ಕುರಿತು ವಿಶೇಷ ಕಾಳಜಿಯಿಂದ ಆಧಾರಸಹಿತ ವಿವರಿಸಿದ್ದಾರೆ. ಈ ಪರಿಸರ ಮಾಲಿನ್ಯದಿಂದ ಸಂರಕ್ಷಿಸುವ ಕ್ರಮಗಳ ಕುರಿತಾಗಿಯೂ ಸಹ ಅವರು ಅಪೂರ್ವ ಸಲಹೆಗಳನ್ನು ನೀಡುತ್ತಾರೆ. ಮಾನವ ಆಧುನಿಕತೆಯ ಸೋಗಿನಲ್ಲಿ ಪರಿಸರದ ನಾಶಕ್ಕೆ ಹೇಗೆ ಕಾರಣನಾಗಿದ್ದಾನೆ ಎಂಬುದನ್ನು ಸೂಕ್ತವಾದ ಆಧಾರಗಳೊಂದಿಗೆ ಸಾದರಪಡಿಸುವ ಅವರ ಶೈಲಿ ಮನೋಜ್ಞವಾಗಿದೆ.

ಮನುಷ್ಯ ತನ್ನ ಸುಖಕ್ಕಾಗಿ, ಆನಂದಕ್ಕಾಗಿ, ಸ್ವಾರ್ಥಕ್ಕಾಗಿ ಸುಂದರವಾದ ಪರಿಸರವನ್ನು ಬಲಿ ತೆಗೆದುಕೊಳ್ಳುತ್ತಿದ್ದಾನೆ. ಗಿಡಮರಗಳನ್ನು ನಾಶಗೊಳಿಸಿ, ಕಾಂಕ್ರೀಟ್ ಕಾಡು ನಿರ್ಮಿಸುತ್ತಾ, ಸಾಲದ್ದಕ್ಕೆ ಪೆಟ್ರೋಲ್ ಡೀಸೆಲ್ ವಾಹನಗಳಿಂದ ಉಗುಳುವ ಹೊಗೆಯುಣಿಸುತ್ತಾ, ಫ್ಯಾಕ್ಟರಿಗಳ ತ್ಯಾಜ್ಯ ವಸ್ತುಗಳನ್ನು ನದಿಗಳಿಗೆ ಸೇರಿಸುತ್ತಾ, ನೀರು, ಆಮ್ಲಜನಕ ಸಿಗದಂತೆ ಮಾಡುತ್ತಿರುವದು ಪ್ರತಿದಿನವೂ ನಡೆಯುತ್ತಿದೆ. ಉತ್ಸವ ಸಮಾರಂಭ ಹಬ್ಬಹರಿದಿನಗಳಲ್ಲಿ ಅಗತ್ಯಕ್ಕಿಂತ ಹೆಚ್ಚಾಗಿ ಬಳಸುವ ನೀರು, ವಿದ್ಯುತ್ ಹಾಗೂ ಸುಂದರವಾಗಿ ಬೆಳೆದ ರೆಂಬೆ ಕೊಂಬೆಗಳನ್ನು ಚಪ್ಪರಕ್ಕಾಗಿ ಅಲಂಕಾರಕ್ಕಾಗಿ ತಂದು ನಂತರ ಬೀದಿಯಲ್ಲಿ ಬೀಸಾಡುವದು. ಇವು ಚಿಕ್ಕಪುಟ್ಟ ಪರಿಸರ ನಾಶಕ್ಕೆ ಕಾರಣಗಳು ಉದಾಹರಣೆಗಳು, ಇಂದಿನ ಯಾಂತ್ರಿಕ ಯುಗದಲ್ಲಿನ ಪರಿಸರ ಮಾಲಿನ್ಯದ ಕಾರಣಗಳ ಕುರಿತಾಗಿ ಲೇಖಕರು ವಿವರವಾಗಿ ಚರ್ಚಿಸಿದ್ದಾರೆ.ಇಂದು ಪರಿಸರ ಸಂರಕ್ಷಣೆಗಾಗಿ ಸಾಕಷ್ಟು ಜನ ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ. ಅಂಥವರಲ್ಲಿ ಇಲ್ಲಿ ಲೇಖಕರು ಮನಸ್ಸು ಮಾಡಿದರೆ ಎಂತಹ ಅದ್ಭುತ ಸೇವೆಯನ್ನು ಪರಿಸರಕ್ಕೆ ಸಲ್ಲಿಸಬಹುದು ಎಂಬುದಕ್ಕೆ ಅನೇಕ ಮರಗಳಿಗೆ ಸಾಕಿದಂತಹ ಸಾಲುಮರದ ತಿಮ್ಮಕ್ಕಳನ್ನು ಗುರುತಿಸಿದ್ದಾರೆ.ಇಂತಹ ಸಾಮಾನ್ಯ ಹೆಣ್ಣುಮಗಳೂ ಸಹ ಅನೇಕ ಮರಗಳನ್ನು ಬೆಳೆಸಿದ ರೀತಿ ಮನೋಜ್ಞವಾದದ್ದು. ಈ ಹೆಣ್ಣು ಮಗಳು ಮಾಗಡಿ ತಾಲ್ಲೂಕಿನಲ್ಲಿ ಬರುವ ಹುಲಿಕಲ್–ಕುದೂರು ರಸ್ತೆಯಲ್ಲಿ ಸುಮಾರು ಮೂರು ಕಿಲೋಮೀಟರ್‌ವರೆಗೆ ದಾರಿಯ ಎಡಬಲದಲ್ಲಿ 284 ಆಲದ ಸಸಿಗಳನ್ನು ನೆಟ್ಟು ದಿನನಿತ್ಯ ನೀರು ಹಾಕಿ ಬೆಳಸಿದ್ದಾಳೆ. ಜಲ್ಲಿ ಒಡೆಯುವ ಕೆಲಸದ ಈ ಸಾಮಾನ್ಯ ಹೆಣ್ಣುಮಗಳ ಈ ನಿಸ್ವಾರ್ಥ ಸೇವೆಯಿಂದ

ಹಾದಿಗರಿಗೆ ನೆರಳು, ಪಕ್ಷಿಗಳಿಗೆ ಆಹಾರ ಸಿಗುವಂತೆ ಮಾಡಿದ್ದಾಳೆ. ಪರಿಸರ ರಕ್ಷಣೆಗಾಗಿ ಪ್ರತಿಯೊಬ್ಬರೂ ಪ್ರಯತ್ನಿಸಬೇಕಾದ್ದು ಸರ್ವರ ಆದ್ಯತೆಯಾಗಬೇಕು ಏಕೆಂದರೆ ಭೂಮಿಯ ಮೇಲೆ ಕೆಲಕಾಲ ಇದ್ದು ವಾಸಿಸಿದ್ದಕ್ಕೆ ಅವರು ಕೊಡುವ ಅಲ್ಪ ಬಾಡಿಗೆಯಂತಾದರೂ ಸೇವೆ ಸಲ್ಲಿಸಬೇಕಾಗಿದೆ.

### 5.7. ವಿಜ್ಞಾನ ಸಂಬಂಧಿ ಚಿಂತನೆ

ಮೂಲತ: ಭೂ ವಿಜ್ಞಾನಿಯಾಗಿರುವಂತಂತಹ ಪ್ರೊ: ನಿಸಾರ್ ಅಹಮದ್‌ರವರು ತಮ್ಮ ಅದ್ಭುತವಾದ ಬರವಣಿಗೆಯಲ್ಲಿ ವಿಜ್ಞಾನವನ್ನು, ವೈಜ್ಞಾನಿಕ ಪದಗಳನ್ನು, ಇದಕ್ಕೆ ಸಂಬಂಧಪಟ್ಟ ಅನೇಕ ಮಹತ್ವದ ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಅವರ ಹಲವಾರು ಕವನಗಳಲ್ಲಿ ವಿಜ್ಞಾನದ ಪದಗಳನ್ನು ಉಲ್ಲೇಖಿಸಿ ಅರ್ಥವಂತಿಕೆಯನ್ನು ತಂದಿದಾರೆ. ಹಾಗೆಯೇ ತಮ್ಮ ಗದ್ಯ ಬರಹದಲ್ಲೂ ಸಹ ವಿಜ್ಞಾನಕ್ಕೆ ಸಂಬಂಧಪಟ್ಟಂತಹ ಅನೇಕ ಲೇಖನಗಳನ್ನು ರಚಿಸಿದ್ದಾರೆ. ಮಾನವನ ಜೀವನದಲ್ಲಿ ವಿಜ್ಞಾನ ವಹಿಸುವ ಪಾತ್ರ, ವಿಜ್ಞಾನದ ಸಾಧಕ–ಬಾಧಕಗಳು ಹೀಗೆ ಮುಂತಾದ ವಿಷಯಗಳೊಂದಿಗೆ ವಿವೇಚಿಸಿದ್ದಾರೆ. ಸಾಹಿತ್ಯದಲ್ಲಿಯೂ ವಿಜ್ಞಾನದಂತಹ ವಸ್ತುವನ್ನು ತಂದು ಯಶಸ್ಸು ಸಾಧಿಸಿರುವ ಲೇಖಕರು ವಿಶಿಷ್ಟವಾಗಿ ಬರೆದಿದ್ದಾರೆ.

ವಿಜ್ಞಾನ ಮತ್ತು ಸಾಹಿತ್ಯ ಸಂಬಂಧ ಅವುಗಳು ಹೇಗೆ ಒಂದಕ್ಕೊಂದು ಪೂರಕ ಹಾಗೂ ಭಿನ್ನವಾಗಿ ಹೇಗೆ ಕೆಲಸ ನಿರ್ವಹಿಸುತ್ತವೆ ಎಂಬ ವಿಷಯದ ಕುರಿತಾಗಿ ಮಾರ್ಮಿಕವಾದ ವಿವರಣೆ ನೀಡಿದ್ದಾರೆ. ಮನುಷ್ಯನ ಜೀವನದಲ್ಲಿ ವಿಜ್ಞಾನ ಹಾಗೂ ಸಾಹಿತ್ಯಗಳು ವಹಿಸುವ ಮಹತ್ವದ ಪಾತ್ರಗಳ ಬಗೆಗೂ ವಿವೇಚಿಸಿದ್ದಾರೆ. "ಮನುಷ್ಯನ ಹಲವು ತೆರನಾದ ಸಾಹಸಾಭಿವ್ಯಕ್ತಿಗಳಲ್ಲಿ ವಿಜ್ಞಾನ ಮತ್ತು ಸಾಹಿತ್ಯಗಳಿಗೆ ಮಹತ್ತರವಾದ ಸ್ಥಾನವಿದೆ. ಮನುಷ್ಯ ವ್ಯವಹಾರಕ್ಕಾಗಿ ಸೃಷ್ಟಿಸಿಕೊಂಡ ಭಾಷೆಯ ಮೂಲಕ ಮೈತಳೆಯುವ ಇವರೆಡೂ ಜೀವೋತ್ಕರ್ಷ ಸಾಧಕಗಳೇ. ವಿಜ್ಞಾನದ ಕಾರ್ಯಫಲ ಶೀಘ್ರ ಸ್ವರೂಪವಾದದ್ದು ಮತ್ತು ತತ್ಕಾಲೋಪಯೋಗಿ. ಸಾಹಿತ್ಯದ್ದು ಅತ್ವರಿತ ಹಾಗೂ ಸಾವಧಾನದ್ದು, ದೀರ್ಘ ಪ್ರಯೋಜನಕಾರಿಯಾದದ್ದು. ಪರಮಾಣು ಶಕ್ತಿ ಪ್ರಗತಿದಾಯಕವಾಗಿರುವಂತೆ, ಸಾರಸ್ವತ ಮಹತ್ಕೃತಿ ಮನುಷ್ಯನ ಪಾಲಿಗೆ ಶ್ರೇಯಸ್ಕರವಾದದ್ದು. ವಿಜ್ಞಾನಕ್ಕೆ ಭೌತ ಪ್ರಕೃತಿಯ ಮೂರ್ತ ವಸ್ತು ಹಾಗೂ ಸಂಗತಿಗಳು ಪರಮ ಲಕ್ಷವಾಗಿದ್ದರೆ, ಸಾಹಿತ್ಯಕ್ಕೆ ಮನುಷ್ಯನ ಅಂತ: ಪ್ರಪಂಚದ ಅಮೂರ್ತ ಮತ್ತು ಭಾವವೇದ್ಯ

ವಿಷಯಗಳು ಸೃಷ್ಟಿ ಸಾಮಗ್ರಿಯಾಗಿರುತ್ತದೆ. ಅದರ ಪರಿಧಿಗೆ ಧಾರ್ಮಿಕ ದಾರ್ಶನಿಕ ಐತಿಹಾಸಿಕವಲ್ಲದೆ, ವಿಜ್ಞಾನ ತಂತ್ರಜ್ಞಾನಗಳನ್ನು ಆಧರಿಸಿದ ಅನೇಕ ಸಂಗತಿಗಳೂ ಒಳಪಡುತ್ತವೆ. ಅಲ್ಲಿ ಅವು ಅಲ್ಲಿ ರಸಾತ್ಮಕವೂ ಹೃದ್ಯವೂ ಆದ ವೇಷಧಾರಿಗಳಾಗಿ ವಿಜ್ಞಾನಗಳು ಮನುಷ್ಯನ ಜೀವನದಲ್ಲಿ ಮಹತ್ವದ ಅಸ್ತಿತ್ವವನ್ನು ಉಳಿಸಿಕೊಂಡು ಮುಂದುವರೆಯುತ್ತವೆ ಎಂಬುದನ್ನು ತೌಲನಿಕವಾಗಿ ವಿವರಿಸಿದ್ದಾರೆ.

## 5.8. ಶಿಕ್ಷಣಕ್ಕೆ ಸಂಬಂಧಿಸಿದ ಚಿಂತನೆ

ಪ್ರೊ: ನಿಸಾರ್ ಅಹಮದ್‌ರವರು ಸ್ವತ: ಶಿಕ್ಷಣ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿ ಶಿಕ್ಷಣದ ಸ್ಥಿತಿಯನ್ನು ಕಂಡುಂಡವರು. ಹೀಗಾಗಿ ಹಳ್ಳಿ ಶಾಲೆಗಳಿಂದ ವಿಶ್ವವಿದ್ಯಾಲಯದವರೆಗಿನ ಶಿಕ್ಷಣದಲ್ಲಿನ ಆಗುಹೋಗುಗಳ ಅರಿವಿನಿಂದಾಗಿ ಅವರು ತಮ್ಮ ಶಿಕ್ಷಣದ ಬಗೆಗಿನ ಕಾಳಜಿಯನ್ನು ಅತ್ಯಂತ ನಿರಾಳವಾಗಿ ಹೊರಹಾಕಿದ್ದಾರೆ. ಇಂದಿನ ಶಿಕ್ಷಣ ವ್ಯವಸ್ಥೆಯ ಸ್ಥಿತಿಗತಿ, ಖಾಸಗಿ ಕಾನ್ವೆಂಟ್‌ಗಳ ಪದ್ಧತಿ, ಪಾಲಕರ ಪರದಾಟ, ಜವಾಬ್ದಾರಿ, ಮುಗ್ಧ ಮಕ್ಕಳು ಕಲಿಯುವ ಪಾಠ ಹೀಗೆ ಮುಂತಾದವುಗಳನ್ನು ಕಂಡ ಅವರು ಅತ್ಯಂತ ನಿರ್ಭಿಡೆಯಿಂದ ಬರೆದಿರುವರು.ಇಂದಿನ ಶಿಕ್ಷಣ ಗುಣಮಟ್ಟದ ವಾಸ್ತವ ಸ್ಥಿತಿ. ಅನಕ್ಷರತೆಯ ಅನಾಹುತಗಳು ಸಾಕ್ಷರಗೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತಾಗಿಯೂ ಸಹ ಅವರು ಚಿಂತಿಸಿದ್ದಾರೆ. ಮಹಾತ್ವಾಕಾಂಕ್ಷಿ, ವಿಶಾಲ ಹೃದಯದ ನಿಸಾರ ಅಹಮದ್‌ರವರ ಕಾಳಜಿ ಅಪಾರವಾದುದು. ತಮ್ಮ ಅಪಾರವಾದ ಶಿಕ್ಷಣ ಕ್ಷೇತ್ರದ ಅನುಭವಗಳನ್ನು ಸಾಂದರ್ಭಿಕವಾಗಿ ಉದಾಹರಣೆಯೊಂದಿಗೆ ತಮ್ಮ ಬರವಣಿಗೆಯಲ್ಲಿ ಹಿಡಿದಿಟ್ಟು ಸಾಮಾಜಿಕ ಕಾಳಜಿಯನ್ನು ಉಳಿಸಿಕೊಂಡಿದ್ದಾರೆ.

'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎನ್ನುವ ಸ್ತ್ರೀ ಶಿಕ್ಷಣಕ್ಕೆ ನಿಸಾರ್ ಅಹಮದ್‌ರವರು ಅತ್ಯಂತ ಮಹತ್ವವನ್ನು ನೀಡುತ್ತಾರೆ. ಗ್ರಾಮೀಣ ಪ್ರದೇಶದಲ್ಲಿನ ಸ್ತ್ರೀ ಶಿಕ್ಷಣದ ಪಾಡು ಕಂಡು ಮರುಗುತ್ತಾರೆ.ಅಲ್ಲಿನ ಹೆಣ್ಣುಮಕ್ಕಳ ಶೋಚನೀಯ ಸ್ಥಿತಿ. ಓಬೆರಾಯನ ಕಾಲದ ಕಂದಾಚಾರ, ಅಂಧಶ್ರದ್ಧೆ, ಮೂಢನಂಬಿಕೆಯಿಂದ ಮನೆಯಿಂದ ಹೊರಗೆ ಹೋಗಲಾಗದ ನರಕಯಾತನೆಯನ್ನು ಮನಗಂಡಿದ್ದಾರೆ. ಹಿಂದುಳಿದ ಸ್ತ್ರೀಯರು ಪಡುವ ಶೋಷಣೆ ಧಣಿಗಳ, ದಲ್ಲಾಳಿಗಳ, ಗುತ್ತಿಗೆದಾರರ ಅಟ್ಟಹಾಸ, ಶೋಷಣೆಯಿಂದ

ಅವರು ವಂಚಿತರಾಗುವ ಪರಿಯನ್ನು ಅತ್ಯಂತ ಹೀನ ಬದುಕನ್ನು ನೆನಪಿಸುತ್ತಾರೆ. ಇಂತಹ ಮುಗ್ಧ, ದೀನ ಸ್ತ್ರೀಯರನ್ನು ಅಜ್ಞಾನ ಅಂಧಶ್ರದ್ಧೆಯಿಂದ ಹೊರತರುವ ಅವರ ಬದುಕನ್ನು ಉಜ್ವಲಗೊಳಿಸುವ ಕಡೆಗೆ ನಿಸಾರ್ ಅಹಮದ್‌ರವರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸುತ್ತಾರೆ.

## 5.9. ಸ್ವಂತ ಜೀವನಕ್ಕೆ ಸಂಬಂಧಿಸಿದ ಚಿಂತನೆ:

ಗದ್ಯ ಸಾಹಿತ್ಯದಲ್ಲಿ ವಿಶಿಷ್ಟ ಬರಹದ ಮೂಲಕ ಕಾವ್ಯದ ಹಾಗೆಯೇ ವಿಶಿಷ್ಟ ಛಾಪು ಮೂಡಿಸಿರುವ ಪ್ರೊ: ನಿಸಾರ್ ಅಹಮದ್‌ರವರು ಅಪ್ರತಿಮ ಬರಹಗಾರರಾಗಿದ್ದಾರೆ. ಅವರ ಸಮಗ್ರ ಬರಹಗಳಲ್ಲಿ ಅನೇಕ ವಿಷಯಗಳ ಚರ್ಚೆಯೊಂದಿಗೆ ತಮ್ಮ ವೈಯಕ್ತಿಕ ಜೀವನದ ಬಗ್ಗೆಯೂ ಸಹ ಮುಕ್ತವಾಗಿ ಚರ್ಚಿಸುವ ನಿಸಾರ್ ಅವರ ವಿಶಾಲ ಮನೋಭಾವ ಬಹಳ ಅಪರೂಪ ಹಾಗೂ ಉದಾರವಾಗಿ ಕಂಡುಬರುತ್ತದೆ.ಅವರ ಜೀವನದ ಅನೇಕ ಮಾಗಿದ ಅನುಭವಗಳನ್ನು ಬದುಕಿನ ಬುತ್ತಿಯನ್ನು ಬಿಚ್ಚುತ್ತಾ ಓದುಗರ ಮನಸ್ಸನ್ನು ಸೆರೆಹಿಡಿಯುತ್ತಾರೆ. ಅದರಲ್ಲಿ ಅವರ ಬಾಲ್ಯದ ಶಿಕ್ಷಣದ, ವೃತ್ತಿ ಜೀವನ, ಬೆಂಗಳೂರಿನ ಅನೇಕ ಅನುಭವಗಳು, ಸ್ನೇಹವರ್ಗ, ಸಹೋದ್ಯೋಗಿಗಳು, ಶಿಕ್ಷಕ ಬಳಗ, ಆದರ್ಶ ವ್ಯಕ್ತಿಗಳೊಂದಿಗಿನ ಒಡನಾಟ ಹೀಗೆ ಹತ್ತು ಹಲವಾರು ಅನುಭವಗಳನ್ನು ತಮ್ಮ ಬರಹದಲ್ಲಿ ಬಿಚ್ಚಿಟ್ಟಿದ್ದಾರೆ.

## 5.10. ಇತರೆ ಚಿಂತನೆ:

ಪ್ರೊ: ನಿಸಾರ್ ಅಹಮದ್‌ರವರ ಗದ್ಯ ಬರಹ ಅಪಾರ ವಿಷಯಗಳ ಮಾಹಿತಿ ನೀಡುವ ಅನುಭವದಿಂದ ಕೂಡಿದ ಅಕ್ಷಯ ಪಾತ್ರೆ. ಅವರ ಬರಹದ ಸೆಳೆತ, ಲಲಿತ ಪದಬಂಧಗಳಿಂದ ಅರ್ಥಗರ್ಭಿತ ಗಟ್ಟಿತನದಿಂದ ಹೊರ ಹೊಮ್ಮುವಂತಹದ್ದು. ಹೀಗಾಗಿ ಜನಮನ ಸೂರೆಗೊಳ್ಳುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅವರ ದೀರ್ಘವಾದ ಗದ್ಯ ಸಾಹಿತ್ಯದಲ್ಲಿ ಸಾಹಿತ್ಯ ಸಂಬಂಧಿ, ಸಾಮಾಜಿಕ, ರಾಜಕೀಯ, ಆಡಳಿತ, ಇತಿಹಾಸ, ತಾತ್ವಿಕ, ಧಾರ್ಮಿಕ, ಪೌರಾಣಿಕ, ಪ್ರಕೃತಿ, ಪರಿಸರ, ವಿಜ್ಞಾನ, ಶಿಕ್ಷಣ, ವೈಯುಕ್ತಿಕ ಜೀವನಕ್ಕೆ ಸಂಬಂಧಿಸಿದಂತೆ ಅಮೂಲ್ಯ ಅನುಭವಗಳಿಂದ ವಿವೇಚಿಸಿದ್ದಾರೆ. ಹಲವಾರು ಮಹನೀಯರುಗಳ ಜೀವನ, ಕೃತಿಗಳ ಮೇಲೆ ಬೆಳಕು ಚೆಲ್ಲಿರುವಂತೆ ಇತರೆ ಹಲವಾರು ವಿಷಯಗಳ ಮೇಲೆಯೂ ಸಹ ತಮ್ಮ ವಿಚಾರಧಾರೆಯನ್ನು ಹರಿಸಿದ್ದಾರೆ. ಅವರು ಇತರ ವಿಷಯಗಳ ಕರಿತಾಗಿ ಬರೆದಿರುವಂತಹ

ಲೇಖನಗಳಲ್ಲಿ ಶತಾಯುಷೀ ಗೆಜೆಟಿಯರ್‌ಗೆ ಹಾರ್ದನಮನ ಕನ್ನಡಿಗರ ಅಭಿಮಾನದ ಸ್ವತ್ತು, 'ಪ್ರಜಾಮತ' ಮುಗಿಸಿದೆ ಅರವತ್ತು, ಪುಸ್ತಕಗಳಿಗೆ ಪರ್ಯಾಯವಿಲ್ಲ, ಹೋದೆಯಾ ಅಂದರೆ ಬಂತು ಗವಾಕ್ಷಿಯಲ್ಲಿ ಹೀಗೆ ಹಲವಾರು ಮಹತ್ವದ ವಿಷಯಗಳ ಕುರಿತಾಗಿ ತಮ್ಮ ಅದ್ಭುತ ಅನುಭವಗಳಿಂದ ವಿವೇಚಿಸಿದ್ದಾರೆ.

# ಅನುವಾದಿತ ಕೃತಿಗಳು

ಕನ್ನಡ ಸಾಹಿತ್ಯದ ಗಣಿಗೆ ಕಾವ್ಯ, ವಿಮರ್ಶೆ, ವೈಚಾರಿಕ ಸಾಹಿತ್ಯ, ಸಂಪಾದನೆಯಿಂದ ತಮ್ಮ ಅಮೂಲ್ಯ ಕೃತಿಗಳನ್ನು ನೀಡಿ ಶ್ರೀಮಂತಗೊಳಿಸಿರುವಂತೆಯೇ ಅನ್ಯ ಭಾಷೆಯ ಕೃತಿಗಳನ್ನು ಅನುವಾದಿಸಿ ಕನ್ನಡಕ್ಕೆ ತಂದು ಅನುಪಮ ಕೊಡುಗೆ ನೀಡಿದ್ದಾರೆ. ಒಂದು ಭಾಷೆಯ ಕೃತಿಯನ್ನು ಇನ್ನೊಂದು ಭಾಷೆಗೆ ತರ್ಜುಮೆಗೊಳಿಸುವದರಿಂದ ಆಗುವಂತಹ ಪ್ರಯೋಜನ ಅಪಾರ. ಹಾಗೆಯೇ ತರ್ಜುಮೆ ಮಾಡುವಾಗ ಪಡುವ ಕಷ್ಟ, ಶ್ರಮ, ಶ್ರದ್ಧೆಯಿಂದ ಇಂತಹ ಅನುವಾದ ಕಾರ್ಯ ನೆರವೇರುತ್ತದೆ. ನಿಸಾರ್ ಅಹಮದ್‌ರವರು ಪ್ರಭಾವಶಾಲಿ, ಕ್ರಿಯಾತ್ಮಕ ಬರಹಗಾರರಾಗಿರುವುದರ ಜೊತೆಗೆ ಅನುವಾದದಲ್ಲಿಯೂ ತಾವೇನೂ ಕಡಿಮೆಯಲ್ಲ ಎಂಬಂತೆ ವಿಶ್ವ ಪ್ರಸಿದ್ಧ ಕವಿ, ನಾಟಕಕಾರನಾದಂತಹ ಷೇಕ್ಸ್‌ಪಿಯರನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಹಾಗೂ 'ಒಥೆಲೋ' ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಹಾಗೆಯೇ ಪಾಬ್ಲೋನ ಕವನಗಳ ಅನುವಾದ, ಹಲವಾರು ವಿದೇಶಿ ಕವಿಗಳ ಕವನಗಳ ಅನುವಾದಗಳನ್ನು ಮಾಡಿ ಕೃತಾರ್ಥರಾಗಿದ್ದಾರೆ.

## 6.1. ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್

ವಿಶ್ವ ಪ್ರಸಿದ್ಧ ನಾಟಕಕಾರ ಷೇಕ್ಸ್‌ಪಿಯರ್ ಬರೆದ ನಾಟಕಗಳಲ್ಲಿ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದೆ. ಈ ನಾಟಕ 1595ರ ವೇಳೆಗೆ ರಚನೆಯಾಗಿರಬಹುದೆಂದು ಊಹಿಸಲಾಗಿದೆ.ಈ ನಾಟಕ ಹೆಸರೇ ಸೂಚಿಸುವಂತೆ ನಡುಬೇಸಗೆಯ ರಾತ್ರಿಯ ಸವಿಗನಸಿನ ಹರ್ಷೋಲ್ಲಾಸಗಳಿಂದ ಕೂಡಿದೆ. ಕನಸಿನಂತಹ ಅಸಂಭವ ಸನ್ನಿವೇಶಗಳನ್ನು ನಾಟಕದಲ್ಲಿ ಹೇಗೆ ಸಾಧಿಸಿ ತೋರಿಸಬಹುದೆಂಬುದನ್ನು ಇಲ್ಲಿ ಅದ್ಭುತವಾಗಿ ಸೃಷ್ಟಿಸಲಾಗಿದೆ. ಅಂದಿನ ಕಾಲದ ಆಂಗ್ಲರಲ್ಲಿ ನಡುಬೇಸಗೆಯ ಅಂದರೆ ಜೂನ್ 24ರಂದು ಫೇರಿಗಳು ಹಾಗೂ ಮತ್ತಿತರ ಅಲೌಕಿಕ ಶಕ್ತಿಗಳು ಕಾಣಿಸಿಕೊಳ್ಳುತ್ತವೆಂಬ ನಂಬಿಕೆ ದೃಢವಾಗಿತ್ತು. ಹೀಗಾಗಿ ಆ ದಿವಸವನ್ನು ಅವರೆಲ್ಲರೂ ಹಬ್ಬವಾಗಿ, ಉತ್ಸವವಾಗಿ ಆಚರಿಸುತ್ತಿದ್ದರು. ಈ ನಾಟಕದ ಹೆಸರು ನಡುಬೇಸಗೆಯ ಅರ್ಥ ಕೊಡುತ್ತಿದ್ದರೂ ನಾಟಕ ನಡೆಯುವುದು 'ಮೇ' ಹಬ್ಬದ ದಿನದಂದು. ಈ ನಾಟಕದ ಉದ್ದೇಶ ಕನಸಿನಂತಹ ಅಸ್ಪಷ್ಟ ಅಸಂಭವ ಸಂಗತಿಗಳಿಂದಲೂ ನಾಟಕ ರಚಿಸಲು ಸಾಧ್ಯವೆಂಬ ಅಸಾಂಗತ್ಯದಲ್ಲಿ

ಸಾಂಗತ್ಯವನ್ನು ಸೃಷ್ಟಿಸುವದಾಗಿದೆ. ಈ ಸಾಂಗತ್ಯ ಸೃಷ್ಟಿ ಅಥವಾ ಐಕ್ಯ ಸಾಧನೆ ಎರಡು ಬಗೆಯಲ್ಲಿ ನೆರವೇರುತ್ತದೆ. ಒಂದು ಪ್ರಸಂಗಗಳಲ್ಲಿ ಮತ್ತೊಂದು ವಾತಾವರಣದಲ್ಲಿ ಈ ಸವಿಗನಸಿನ ನಾಟಕದಲ್ಲಿ ಮುಖ್ಯವಾಗಿ ಬರುವ ಸಂದರ್ಭಗಳು ಪ್ರಣಯಕ್ಕೆ ಸಂಬಂಧಿಸಿವೆ. ಒಂದು ಸನ್ನಿವೇಶ ತಾನೇ ಸ್ವತಂತ್ರವಾಗಿದೆ. ಆದರೂ ಸಹ ಅವುಗಳು ಒಂದಕ್ಕೊಂದು ಬೆಸೆದು ಸರಪಳಿಯಂತೆ ಕಥೆಯನ್ನು ಏಕ ಘಟಕವಾಗಿ ನಿರ್ಮಾಣವಾಗುತ್ತವೆ. ಹೇಗೆಂದರೆ ಈ ಕಥೆಯಲ್ಲಿನ ಪಾತ್ರಗಳಾದ ಅಥೆನ್ಸಿನ ದೊರೆ ಥೀಸಿಯಸ್ ಮತ್ತು ಹಿಪಾಲಟರ ಮದುವೆ ಸಂದರ್ಭ, ಲೈಸ್ಯಾಂಡರ್ ಮತ್ತು ಹರ್ಮಿಯ, ಡೆಮಿಟ್ರಿಯಸ್ ಮತ್ತು ಹೆಲನ್‌ರ ಪ್ರೇಮ ಪ್ರಸಂಗ ಕಿನ್ನರರಾದ ಓಬೆರಾಯನ್ ಮತ್ತು ಟೈಟಾನಿಯ ಪ್ರಣಯ ಕಲಹ ಹಾಗೂ ಬಾಟಮ್ ಕ್ವಿಟ್‌ರಂತಹ ಶ್ರೀ ಸಾಮಾನ್ಯರ ಪ್ರಸಂಗಗಳು ನಾಟಕದಲ್ಲಿ ಇವೆಲ್ಲಕ್ಕೂ ಒಂದು ಬಗೆಯ ಸಹಜ ಸಂಬಂಧ ಏರ್ಪಡುತ್ತವೆ. ಹರ್ಮಿಯ ಹೆಲೆನ್‌ರ ಪ್ರಣಯದ ಭವಿಷ್ಯವನ್ನು ನಿರ್ಧರಿಸುವಂಥ ನ್ಯಾಯಸಮ್ಮತವಾದ ತೀರ್ಪನ್ನು ಕೊಡಬೇಕಾದವನು ದೊರೆ ಥೀಸಿಯಸ್, ರಾಟಮ್, ಕ್ವೀನ್ಸ್ ಮತ್ತು ಅವರ ಗೆಳೆಯರು ನಾಟಕವಾಡುವದು ಥೀಸಿಯಸ್‌ನ ವಿವಾಹ ಸಂದರ್ಭದಲ್ಲಿ ಯಕ್ಷಿಣಿ ಟೈಯಾನಿಯ ಮತ್ತು ಬಾಟಮ್‌ನನ್ನು ಮೋಹಿಸುವದೂ, ನಾಟಕದ ಮುಖ್ಯ ಕಥೆಯ ಪ್ರಣಯದ ತೊಡಕನ್ನು ಯಕ್ಷ ಯಕ್ಷೆಯರು ಬಗೆಹರಿಸಬೇಕಾದುದು ಪರಸ್ಪರ ಅನಿವಾರ್ಯತೆಯನ್ನು ಸ್ಥಾಪಿಸುತ್ತವೆ. ಇಂಥ ಅಸಂಗತ ಪ್ರಸಂಗಗಳನ್ನು ಸಂಗತಗೊಳಿಸುವುದರಲ್ಲಿ ಷೇಕ್ಸ್‌ಪಿಯರ್‌ನ ಪ್ರತಿಭೆ ಬೆರಗುಗೊಳಿಸುವಂತಹದ್ದು.

## 6.2. ಸುಮುಹೂರ್ತ

ಈ ಸುಮುಹೂರ್ತ ಎಂಬ ಕವನ ಸಂಗ್ರಹದಲ್ಲಿನ ಹಲವಾರು ಅನುವಾದಿತ ಕವನಗಳು ನಿಸಾರರ ಪ್ರತಿಭಾ ಶಕ್ತಿಗೆ ಕನ್ನಡಿ ಹಿಡಿದಂತಿವೆ. ಅವುಗಳಲ್ಲಿ ಯುರೋಪಿಯನ್, ಅಮೇರಿಕನ್ ಹಾಗೂ ಅತಿ ಪ್ರಾಚ್ಯ ಕವಿಗಳಿಂದ ಆಯ್ದುಕೊಂಡಂತಹ ಕವನಗಳಾಗಿವೆ. ಇಲ್ಲಿನ ಕವನಗಳು ಅಚ್ಚಕನ್ನಡದವೇ ಎನ್ನುವಷ್ಟರ ಮಟ್ಟಿಗೆ ನಿಸಾರ್ ಅಹಮದ್‌ರವರು ಅನುವಾದಿಸಿದ್ದಾರೆ. ಅವರ ವಿಶಾಲವಾದ ಅಧ್ಯಯನ ಹಾಗೂ ಆಕಾಂಕ್ಷೆ, ಆಸಕ್ತಿ, ಸಾಹಿತ್ಯ ಪ್ರೀತಿಗೆ ಈ ಕವನಗಳು ಸಾಕ್ಷಿಯಾಗಿವೆ. ಅತ್ಯಂತ ಗಟ್ಟಿತನದಿಂದ ಹೊರಹೊಮ್ಮುವ ಕವನಗಳ ಅನುವಾದಗಳು ಓದುಗರನ್ನು ಬೆರಗುಗೊಳಿಸುತ್ತವೆ. ಅನುವಾದವೆಂಬುದು ಅಷ್ಟು ಸರಳವಾದ ಕೆಲಸವಲ್ಲ. ಆದರೆ ಪ್ರತಿಭಾವಂತ ಬರಹಗಾರ ಪ್ರೊ.ನಿಸಾರ್

ಅಹಮದ್‌ರವರ ಅಗಾಧ ಪಾಂಡಿತ್ಯ ಹಾಗೂ ಆಳವಾದ ಅಧ್ಯಯನದ ಫಲವಾಗಿ ಅವರ ಅನುವಾದ ಇಲ್ಲಿ ಸಮರ್ಥವಾಗಿ ಮೂಡಿಬಂದಿದೆ. ಈ 'ಸುಮೂಹೂರ್ತ' ಕವನ ಸಂಗ್ರಹದ ಕುರಿತಾಗಿ ಡಾ.ವಿ.ಕೃ.ಗೋಕಾಕ್‌ರವರು ತಮ್ಮ ಅಭಿಪ್ರಾಯದಲ್ಲಿ "ಈ ಸಂಗ್ರಹದ ನವೀನ ಲಕ್ಷಣವೆಂದರೆ ಸಮಕಾಲೀನ ಯುರೋಪಿಯನ್, ಅಮೇರಿಕನ್ ಹಾಗೂ ಅತಿ ಪ್ರಾಚ್ಯ ಕವಿಗಳಿಂದ ಕನ್ನಡ ಓದುಗರ ಕ್ಷಿತಿಜ ಹಿಗ್ಗಿದೆ. ಅನುವಾದಗಳಲ್ಲಿ ಜೀವಂತ ಸ್ವತಂತ್ರ ಕನ್ನಡ ತಿರುಳು ತಾನಾಗಿಯೇ ತಲೆಯೆತ್ತಿದೆ." (ನಿಸಾರ್:1991:31) ಹೀಗೆ ಅವರು ಅರ್ಥಗರ್ಭಿತವಾಗಿ ಈ ಸಂಗ್ರಹದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

**ತಿರುಕ**

"ಹರಕು ಮುರುಕು
ಚಿಂದಿ ಬಟ್ಟೆ
ಥಳಥಳಿಸಿದೆ ಬಿಸಿಲಿನಲ್ಲಿ
ಕರಟದ ಒಳ ತಿರುಳಿನಂತೆ
ನವಮಾಸದ ಗರ್ಭದಂತೆ
ಎದ್ದು ಕಾಣುತಿರುವುದಲ್ಲಿ
ತೇಪೆಗಳಿಗೆ ಗಂಟುಬಿದ್ದ
ತುಂಬು ಬಡತನ.
ಹಲುಬುತ್ತಿರುವ ಹಸುಳೆ
ಹುಡುಕಿದಂತೆ ತನ್ನ ತಾಯಿಯ
ಅಸ್ತಿತ್ವದ ಒಂದು ಚೂರು
ಚಲಿಸಿರುವುದು ನೋಡು ಅಗೋ

ಬೆನ್ನುಹತ್ತಿ ಆತ್ಮನ,
ಅನುಸರಿಸುತ ಛಾಯೆಯ"

(ನಿಸಾರ್: 1991: 514)

ಸ್ಫೂರ್ತಿ: Beggar

ಕವಿ : Murano Shiro

(ಜಪಾನಿಸ್)

ಹೀಗೆ ಅಮೇರಿಕನ್ ಹಾಗೂ ಯುರೋಪಿಯನ್ನು ಕವಿಗಳ ಹಲವಾರು ಕವನಗಳನ್ನು ಈ ಸುಮುಹೂರ್ತ ಸಂಗ್ರಹದಲ್ಲಿ ಕನ್ನಡಕ್ಕೆ ನಿಸಾರರು ಗಟ್ಟಿತನದಿಂದ ಹಿಡಿದಿಟ್ಟಿದ್ದಾರೆ.

**6.3 ಬರೀ ಮರ್ಯಾದಸ್ಥರೇ (ಪಾಬ್ಲೊ ನೆರುಡನ ಕವನಗಳು)**

ಪ್ರೊ; ನಿಸಾರ್ ಅಹಮದ್‌ರವರು ಚಿಲಿಯ ಪ್ರಸಿದ್ಧ ಕವಿ ಪಾಬ್ಲೊ ನೆರುಡನ ಪದ್ಯಗಳನ್ನು ಕನ್ನಡದಲ್ಲಿ 'ಬರೀ ಮಯಾದಸ್ಥರೇ' ಎಂಬ ಸಂಕಲನದಲ್ಲಿ ಅತ್ಯಂತ ಸೊಗಸಾಗಿ ಕನ್ನಡಕ್ಕೆ ತಂದಿರುವರು. ಆ ಪ್ರಸಿದ್ಧ ಕವಿ ಪಾಬ್ಲೊ ನೆರುಡನ ಜೀವನ ಹಾಗೂ ಕಾವ್ಯದ ಬಗೆಗೂ ಸಹ ವಿವರವಾದ ಮಾಹಿತಿಯನ್ನು ನೀಡಿದ್ದಾರೆ.ಈ ಪಾಬ್ಲೊ ನೆರುಡನ ನಿಜವಾದ ಹೆಸರು ನೆಫ್ತಾಲಿ ರಿಕಾರ್ಡೊರೆಯಿಸ್. 'ಪಾಬ್ಲೊ ನೆರುಡ' ಎಂಬುದು ಕಾವ್ಯನಾಮ. ಇದು ಜೆಕೊಸ್ಲೊವಾಕಿಯಾದ ಸಾಹಿತಿ ಜಾನ್ ನೆರುಡನ ಕೃತಿಗಳಿಂದ ಪ್ರಭಾವಿತನಾಗಿದ್ದರ ಫಲವಾಗಿ ಈ ಕಾವ್ಯನಾಮ ಬಂದಿದೆ.ಇವನು ಜನಿಸಿದ್ದು ಮಧ್ಯ ಚಿಲಿಯ ಪ್ಯರಾಲ್ ಎಂಬ ಊರಲ್ಲಿ 12ನೇ ಜುಲೈ 1904ರಲ್ಲಿ. ಇವನು ತನ್ನ ತಾಯ್ನಾಡಿನ ಬಗ್ಗೆ ಅಲ್ಲಿನ ಪರಸರದ ಬಗ್ಗೆ ಅತ್ಯಂತ ಅಭಿಮಾನದಿಂದ ಬರೆದಿದ್ದಾನೆ. ಈ ಪಾಬ್ಲೊ ನೆರುಡನ ಕುರಿತಾದ ಜೀವನ ಹಾಗೂ ಕಾವ್ಯದ ಬಗೆಗಿನ ಅಪಾರವಾದ ಮಾಹಿತಿಯನ್ನು ಸಂಗ್ರಹಿಸಿದ ಪ್ರೊ:ನಿಸಾರ್ ಅಹಮದ್‌ರವರು ತಮ್ಮ ಅದ್ಭುತವಾದ ಲೇಖನಿಯಿಂದ ಅವನ ಬದುಕು ಹಾಗೂ ಕಾವ್ಯದ ಮೇಲೆ ಬೆಳಕು ಚೆಲ್ಲಿದ್ದಾರೆ. ಪಾಬ್ಲೊ ನೆರುಡನ ಜೀವನದ ಅನೇಕ ಘಟನೆಗಳ ವಿವರಗಳು, ಅವನ ಕಾವ್ಯದ ಬಗೆಗಿನ ಹಲವಾರು ವಿಷಯಗಳನ್ನು ನಿಸಾರ್‌ರವರು ತಮ್ಮ ಅಪ್ರತಿಮ ಪ್ರತಿಭೆಯಿಂದ ಬೆಳಕು ಚೆಲ್ಲಿದ್ದಾರೆ. ಇಂತಹ ಮಹಾನ್ ಕವಿಯ ಕವನಗಳನ್ನು ಕನ್ನಡಕ್ಕೆ ನೀಡುವುದರ ಮೂಲಕ ಪ್ರೊ: ಕೆ.ಎಸ್.ನಿಸಾರ್ ಅಹಮದ್‌ರವರು ಅತ್ಯಂತ ಸ್ತುತ್ಯಾರ್ಹ ಕೆಲಸ ಮಾಡಿದ್ದಾರೆ.

ಇಲ್ಲಿ ಪ್ಲಾಬೊ ನೆರುಡನ ಕವನವನ್ನು ನಿಸಾರರು ಕನ್ನಡಕ್ಕೆ ತಂದಂಹ ಪರಿ ಹೀಗಿದೆ.

**ಕ್ಷಾಮ**

"ಲೋಟಾದ ಕಲ್ಲಿದ್ದಲು ಪ್ರದೇಶದಲ್ಲಿ
ಮಹಾ ವಿಪತ್ತನ್ನು ಕಂಡಿರುವೆ.
ಮೊಣಕಾಲೂರಿ ಪ್ರಾರ್ಥಿಸುವ ಭಂಗಿಯಲ್ಲಿ ದಯಾಹೀನ ಕಲ್ಲಿದ್ದಲಿನ
ಕೆಂಡಕ್ಕೆ ಹುಟ್ಟಿದಾತ.
ಬೆಂಕಿ ಹಾಗೂ ಕಪ್ಪು ಪುಡಿಗಳ ನಡುವೆ
ಕೊಚ್ಚಲ್ಪಟ್ಟು ಎಸೆದಾತ.
ಕರಿಯ ನಿರಿಗೆಗಳ, ಮೈವೆತ್ತ ಹಾಗೆ
ಸಾಯುತ್ತಲೊ ಬದುಕುತ್ತಲೊ
ಬದುಕುತ್ತಿದ್ದಾನೆ ಬಿಡುವಿನೇಕಾಂತ ಸ್ಥಳಗಳನ್ನು
ಬೇಲಿಯ ಅನಾದರಿತ ಕೂಲಿ
ಸುಲಿದು ಬತ್ತಲಾಗಿಸಿದ ನೀಲಿ ಗಿರಿಮರದ
ನಾಶವಾಗುತ್ತಿರುವ ಚೂರಿಗಳೂ
ಇತ್ತೀಚೆ ಬಿದ್ದಿರುವ ತಾಣದಲ್ಲಿ
ಕೇವಲ ಚಳಿಗಾಲದೊಂದು ಕೊನೆಯ ಕೆಮ್ಮಿನ ಉಳಿವಿಗಾಗಿ
ಅಥವಾ ಕಾಳ್ಗಪ್ಪು ಜಲದ ಮೇಲಿನ ಕುದುರೆ ಸಪ್ಪಳಕ್ಕಾಗಿ
ಜಗತ್ತುಗಳು ತಮ್ಮನ್ನ ತಾವು ಸೃಷ್ಟಿ ಅಥವಾ ನಾಶ
ಮಾಡಿಕೊಳ್ಳಬಹುದೋ ಎನ್ನುವ ಆತಂಕದಿಂದ"

(ನಿಸಾರ್: 1991:545)

ಹೀಗೆ ನಿಸಾರರು ಪಾಬ್ಲೊ ನೆರುಡನ ಅನೇಕ ಕವಿತೆಗಳನ್ನು 'ಬರೀ ಮರ್ಯಾದಸ್ಥರೆ' ಎಂಬ ಸಂಕಲನದಲ್ಲಿ ಅತ್ಯಂತ ಸಮರ್ಥವಾಗಿ ತರ್ಜುಮೆಗೊಳಿಸಿದ್ದಾರೆ. ಕನ್ನಡದಲ್ಲಿ ನೆರುಡನ ಕವನಗಳನ್ನು ಅನುವಾದಿಸಿ ಕನ್ನಡಿಗರಿಗೆ ಒಬ್ಬ ಹೊಸ ಕವಿಯನ್ನು ಪರಿಚಯಿಸುವಂತಹ ಅದ್ಭುತವಾದಂತಹ ಸಾಧನೆಯನ್ನು ನಿಸಾರ್ ಅಹಮದ್‌ರವರು ಮಾಡಿದ್ದಾರೆ.

## ಹೊಸಗನ್ನಡ ಸಾಹಿತ್ಯದಲ್ಲಿ ಪ್ರೊ: ನಿಸಾರ್ ಅಹಮದ್‌ರವರ ಸ್ಥಾನ

'ನಿತ್ಯೋತ್ಸವ'ದ ಕವಿಗಳೆಂದೇ ಪ್ರಸಿದ್ಧರಾದಂತಹ ಪ್ರೊ: ಕೆ.ಎಸ್.ನಿಸಾರ್ ಅಹಮದ್‌ರವರು ತಮ್ಮ ಬದುಕು ಹಾಗೂ ಬರಹಗಳಿಂದ ನಾಡಿನ, ದೇಶದ ಒಳಗೂ ಹೊರಗೂ ಜನಮನಸೂರೆಗೊಂಡವರು. ಕನ್ನಡ ಸಾಹಿತ್ಯದಲ್ಲಿ ತಮ್ಮ ವಿಶಿಷ್ಟ ಪ್ರತಿಭೆಯಿಂದ ಕೃಷಿಗೈದಿರುವಂತಹ ನಿಸಾರರು ಅಮೂಲ್ಯ ಕೃತಿಗಳನ್ನು ಕನ್ನಡ ಸಾಹಿತ್ಯದ ಗಣಿಗೆ ಧಾರೆಯೆರೆದಿದ್ದಾರೆ. ಅವರ ಸಾಹಿತ್ಯ ಸೃಷ್ಟಿ ವೈವಿಧ್ಯಮಯ ಹಾಗೂ ಅಪೂರ್ವವಾದದ್ದು.ಕಾವ್ಯ, ವಿಮರ್ಶೆ, ವೈಚಾರಿಕ, ಅನುವಾದ, ಮಕ್ಕಳ ಸಾಹಿತ್ಯದ, ಸಂಪಾದನೆ ಮುಂತಾದ ಕೃತಿಗಳ ರಚನೆಯಿಂದ ಹೊಸಗನ್ನಡ ಸಾಹಿತ್ಯದಲ್ಲಿ ವಿಭಿನ್ನ ಬರಹಗಾರರಾಗಿ ಕಂಡುಬರುತ್ತಾರೆ. ಇವರ ಬರಹದ ಮೇಲೆ ಕುವೆಂಪು, ಬೇಂದ್ರೆ, ಮಾಸ್ತಿ.ಡಿ.ವಿ.ಜಿ, ವಿ.ಸೀ. ಜಿ.ಪಿ.ರಾಜರತ್ನಂ, ರವೀಂದ್ರನಾಥ ಠಾಗೋರ್, ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್ ಮುಂತಾದವರ ಪ್ರಭಾವ ಪ್ರೇರಣೆ ಕಂಡುಬರುತ್ತದೆ. ನಿಸಾರ್ ಅಹಮದ್‌ರವರು ತಮ್ಮದೇ ಆದ ಗಟ್ಟಿ ಬರಹದಿಂದಾಗಿ ಹೊಸಗನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು.

ನಿಸಾರ್ ಅಹಮದ್‌ರವರು ಕನ್ನಡವನ್ನು ಕನ್ನಡಾಂಬೆಯನ್ನು ಭಕ್ತಿಪೂರ್ವಕವಾಗಿ, ಅಭಿಮಾನಪೂರ್ವಕವಾಗಿ ಆರಾಧಿಸಿದ ಅಪೂರ್ವ ಬರಹಗಾರರು. ಕನ್ನಡ ಸಾಹಿತ್ಯಕ್ಕೆ ಅವರ ಕೊಡುಗೆ ಸದಾ ಹಸಿರಾದದ್ದು. ಸಮಸ್ತ ಕನ್ನಡಿಗರ ಹೆಮ್ಮೆಯ ಬರಹಗಾರರಾದಂತಹ ನಿಸಾರ್ ಅಹಮದ್‌ರವರು ಬಳಸುವ ಭಾಷಾ ಶೈಲಿ, ಪದಬಂಧಗಳ ಜೋಡಣೆ, ಅರ್ಥಗರ್ಭಿತ ವಿವರಣೆ ಮನೋಜ್ಞವಾದದ್ದು. ಹೊಸಗನ್ನಡ ಸಾಹಿತ್ಯದಲ್ಲಿ ಕಾವ್ಯ ಕ್ಷೇತ್ರದಲ್ಲಿನ ಅವರ ಕೊಡುಗೆ ತುಂಬಾ ವಿಶಿಷ್ಟವಾದದ್ದು. ಕುವೆಂಪು, ಬೇಂದ್ರೆ, ಮಾಸ್ತಿಯವರಂತೆ, ಕಾವ್ಯ ಅವರ ಕೈಯಲ್ಲಿ ತಾಳಕ್ಕೆ ತಕ್ಕಂತೆ ವರ್ತಿಸುತ್ತದೆ. ಷೇಕ್ಸ್‌ಪಿಯರ್, ಕುವೆಂಪು, ವರ್ಡ್ಸ್‌ವರ್ತ್‌ರಂತೆ ವಿಶಿಷ್ಟವಾಗಿ ಮೂಡಿಬಂದಿದೆ. "ನಿಸಾರ್ ನವೋದಯ ಮತ್ತು ನವ್ಯದ ಸಂಧಿಕಾಲದಲ್ಲಿ, ನಮ್ಮ ಅಂದಿನ ಅನೇಕ ತರುಣ ಕವಿಗಳಂತೆ ಚಡಪಡಿಸುತ್ತಿದ್ದವರು. ಸ್ವಂತಿಕೆಯನ್ನು ರೂಢಿಸಲು ಹೆಣಗುತ್ತಿದ್ದವರು. ನಿಸರ್ಗಪ್ರೇಮಕ್ಕೆ ಕುರುಡಾಗದೆ, ಸಾಮಾಜಿಕ ಸಂದರ್ಭಗಳನ್ನು ಆಧುನಿಕ ಯುಗಧರ್ಮದ ಅಗ್ನಿದಿವ್ಯಗಳನ್ನು ಕಾವ್ಯಕ್ಕೆ ಸೆಳೆದುಕೊಳ್ಳುವ ಪ್ರಯತ್ನ ಮಾಡಿದವರು. ವಿಡಂಬನೆ, ತಿಳಿಹಾಸ್ಯ, ವ್ಯಂಗ್ಯ, ಅನ್ಯೋಕ್ತಿ, ವ್ಯಕ್ತಿಗಳ ಆತ್ಮಶೋಧನೆ, ಅಂತರ್ಮುಖತೆ, ತಾತ್ವಿಕ ಚಿಂತನೆ ಇವರ ಅನೇಕ ಕವನಗಳಿಗೆ

ಆಕಾರ ಕೊಟ್ಟಿದೆ, ಜನ್ಮಕೊಟ್ಟಿದೆ. ಕುವೆಂಪು ಅವರಂತೆ ಕಾವ್ಯದ ವಸ್ತುವನ್ನು ಆರಿಸುವಾಗ ಒಂದು ಉದ್ದೇಶಿತ ಗುರಿ, ಸಂಕಲ್ಪ ಇವರಲ್ಲಿದೆ. ಕಾವ್ಯ ಪ್ರಪಂಚದ ಅಗಾಧತೆಯನ್ನು ಸಾಧ್ಯತೆಯನ್ನು ಪ್ರಜ್ಞಾಪೂರ್ವವಾಗಿ ಪರಿಭಾವಿಸಿ, ಕಾವ್ಯ ಕಟ್ಟುವ ಛಲದಿಂದ ಸೆಣೆಸಿದ್ದಾರೆ." (ಎ.ಎಸ್.ಜಯರಾಂ:1995:29) ಹೀಗೆ ಹೊಸಗನ್ನಡ ಸಾಹಿತ್ಯದಲ್ಲಿ ನಿಸರ್ಗ, ಪ್ರೀತಿ-ಪ್ರೇಮ, ವಿಡಂಬನೆ ಮುಂತಾದವುಗಳನ್ನು ಯಶಸ್ವಿಯಾಗಿ ತರುವ ಮುಖಾಂತರ ನಿಸಾರರು ಮಹತ್ವದ ಬರಹಗಾರರಾಗಿ ಕಂಡುಬರುತ್ತಾರೆ. ಗದ್ಯ ಸಾಹಿತ್ಯದಲ್ಲಿಯೂ ಸಹ ಡಿ.ವಿ.ಜಿ., ವಿ.ಸೀ., ಮಾಸ್ತಿಯವರಂತೆ ಅದ್ಭುತವಾದ ಸಾಹಿತ್ಯವನ್ನು ರಚಿಸುವ ಮುಖಾಂತರ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಬರಹದ ಮೂಲಕ ಗಮನಸೆಳೆಯುತ್ತಾರೆ.

# ಸಮಾರೋಪ

ಪ್ರೊ: ಕೆ.ಎಸ್.ನಿಸಾರ್ ಅಹಮದ್‌ರವರು ಒಬ್ಬ ವಿಶಿಷ್ಟ ಬರಹಗಾರರಾಗಿ ಕನ್ನಡ ಸಾಹಿತ್ಯದಲ್ಲಿ ಕಂಡುಬರುತ್ತಾರೆ. ಅವರ ಬದುಕು ಹಾಗೂ ಸಾಹಿತ್ಯ ಸಾಧನೆಯಿಂದ ಮಹತ್ವದ ಬರಹಗಾರರಾಗಿ ಎಲ್ಲರಿಗಿಂತಲೂ ವಿಶಿಷ್ಟವಾಗಿ ಕಂಗೊಳಿಸುತ್ತಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಕಾಡೆಮಿಯನ್ನು ಸಮರ್ಥವಾಗಿ ಮುನ್ನಡೆಸಿ ಅದಕ್ಕೊಂದು ಹೊಸ ಝಲಕ್‌ನ್ನು ತಂದುಕೊಟ್ಟಂತಹ ಮಹಾನುಭಾವರು. ಅಕಾಡೆಮಿಯನ್ನು ರಾಜಧಾನಿಯಿಂದ ನಾಡಿನ ಮೂಲೆ ಮೂಲೆಗೂ ಹರಡುವಂತೆ ಮಾಡಿ, ಹೊರನಾಡಿನಲ್ಲೂ ಕನ್ನಡದ ಪತಾಕೆಯನ್ನು ಹಾರಿಸಿದವರು.ನಿಸಾರ್ ಅಹಮದ್‌ರವರು ಕನ್ನಡ ಕಂಡ ಒಬ್ಬ ಅಪ್ರತಿಮ ಬರಹಗಾರರು.ಅವರು ಓದಿದ್ದು, ವಿಜ್ಞಾನವಾದರೂ ಸಹ, ಅವರ ಆಸಕ್ತಿ ಮಾತ್ರ ಕನ್ನಡದಲ್ಲಿ. ವೃತ್ತಿಯಲ್ಲಿ ಭೂವಿಜ್ಞಾನದ ಉಪನ್ಯಾಸಕರಾದರೆ ಪ್ರವೃತ್ತಿಯಲ್ಲಿ ಕನ್ನಡ ಸಾಹಿತಿಯಾಗಿ ಅಪೂರ್ವ ವ್ಯಕ್ತಿತ್ವದಿಂದ ಸಮಸ್ತ ಕನ್ನಡಿಗರ ಮನಸೂರೆಗೊಂಡವರು. ಮುಸ್ಲಿಂ ಬಾಂಧವರೊಬ್ಬರು ಕನ್ನಡಕ್ಕೆ, ಕನ್ನಡಾಂಬೆಗೆ ಇಂತಹ ಉದಾತ್ತ ಸೇವೆ ಸಲ್ಲಿಸಿದ್ದಾರೆ ಎನ್ನುವುದಕ್ಕಿಂತ ನಿಸಾರ್ ಅಹಮದ್‌ರವರು ಇವೆಲ್ಲವನ್ನೂ ಮೀರಿ ಜಾತಿ, ಮತ ಪಂಥಗಳಿಗೆ ಅಂಟಿಕೊಳ್ಳದೆ, ವಿಶಾಲ ಹೃದಯದ ಪ್ರಾಂಜಲ ಮನೋಭಾವದ ನಿಸಾರ್ ಅಹಮದ್‌ರವರು ಒಬ್ಬ ಮಹಾಮಾನವರಾಗಿ, ವಿಶ್ವಮಾನವರಾಗಿ ಕಂಡುಬರುತ್ತಾರೆ. ಅವರ ಸುದೀರ್ಘವಾದ ಬರಹದ ಲೋಕ ಅದ್ಭುತವಾದದ್ದು, ಬೆರಗುಗೊಳಿಸುವಂಥದ್ದು.ಕವಿಯಾಗಿ, ವಿಮರ್ಶಕರಾಗಿ, ವಿಚಾರವಾದಿಯಾಗಿ, ಅನುವಾದಕರಾಗಿ, ಮಕ್ಕಳ ಸಾಹಿತಿಯಾಗಿ, ಸಂಪಾದಕರಾಗಿ ಕನ್ನಡಕ್ಕೆ ಅಪೂರ್ವವಾದ ಕೊಡುಗೆ ನೀಡಿದವರು.ಅವರು ಕನ್ನಡಾಂಬೆಯ ಅನರ್ಘ್ಯ ರತ್ನವಾಗಿ ಕಂಗೊಳಿಸುತ್ತಾರೆ. ನಾನು ಅವರಲ್ಲಿ ಮುಖ್ಯವಾಗಿ ಗ್ರಹಿಸಿದ್ದು ಅವರ ಸರಳ ಉದಾತ್ತ ಜೀವನ, ಯಾವುದೇ ಪಂಥಕ್ಕೆ ಅಥವಾ ಗುಂಪುಗಾರಿಕೆಗೆ ಜೋತು ಬೀಳದ ವಿಶಾಲ ಮನೋಭಾವದ ವಿಶ್ವಮಾನವರಾಗಿ ಕಂಡುಬರುತ್ತಾರೆ. ಇಂತಹ ಅಪ್ರತಿಮ ವ್ಯಕ್ತಿಯಾದ ಪ್ರೊ. ನಿಸಾರ್ ಅಹಮದ್‌ರವರ ಜೀವನ ಹಾಗೂ ಸಾಹಿತ್ಯಕ ಸಾಧನೆಯ ಕುರಿತಾಗಿ ಬೆಳಕು ಚೆಲ್ಲುವ ದೃಷ್ಟಿಯಿಂದಲೇ ಈ ಕಿರು ಕೃತಿಯಲ್ಲಿ ಕರಿಯನ್ನು ಕನ್ನಡಿಯಲ್ಲಿ ಹಿಡಿಸಿದಂತೆ ಸಾರವತ್ತಾದ ಅವರ ವ್ಯಕ್ತಿತ್ವವನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

******

## ಆಕರ ಗ್ರಂಥಗಳು


1. ನಿತ್ಯೋತ್ಸವ , ಪುಸ್ತಕಾಲಯ ಪ್ರಕಾಶನ ಬೆಂಗಳೂರು, 1991
2. ಸಂಜೆ ಐದರ ಮಳೆ, ಅಕ್ಷರ ಪ್ರಕಾಶನ, ಸಾಗರ, 1970.
3. ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್, ಪ್ರಥ್ವಿ ಪ್ರಕಾಶನ, ಮೈಸೂರು. 1974
4. ಬಹಿರಂತರ, ಕಿರಣ ಪ್ರಕಾಶನ, ಬಸವನಗುಡಿ ಬೆಂಗಳೂರು, 1994
5. ವಿಚಾರ ವಿಹಾರ, ತುಲನ ಪ್ರಕಾಶನ, ಬಸವನಗುಡಿ, ಬೆಂಗಳೂರು, 1994.
6. ನವೋಲ್ಲಾಸ, ತುಷಾರ ಮಾಸಪತ್ರಿಕೆ, ಮಣಿಪಾಲ ದಕ್ಷಿಣ ಕನ್ನಡ.
7. ಅರವತ್ತೈದರ ಐಸಿರಿ, ಶ್ರೀವಾರಿ ಪ್ರಕಾಶನ, ಗುಟ್ಟಹಳ್ಳಿ, ಬೆಂಗಳೂರು. 2000.
8. ಪ್ರೊ.ಕೆ.ಎಸ್.ನಿಸಾರ್ ಅಹಮದ್ ಅವರ ಕಾವ್ಯ ಸಾಹಿತ್ಯ, 1999.
9. ಸಮಗ್ರ ಕವಿತೆಗಳು, ತರಳಬಾಳು ಜಗದ್ಗುರು ಬ್ರಹನ್ಮಠ ಸಿರಿಗೆರೆ, 1991
10. ಕೆ.ಎಸ್.ನಿಸಾರ್ ಅಹಮದ್ ಅವರ ಸಮಗ್ರ ಗದ್ಯ ಬರಹಗಳು, ಸಪ್ನ ಬುಕ್ ಹೌಸ್, ಬೆಂಗಳೂರು, 2002.
11. ಕಾವ್ಯ ಮಂಜರಿ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, 1999.
12. ನಿಸಾರ್ ನಿಮಗಿದೋ ನಮನ, ಸಪ್ನಾ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು, 2006.

## ಪ್ರೊ. ಕೆ.ಎಸ್. ನಿಸಾರ್ ಅಹಮದ್ ಅವರ ಕೃತಿಗಳು

### ಕವನ ಸಂಗ್ರಹ

1. ಮನಸು ಗಾಂಧಿ ಬಜಾರು 1960
2. ನೆನೆದವರ ಮನದಲ್ಲಿ 1964
3. ಸುಮುಹೂರ್ತ 1967
4. ಸಂಜೆ ಐದರ ಮಳೆ 1970
5. ನಾನೆಂಬ ಪರಕೀಯ 1972
6. ನಿಸಾರ್ ಅಹಮದ್ ಅವರ ಆಯ್ದ ಕವಿತೆಗಳು 1974
7. ನಿತ್ಯೋತ್ಸವ 1976
8. ಸ್ವಯಂ ಸೇವೆಯ ಗಿಳಿಗಳು 1977
9. ಅನಾಮಿಕ ಆಂಗ್ಲರು 1982
10. ಬಹಿರಂತರ 1990
11. ಸಮಗ್ರ ಕವಿತೆಗಳು 1991
12. ನವೋಲ್ಲಾಸ 1994
13. ಆಕಾಶಕ್ಕೆ ಸರಹದ್ದುಗಳಿಲ್ಲ 1998
14. ಅರವತ್ತೈದರ ಐಸಿರಿ 2000
15. ಸಮಗ್ರ ಭಾವಗೀತೆಗಳು 2000
16. ಪ್ರಾತಿನಿಧಿಕ ಕವನಗಳು 2001

### ವಿಮರ್ಶೆ ಮತ್ತು ವಿಚಾರ ಸಾಹಿತ್ಯ

1. ಇದು ಬರಿ ಬೆಡಗಲ್ಲೋ ಅಣ್ಣ 1980
2. ಮನದೊಂದಿಗೆ ಮಾತುಕತೆ 1991
3. ಹಿರಿಯರು ಹರಸಿದ ಹೆದ್ದಾರಿ 1992

4. ಅಚ್ಚು ಮೆಚ್ಚು 1995

5. ವಿಚಾರ ವಿಹಾರ 1998

6. ಸಮಗ್ರ ಗದ್ಯ ಬರಹಗಳು 2002

**ಅನುವಾದ**

1. ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್ 1974

2. ಒಥೆಲ್ಲೋ 1977

3. ಹೆಜ್ಜೆ ಗುರುತು1981

4. ಬರೀ ಮರ್ಯಾದಸ್ಥರೆ 1983

(ಲ್ಯಾಟಿನ್ ಅಮೇರಿಕದ ಸ್ಪ್ಯಾನಿಷ್ ಕವಿ ಮತ್ತು ನೋಬೆಲ್ ಪ್ರಶಸ್ತಿ ವಿಜೇತ ಪಾಬ್ಲೊ ನೆರುಡನ ಪರಿಚಯ ಮತ್ತು 43 ಕವಿತೆಗಳ ಅನುವಾದ)

**ಮಕ್ಕಳ ಸಾಹಿತ್ಯ**

1. ಹಕ್ಕಿಗಳು1978

2. ಶಿಲೆಗಳು, ಖನಿಜಗಳು 1978

3. ಬರ್ಡ್ಸ್ 1978

4. ರಾಕ್ಸ್ ಆಂಡ್ ಮಿನರಲ್ಸ್ 1978

5. ಪುಟ್ಟ ಸಂತರು ಮತ್ತು ಕಲಿಗಳೂ 1978

**ಸಂಪಾದನೆ**

೧. ಅವಲೋಕನ

೨. Avalokana

೩. ಚಂದನ (ತ್ರೈಮಾಸಿಕ)

೪. Chandana (Qvarterly)

5. ದಶವಾರ್ಷಿಕ ಕವಿತೆಗಳು 1974–83

6. ದಶವಾರ್ಷಿಕ ವಿಮರ್ಶೆ 1974–83
7. ದಶವಾರ್ಷಿಕ ಪ್ರಬಂಧಗಳು 1974–83
8. ದಶವಾರ್ಷಿಕ ಸಣ್ಣ ಕಥೆಗಳು 1974–83
9. Ten Years of Kannada Poetry
10. ರತ್ನ ಸಂಪುಟ (ಮೈಸೂರು ವಿಶ್ವವಿದ್ಯಾಲಯ)
11. ಕವಿತೆಗಳು 1982
12. ಮಾಸ್ತಿಯವರ 'ಚಿಕವೀರ ರಾಜೇಂದ್ರ' ಒಂದು ವಿವೇಚನೆ